ಜಯಸತ್ಯಪ್ರಮೋದನಿಧಿಯ
ಮುಖಪತ್ರಿಕೆ

# ಶ್ರೀಸುಧಾ



2020
ಜುಲೈ
ಮಾಸಪತ್ರಿಕೆ

ಚತುರೆ ಶಬರಿಯಿತ್ತ ಬದರಿಯ ಫಲವನು
ಮುದದಿ ಸೇವಿಸಿದ ರಾಮ ಹರೇ





ಮೈಸೂರಿನ ವೆಂಕಟೇಶ್ವರ ಧ್ಯಾನ ಕೇಂದ್ರದಲ್ಲಿ ಲೋಕಕಲ್ಯಾಣಕ್ಕಾಗಿ
ಕ್ಷೀರಾಭಿಷೇಕ ಹಾಗೂ ಧನ್ವಂತರಿ ಹೋಮ













ದೇಶಾದ್ಯಂತ ವಿಧಿಸಲಾದ ಪ್ರತಿಬಂಧಾಜ್ಞೆಯ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದವರಿಗೆ
ಶ್ರೀಮಠ ಹಾಗೂ ವಿಶ್ವಮಧ್ವಮಹಾಪರಿಷತ್ತಿನ ವಿವಿಧ ಶಾಖೆಗಳಿಂದ ಸಹಾಯ ಹಸ್ತ.

# ಶ್ರೀಸುಧಾ

**SRISUDHA -- KANNADA --MONTHLY**


**-: ಸಂಸ್ಥಾಪಕರು :-**

**ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಉತ್ತರಾದಿಮಠಾಧೀಶರಾದ**
**ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸತ್ಯಪ್ರಮೋದತೀರ್ಥಶ್ರೀಪಾದಂಗಳವರು**

**-: ಪ್ರಧಾನ ಸಂರಕ್ಷಕರು :-**

**ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಉತ್ತರಾದಿಮಠಾಧೀಶರಾದ**
**ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರು**


**ಶ್ರೀಮತ್ಸತ್ಯಾತ್ಮತೀರ್ಥಾನಾಂ ಕರುಣಾರಸಪೋಷಿತಾ ।**
**ಸೇವ್ಯತಾಂ ರಸಿಕೈರ್ಮಾಧ್ವೈಃ ಶ್ರೀಸುಧಾ ಮಾಸಪತ್ರಿಕಾ ॥**


| | | |
|---|---|---|
| ಶಾರ್ವರೀ ನಾಮಸಂವತ್ಸರ | ಆಷಾಢ ಮಾಸ | ಜುಲೈ 2020 |

| ★ ಶ್ರೀಸುಧಾ ಸಂಪಾದಕೀಯ ಸಲಹಾ ಮಂಡಳಿ ★ | |
|---|---|
| ಪಂ. ರಾಮಾಚಾರ್ಯ ಕಟ್ಟಿ | ಪಂ. ರಂಗಾಚಾರ್ಯ ಗುತ್ತಲ |
| ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ | ಪಂ. ಮಧ್ವಾಚಾರ್ಯ ಮೊಖಾಶಿ |
| ಡಾ. ಪ್ರಭಂಜನಾಚಾರ್ಯ ವ್ಯಾಸನಕೆರೆ | ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ |

**ಗೌರವ ಸಂಪಾದಕರು : ಪಂ. ಜಯತೀರ್ಥಾಚಾರ್ಯ ಮಳಗಿ**

**ಸಂಪಾದಕರು : ಪಂ. ವಿದ್ಯಾಧೀಶಾಚಾರ್ಯ ಗುತ್ತಲ**

**ನಿರ್ವಹಣೆ : ಪಂ. ಕಾಂತೇಶಾಚಾರ್ಯ, ಪಂ.ಮಹಿದಾಸಾಚಾರ್ಯ, ಶ್ರೀ ಎ.ಬಿ.ಶ್ಯಾಮಾಚಾರ್ಯ**

| ★ ಜಯಸತ್ಯಪ್ರಮೋದನಿಧಿಯ ಧರ್ಮದರ್ಶಿಮಂಡಲಿ ★ | |
|---|---|
| ಡಾ॥ ಎಂ.ಎಂ.ಜೋಶಿ, ಅಧ್ಯಕ್ಷರು | ಶ್ರೀ. ವೆಂಕಟರಾವ್, ಕಾರ್ಯದರ್ಶಿ |
| ಶ್ರೀ. ಎನ್.ಬಿ.ಹೆಚ್.ಕುಲಕರ್ಣಿ | ಶ್ರೀ. ಟಿ.ಎಸ್.ರಾಘವೇಂದ್ರನ್ |

| | | |
|---|---|---|
| ಸಂಪುಟ 69 | ಮುಖಪುಟ – ಚಿತ್ರವಿನ್ಯಾಸ | ಸಂಪುಟ 24 |
| ಸಂಚಿಕೆ 04 | ಶ್ರೀ .ಕೆ.ಎಮ್.ಶೇಷಗಿರಿ | ಸಂಚಿಕೆ 07 |

## ವಿಷಯಾನುಕ್ರಮಣಿಕಾ


| | | | |
|---|---|---|---|
| 1. | ಶ್ರುತಿಸುಧಾ/ವ್ಯಾಸಸುಧಾ/ದಾಸಸುಧಾ | | 3 |
| 2. | ಶ್ರೀಸತ್ಯಾತ್ಮವಾಣಿ | ✍ ಡಾ. ಕಾಂತೇಶಾಚಾರ್ಯ ಕದರಮಂಡಲಗಿ | 4 |
| 3. | ನುಡಿಮುತ್ತು | ✍ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ | 8 |
| 4. | ಋಷಿವಂದನೆ - 32 | ✍ ಪಂ. ಶ್ರೀನಿವಾಸಾಚಾರ್ಯ ನಾಗರಹಳ್ಳಿ | 11 |
| 5. | ನವವಧುವಿಗೆ ಕಿವಿಮಾತು - 8 | ✍ ಪಂ. ಆತ್ರೇಯ ಪ್ರಹ್ಲಾದ | 15 |
| 6. | ಲಕ್ಷ್ಮೀನರಸಿಂಹಾತ್ಮಕ ವಿಶೇಷಣದ ಔಚಿತ್ಯ | ✍ ಪಂ. ಸಗ್ರಿ ರಾಘವೇಂದ್ರಾಚಾರ್ಯ | 19 |
| 7. | ವಿಷ್ಣುಸಹಸ್ರನಾಮ | ✍ ಪಂ. ಪದ್ಮನಾಭಾಚಾರ್ಯ ಚಿಟಗುಪ್ಪ | 21 |
| 8. | ಮನಸ್ಸನ್ನು ಅಜ್ಞಾನ ಆಕ್ರಮಸದಿರಲು.. | ✍ ಡಾ. ವೆಂಕಟಗಿರೀಶಾಚಾರ್ಯ ದಾವಣಗೇರಿ | 24 |
| 9. | ಶ್ರೀಮದಕ್ಷೋಭ್ಯತೀರ್ಥರು | ✍ ಪಂ. ವಾದಿರಾಜಾಚಾರ್ಯ ಕರಣಂ | 27 |
| 10. | ಹಬ್ಬ-ಹರಿದಿನಗಳು - 26 | ✍ ಡಾ. ವೆಂಕಟೇಶಾಚಾರ್ಯ ಬಿ.ಆರ್ | 29 |
| 11. | ತೀರ್ಥ-ಕ್ಷೇತ್ರಗಳ ಮಹಿಮೆ | ✍ ಪಂ. ಪುರಂದರಾಚಾರ್ಯ ಹಯಗ್ರೀವ | 32 |
| 12. | ಹರಿದಾಸರ ಜನಪರ ದೃಷ್ಟಿ -4 | ✍ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ | 35 |
| 13. | ಸಂಧ್ಯಾವಂದನೆ - 8 | ✍ ಡಾ. ರಾಘವೇಂದ್ರಾಚಾರ್ಯ ರಾಚೂರಿ | 39 |
| 14. | ಶ್ರೀಮನ್ಮಧ್ವಾಚಾರ್ಯರ ಕಾಲನಿರ್ಣಯ | ✍ ಶ್ರೀ ಆನಂದತೀರ್ಥ ವಡವಿ | 44 |
| 15. | ಹಣಕ್ಕಾಗಿ ಹೆಣವಾಗಬಾರದು | ✍ ಪಂ. ಪ್ರವೀಣಾಚಾರ್ಯ.ಹುನಗುಂದ | 47 |
| 16. | ಚಾತುರ್ಮಾಸ್ಯದ ನೂರೊಂದು.... | ✍ ಪಂ. ಪ್ರಮೋದಾಚಾರ್ಯ ಪೂಜಾರ | 49 |


### ಶ್ರೀಜಯತೀರ್ಥವಿದ್ಯಾಪೀಠಕ್ಕೆ ಪ್ರವೇಶಾವಕಾಶ

ಪ್ರತಿವರ್ಷದಂತೆ ಈ ವರ್ಷವು ದಿನಾಂಕ- 24 .5 .2020ರ ಜ್ಯೇಷ್ಠ ಶುದ್ಧ ಬಿದಿಗೆಯಂದು ಜಯತೀರ್ಥವಿದ್ಯಾಪೀಠದ ಈ ವರ್ಷದ ಪಾಠಗಳು ಆರಂಭವಾಗಿವೆ. ಆರಂಭದಲ್ಲಿ ಅನಿವಾರ್ಯಕಾರಣಗಳಿಂದ ಆಧುನಿಕ ತಂತ್ರಜ್ಞಾನದ ಮೂಲಕ ಆನ್‌ಲೈನ್ ಪಾಠಗಳನ್ನು ನಡೆಸುವ ಅನಿವಾರ್ಯತೆ ಇದೆ. ವಾತಾವರಣ ತಿಳಿಯಾದ ನಂತರ ಮತ್ತೆ ಪ್ರತ್ಯಕ್ಷ ಪಾಠಗಳನ್ನು ವಿದ್ಯಾಪೀಠದಲ್ಲಿ ಪ್ರಾರಂಭಿಸಲು ನಿಶ್ಚಯಿಸಲಾಗಿದೆ. ಈ ಮೂಲಕ ತಮ್ಮಲ್ಲಿ ತಿಳಿಸುವ ವಿಷಯವೇನೆಂದರೆ– ಮೇ ತಿಂಗಳ ಆರಂಭದಿಂದ ಹೊಸ ವಟುಗಳನ್ನು ವಿದ್ಯಾಪೀಠಕ್ಕೆ ಸೇರಿಸುವುದಕ್ಕೆ ಅವಕಾಶವಿದೆ. ಇಲ್ಲಿಗೆ ಬಂದು ನೋಂದಾಯಿಸಿ ವಿದ್ಯಾರ್ಥಿಗಳನ್ನು ಬಿಡುವದು ಈಗ ಕಷ್ಟ. ಆದ ಕಾರಣ ಆಸಕ್ತರು ಮಾಧ್ವವಿದ್ಯಾರ್ಥಿಗಳು ಅಥವಾ ಪಾಲಕರು ಕೆಳಕಂಡ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ, ಪ್ರವೇಶಪತ್ರವನ್ನು ವಾಟ್ಸಪ್ ಮೂಲಕ ಪಡೆದು, ಭರ್ತಿ ಮಾಡಿ, ವಿದ್ಯಾರ್ಥಿಯ ಫೋಟೋ ಕಳುಹಿಸಿ ಜಯತೀರ್ಥ ವಿದ್ಯಾಪೀಠಕ್ಕೆ ಪ್ರವೇಶವನ್ನು ಪಡೆಯಬಹುದಾಗಿದೆ. ವಾತಾವರಣ ತಿಳಿಯಾಗುವವರೆಗೆ ನೂತನ ವಿದ್ಯಾರ್ಥಿಗಳಿಗೂ ಆನ್‌ಲೈನ್ ಮೂಲಕ ಪಾಠವನ್ನು ಪ್ರಾರಂಭಿಸುವ ನಿಶ್ಚಯವನ್ನು ಮಾಡಿದ್ದೇವೆ. ವಾತಾವರಣ ತಿಳಿಯಾದ ಮೇಲೆ ತಮ್ಮಅರ್ಜಿಯನ್ನು ಪುನಃ ಪರಿಶೀಲಿಸಿ ವಿದ್ಯಾಪೀಠದಲ್ಲಿ ಪಾಠವನ್ನು ಪ್ರಾರಂಭ ಮಾಡುತ್ತೇವೆ.

**ನೋಂದಣಿ ಮಾಡಲು ಮತ್ತು ಮುಕ್ತವಾಗಿ ಮಾತನಾಡಲು ಕರೆಮಾಡಿ -9448923346.**

## ...ಶ್ರುತಿಸುಧಾ...

**ಅಕ್ಷೇರ್ಮಾದಿವ್ಯಃ ಕೃಷಿಮಿತ್ ಕೃಷಸ್ವ । ವಿತ್ತೇಶಮಸ್ವ ಬಹುಮನ್ಯಮಾನಃ । ತತ್ರ ಗಾವಃ ರೇತವ ತತ್ರ ಜಾಯಾ । ತನ್ಮೇ ವಿಚಷ್ಟೇ ಸವಿತಾಯವರ್ಯಃ ॥** - ಋಗ್ವೇದ(10-14-13)

ಎಲೈ ಮಾನವ ! ಎಂದಿಗೂ ಲೆತ್ತ ಜೂಜು ಮೊದಲಾದವನ್ನಾಡದೆ ಕೃಷಿಯನ್ನಾದರೂ ಮಾಡು. ಭಗವಂತ ಕೊಟ್ಟದರಲ್ಲಿ ಸಂತೃಪ್ತನಾಗು. ದೊರೆತದ್ದೇ ಭಾಗ್ಯವೆನ್ನು. ಆಕಳುಗಳನ್ನು ರಕ್ಷಿಸು. ಮಡದಿಯನ್ನು ಬಿಟ್ಟು ಅನ್ಯರನ್ನು ಬಯಸದಿರು.

~~~~~~~~~~~~~~~~~~

## ... ವ್ಯಾಸಸುಧಾ ...

**ಗರ್ಭೇ ವ್ಯಾಧೌ ಶ್ಮಶಾನೇ ಚ ಪುರಾಣೇ ಯಾ ಮತಿರ್ಭವೇತ್ ।**
**ಸಾ ಯದಿ ಸ್ಥಿರತಾಂ ಯಾತಿ ಕೋ ನ ಮುಚ್ಯೇತ ಬಂಧನಾತ್ ॥**

- ಗರುಡಪುರಾಣ. (6-25)

ಮನುಷ್ಯ ತಾಯಿಯ ಗರ್ಭದಲ್ಲಿರುವಾಗ, ರೋಗ-ರುಜಿನಾದಿಗಳಿಂದ ನರಳುತ್ತಿರುವಾಗ, ಬಂಧು-ಬಾಂಧವರು ದೇಹವನ್ನು ಶ್ಮಶಾನದಲ್ಲಿ ನೋಡುತ್ತಿರುವಾಗ, ವೈರಾಗ್ಯ ಬರುವ ಪುರಾಣಶ್ರವಣ ಮಾಡುವಾಗ, ಮನಸ್ಸಿನಲ್ಲಿ ಬರುವ ಭಾವನೆಗಳು ಸದಾ ಮನಸ್ಸಿನಲ್ಲಿದ್ದರೆ ಯಾವನು ತಾನೇ ಮೋಕ್ಷ ಪಡೆಯಲಾರ ?

~~~~~~~~~~~~~~~~~~

## ದಾಸಸುಧಾ

**ಹರಿನಾಮಕ್ಕೆ ಹರಿದಾಸರು ಕರಗುವರಲ್ಲದೆ**
**ನರಕಭಾಜನರು ಅಲ್ಪಮೂಢರು ಕರಗುವರೇ**
**ಗುರುಹಿರಿಯರಿಗೆರಗದವಗೆ ಹರಿಭಕುತಿ ಸೊಗಸುವದೆ**
**ಕೆರಹು ಲೆಂಬ ನಾಯಿಗೆ ತುಪ್ಪ ಸಕ್ಕರೆ ಸೊಗಸುವದೆ**
**ಚಂದ್ರ ಕಿರಣಕ್ಕೆ ಚಂದ್ರಕಾಂತ ವಸರುವದಲ್ಲದೆ**
**ಉರಗಲ್ಲು ವಸರುವದೆ ಸಿರಿಕೃಷ್ಣ ॥** - **ಶ್ರೀವ್ಯಾಸರಾಜರು**




*Gift your relative with a surprise*
*Sri Sudha Subscription*



# ವಿದ್ವತ್ಕುಲಚಕ್ರವರ್ತಿ ಶ್ರೀಮಟ್ಟೀಕಾಕೃತ್ಪಾದರು

✍ ಡಾ. ಕಾಂತೇಶಾಚಾರ್ಯ ಕದರಮಂಡಲಗಿ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸರ್ವಮೂಲ ಗ್ರಂಥಗಳು ಅವು ಬಹುದೊಡ್ಡ ಜ್ಞಾನಭಂಡಾರ. ನಿತ್ಯದಲ್ಲಿ ಮಾಡಬೇಕಾದ ಅನುಷ್ಠಾನಗಳು, ಉಪಾಸನೆಗಳು, ತಿಳಿಯಬೇಕಾದ ಸಾವಿರಾರು ಪ್ರಮೇಯಗಳು, ಅಳವಡಿಸಿಕೊಳ್ಳಬೇಕಾದ ಅನುಸಂಧಾನಗಳು ಹೀಗೆ ಆಚಾರ್ಯರು ತಮ್ಮ ಗ್ರಂಥಗಳಲ್ಲಿ ತಿಳಿಸಿರುವ ವಿಷಯ ಒಂದೇ ಎರಡೇ ! ಶ್ರೀಮದಾಚಾರ್ಯರು ತಾವು ಬರೆದ ಸರ್ವಮೂಲಗಳ ಬಗ್ಗೆ ಸ್ವತಃ ತಾವೇ ವಿವರಣೆ-ಪ್ರವಚನ ನೀಡುತ್ತಿದ್ದರೆ ಎದುರಿಗೆ ಕುಳಿತು ಕೇಳುತ್ತಿದ್ದ ಶಿಷ್ಯರಿಗೆ ಅದೆಂತಹ ಆನಂದವಾಗಲಿಕ್ಕಿಲ್ಲ ?

ಆಚಾರ್ಯರು ತಮ್ಮ ವಿಚಾರಧಾರೆಗಳನ್ನು ಪದ್ಮನಾಭತೀರ್ಥಾದಿ ಪ್ರತ್ಯಕ್ಷಶಿಷ್ಯರಿಗೆ ವಿವರಿಸಿ ತಿಳಿಸಿದರೇನೋ ನಿಜ. ಆದರೆ ಅದು ವ್ಯಾಖ್ಯಾನರೂಪದಲ್ಲಿ ದಾಖಲಾಗದಿದ್ದರೆ ಆಚಾರ್ಯರ ಆ ಎಲ್ಲ ವಿಚಾರಧಾರೆಗಳು ಸೀಮಿತಶಿಷ್ಯರಿಗೆ ಮಾತ್ರ ಸೀಮಿತವಾಗುತ್ತಿತ್ತು ! ಹಾಗಾಗಿದ್ದರೆ ಇಂದು ಸಮಸ್ತ ಸಜ್ಜನರೂ ತತ್ವಜ್ಞಾನವಂಚಿತರಾಗಿ ಉಳಿಯಬೇಕಾಗಿತ್ತು ! 'ಜ್ಞಾನಾರ್ಥಮೇವ ಯದಭೂತ್ ಅಸುದೇವ ಏಷಃ' ಸಕಲ ಸಜ್ಜನರಿಗೂ ತತ್ವಜ್ಞಾನ ಮುಟ್ಟಬೇಕೆಂಬುದು ಆಚಾರ್ಯರ ಆಶಯ. ಅನ್ನುವುದಕ್ಕಾಗಿಯೇ ಸರ್ವಮೂಲಗಳ ರಚನೆ. ಹಾಗಾಗಿ ಆಚಾರ್ಯರು ತಮ್ಮ ಎಲ್ಲ ವಿಚಾರಗಳನ್ನೂ ವ್ಯಾಖ್ಯಾನರೂಪದಲ್ಲಿ ಪ್ರತಿಯೊಬ್ಬ ಜಿಜ್ಞಾಸುವಿಗೂ ಮುಟ್ಟಿಸುವ ಗುರುತರ ಜವಾಬ್ದಾರಿಯನ್ನು ಶ್ರೀಜಯತೀರ್ಥರಿಗೆ ಒಪ್ಪಿಸಿ, "ನಿಶ್ಚಿಂತ ಇವ ವರ್ತತೇ" ಗುರು ವ್ಯಾಸರ ಸನ್ನಿಧಿಯಲ್ಲಿ ನಿಶ್ಚಿಂತರಾಗಿ ಕುಳಿತರು.

''ವ್ಯಾಖ್ಯಾಸ್ಯತ್ಯೇಷ ಗೋರಾಟ್'' ಎಂಬ ಆಚಾರ್ಯರ ಆದೇಶವನ್ನು ಶಿರಸಾ ವಹಿಸಿ, ಸರ್ವಮೂಲಗಳ ಸರ್ವತೋಮುಖ ವ್ಯಾಖ್ಯಾನವನ್ನು ಮಾಡಲಿಕ್ಕಾಗಿಯೇ ಭುವಿಗಿಳಿದುಬಂದ ಭವ್ಯಚೇತನ ಶ್ರೀಜಯತೀರ್ಥರು.

**ಭೋಸ್ತ್ವಂ ಶ್ರೀಸುಖತೀರ್ಥತೀರ್ಥಮತುಲಂ ಟೀಕಿಷ್ಯಸೇಽನುಗ್ರಹಾತ್**
**ತಸ್ಯೈವೇಹ ಸುಧಾಂ ಪ್ರದಾಸ್ಯಸಿ ಜನೇ ಯೋಗ್ಯೇ ದಿವೀಂದ್ರೋ ಯಥಾ ।**
**ಆದಿಷ್ಟೋ ಗುರುಣಾ ಜಯೇತಿ ಗದಿತಸ್ತ್ರ್ಯಷ್ಟಾದಶಗ್ರಂಥಕೃತ್ .......**

ಆಚಾರ್ಯರ ಆಂತರಿಕ ಅಭಿಪ್ರಾಯಗಳನ್ನು, ವಿವಕ್ಷಿತ ವಿಚಾರಗಳನ್ನು ಸುಧಾದಿಗ್ರಂಥಗಳ ಮೂಲಕ ಸಮರ್ಪಕರೀತಿಯಲ್ಲಿ ಸರ್ವರಿಗೂ ತಲುಪಿಸಿದ ಧೀಮಂತ ಸಂತರು ಶ್ರೀಮಟ್ಟೀಕಾಕೃತ್ಪಾದರು. ಸ್ವರ್ಗದ ಸುರರಿಗೆ ಸುರೇಂದ್ರ ಸುಧೆಯನುಣಿಸುವಂತೆ,

ಭೂಸುರರಿಗೆ ಸುಧೆಯ ಸವಿಯನುಣಿಸಿದ ಸುರೇಂದ್ರರು. ಸುಖತೀರ್ಥರ ಸರ್ವಮೂಲಗಳಿಗೆ ಅನ್ಯೂನಅನತಿಕ್ರಮರೀತಿಯಲ್ಲಿ ಅನಿತರಸಾಧಾರಣ ಟೀಕೆಗಳನ್ನು ವಿರಚಿಸಿ 'ಟೀಕಾಚಾರ್ಯ' ರೆಂದೇ ಪ್ರಖ್ಯಾತರಾದ ಪ್ರತಿಭಾಶಾಲಿಗಳು.

ಶ್ರೀಜಯತೀರ್ಥರು ಸಂಚಾರಕ್ರಮದಿಂದ ತಕ್ಷಶಿಲಾಕ್ಕೆ ಹೋದಾಗ ಅಲ್ಲಿನ ವಿಶ್ವವಿದ್ಯಾಲಯಕ್ಕೆ ಕೆಲವು ಕಾಲ ಕುಲಪತಿಗಳಾದರು. ವಿಶ್ವವಿದ್ಯಾಲಯದ ಸಮಗ್ರ ಗ್ರಂಥಭಂಡಾರವನ್ನೂ ತಮ್ಮ ಬುದ್ಧಿಭಂಡಾರದಲ್ಲಿ ಇರಿಸಿಕೊಂಡರು. ಹಾಗಾಗಿ ಯರಗೋಳದ ಗುಹೆಯಲ್ಲಿ ಕುಳಿತು ಎಲ್ಲ ಮತಗಳ ವಿಷಯಗಳನ್ನೂ ವಿಮರ್ಶೆಗೊಳಪಡಿಸಿ, 'ಶ್ರೀಮನ್ನ್ಯಾಯಸುಧಾ' 'ತತ್ವಪ್ರಕಾಶಿಕಾ' ಮುಂತಾದ ಮೇರುಕೃತಿಗಳನ್ನೊಳಗೊಂಡ 21 ಅದ್ಭುತ ಗ್ರಂಥಗಳನ್ನು ರಚಿಸಿದರು.

ಅನ್ನುವುದಕ್ಕಾಗಿಯೇ ಶ್ರೀಮಟ್ಟೀಕಾಕೃತ್ಪಾದರ ಬಗ್ಗೆ ಒಂದು ಮಹತ್ವದ ಮಾತಿದೆ -

**ಮಿಥೋ ವಿಶೇಷೋ ನ ವಿದಾಂ ಬಭೂವ ವಿದ್ಯಾಪ್ರತೀತೇ ಜಯತೀರ್ಥಭಿಕ್ಷೌ ।**
**ಖದ್ಯೋತಚಂದ್ರಗ್ರಹತಾರಕಾಣಾಂ ಪ್ರದ್ಯೋತನೇ ಜಾಗ್ರತಿ ಕೋ ವಿಶೇಷಃ ॥**

ಬೆಳಕಿನ ಹುಳದ ಪ್ರಕಾಶ ಅಲ್ಪ, ಅದಕ್ಕಿಂತ ಬಲ್ಪ್‌ಗಳ ಪ್ರಕಾಶ ಜಾಸ್ತಿ, ಅದಕ್ಕಿಂತ ನಕ್ಷತ್ರಗಳ ಪ್ರಕಾಶ ಜಾಸ್ತಿ, ಅದಕ್ಕಿಂತ ಗ್ರಹಗಳ ಪ್ರಕಾಶ ಇನ್ನೂ ಜಾಸ್ತಿ, ಅದಕ್ಕಿಂತಲೂ ಚಂದ್ರನ ಪ್ರಕಾಶ ಇನ್ನೂ ಜಾಸ್ತಿ, ಹೀಗೆ ಪ್ರಕಾಶಮಯಪದಾರ್ಥಗಳ ಮಧ್ಯದಲ್ಲಿ ತಾರತಮ್ಯವನ್ನು ತಿಳಿಯುತ್ತೇವೆ. ಯಾವಾಗ ? ರಾತ್ರಿವೇಳೆಯಲ್ಲಿ ಆ ತಾರತಮ್ಯ ಸ್ಫುಟವಾಗಿ ತಿಳಿಯುತ್ತದೆ. ಆದರೆ ಬೆಳಿಗ್ಗೆ ಸೂರ್ಯನ ಉದಯವಾದ ನಂತರ ಈ ತಾರತಮ್ಯ ತಿಳಿಯಲು ಸಾಧ್ಯವಿಲ್ಲ. ಕಾರಣ ಸೂರ್ಯೋದಯವಾದರೆ ಬೆಳಕಿನಹುಳ, ಬಲ್ಪ್, ನಕ್ಷತ್ರಗಳು ಇದಾವುದರ ಬೆಳಕೂ ನಮ್ಮ ಕಣ್ಣಿಗೆ ಕಾಣಿಸುವುದೇ ಇಲ್ಲ. ಸೂರ್ಯನ ಪ್ರಕಾಶದ ಮುಂದೆ ಈ ಎಲ್ಲ ಪ್ರಕಾಶಗಳೂ ಮಂದವೇ.

ಅದರಂತೆ ಇವರು ಪಂಡಿತರು, ಇವರು ಮಹಾಪಂಡಿತರು, ಇವರು ಎರಡು-ಮೂರು ಶಾಸ್ತ್ರಗಳಲ್ಲಿ ಪಂಡಿತರು, ಇವರು ಚತುಃಶಾಸ್ತ್ರಪಂಡಿತರು, ಹೀಗೆಲ್ಲ ವಿಭಾಗ ಮಾಡಿಟ್ಟು ಕೊಂಡಿದ್ದರಂತೆ. ಅದು ಎಲ್ಲಿಯವರೆಗೆ? ಶ್ರೀಮಟ್ಟೀಕಾಕೃತ್ಪಾದರ ಅವತಾರ ವಾಗುವವರೆಗೆ. ಯಾವಾಗ ಶ್ರೀಮಟ್ಟೀಕಾಕೃತ್ಪಾದರ ಮಹಾಪಾಂಡಿತ್ಯದ ಪ್ರಸಿದ್ಧಿ ಎಲ್ಲಕಡೆಗೆ ಹರಡಿತೋ ಆಗ ಯಾರು ಸಣ್ಣಪಂಡಿತರು, ಯಾರು ದೊಡ್ಡ ಪಂಡಿತರು ಅನ್ನುವ ವ್ಯತ್ಯಾಸವೇ ಉಳಿಯಲಿಲ್ಲವಂತೆ ! ಎಲ್ಲ ಪಂಡಿತರೂ ಒಂದುಕಡೆಯಾದರೆ, ಶ್ರೀಮಟ್ಟೀಕಾಕೃತ್ಪಾದರು ಮತ್ತೊಂದುಕಡೆ. ಅಷ್ಟು ಶ್ರೀಮಟ್ಟೀಕಾಕೃತ್ಪಾದರ ಪಾಂಡಿತ್ಯ ಲೋಕದಲ್ಲಿ ಪ್ರಭಾವಿತವಾಗಿದೆ ಎಂದು ತಿಳಿಸುತ್ತಾರೆ. ಇದು ಶ್ರೀಮಟ್ಟೀಕಾಕೃತ್ಪಾದರ ವಿದ್ವತ್ತು.

ನೋಡಿ ! ಶ್ರೀಮಟ್ಟೀಕಾಕೃತ್ಪಾದರ ಅದ್ಭುತವಾದ ವಿದ್ವತ್ತು ಒಂದೆಡೆಯಾದರೆ, ಮತ್ತೊಂಡೆಡೆ ಅವರ ವಿದ್ಯೆಗೆ ತಕ್ಕ ವಿನಯವೂ ಬಹಳ ಆದರ್ಶವಾದದ್ದು.

ಅನೇಕವಿಧದ ಮದಗಳಲ್ಲಿ ವಿದ್ಯಾಮದವೂ ಒಂದು. ಮನುಷ್ಯನಿಗೆ ಕಲಿತ ವಿದ್ಯೆ ಸ್ವಲ್ಪವಿದ್ದರೂ ನಾನು ದೊಡ್ಡ ಪಂಡಿತನೆಂಬ ಅಹಂಕಾರ ಮುಗಿಲೆತ್ತರಕ್ಕಿರುತ್ತದೆ. ಆದರೆ, ಸ್ತ್ರೀ ಪುರುಷನಿಂದ ಶೋಭಿಸುವಂತೆ, "ವಿದ್ಯಾ ವಿನಯೇನ ಶೋಭತೇ" ವಿದ್ಯೆಯೆಂಬ ಸ್ತ್ರೀ ವಿನಯವೆಂಬ ಪುರುಷನಿಂದ ಸಹಿತವಾದಾಗ ಮಾತ್ರ ಅದಕ್ಕೆ ಶೋಭೆ.

ವಿದ್ವತ್ಕುಲಚಕ್ರವರ್ತಿಗಳಾದ, ಮೇಧಾವಿಮೂರ್ಧನ್ಯರಾದ ಶ್ರೀಮಟ್ಟೀಕಾಕೃತ್ಪಾದರು ತಮ್ಮ ಮೇರುಕೃತಿ ನ್ಯಾಯಸುಧೆಯಲ್ಲಿ ಹೇಳುವ ಮಾತು ಎಲ್ಲರಿಗೂ ನಿಜಕ್ಕೂ ದೊಡ್ಡ ಆದರ್ಶವಾಗಿದೆ -

**ನ ಶಬ್ದಾಬ್ಧೌ ಗಾಢಾ ನ ಚ ನಿಗಮಚರ್ಚಾಸು ಚತುರಾಃ ।**
**ನ ಚ ನ್ಯಾಯೇ ಪ್ರೌಢಾ ನ ಚ ವಿದಿತವೇದ್ಯಾ ಅಪಿ ವಯಮ್ ॥**

'ನ ಶಬ್ದಾಬ್ದೌ ಗಾಢಾಃ' "ಚಿತ್ರೈಃ ಪದೈಶ್ಚ ಗಂಭೀರೈಃ" ಎಂಬುದಾಗಿ ಶ್ರೀವ್ಯಾಸರಾಜರು ಸ್ತುತಿಸಿದಂತೆ, ಶ್ರೀಮಟ್ಟೀಕಾಕೃತ್ಪಾದರ ವಾಕ್ಯರಚನೆಯೇ ಅತ್ಯಂತ ಮನೋಹರವಾದದ್ದು. ಒಮ್ಮೆ ಬಳಸಿದ ಶಬ್ದಗಳನ್ನು ಮತ್ತೊಮ್ಮೆ ಬಳಸುವುದಿಲ್ಲ. ಅದಕ್ಕೆ ಪರ್ಯಾಯಶಬ್ದವನ್ನೇ ಬಳಸುತ್ತಾರೆ. ಅನೇಕ ಗ್ರಂಥಕಾರರು ಸುಲಲಿತವಾದ ವಾಕ್ಯಸಂಯೋಜನೆಗಳನ್ನೊಳಗೊಂಡ, ಸುಂದರವಾದ ಗ್ರಂಥಗಳನ್ನು ಬರೆಯಲು ಸಾಧ್ಯವಾದದ್ದು ಶ್ರೀಮಟ್ಟೀಕಾಕೃತ್ಪಾದರ ಗ್ರಂಥಗಳನ್ನು ನಿರಂತರ ಓದಿದ ಫಲಶ್ರುತಿ ಎಂದರೆ, ಆ ಶ್ರೀಮಟ್ಟೀಕಾಕೃತ್ಪಾದರ ಗ್ರಂಥಗಾಂಭೀರ್ಯ, ಪದಲಾಲಿತ್ಯ, ಶಬ್ದಭಂಡಾರ ಎಷ್ಟಿರಬೇಕು ? ಊಹಿಸಿ ! ಇಂತಹ ಅಗಾಧ ಶಬ್ದಖನಿಯಾಗಿರುವ ಶ್ರೀಮಟ್ಟೀಕಾಕೃತ್ಪಾದರು ಹೇಳುವ ಮಾತು - "ನ ಶಬ್ದಾಬ್ಧೌ ಗಾಢಾಃ" 'ನಮಗೆ ವ್ಯಾಕರಣದ ಪರಿಚಯವಿಲ್ಲ. ಪದ-ಶಬ್ದಗಳ ಪಾಂಡಿತ್ಯವಿಲ್ಲ' ಎಂದು.

**'ನ ಚ ವಿದಿತವೇದ್ಯಾ ಅಪಿ ವಯಮ್'**

ಶ್ರೀಮಟ್ಟೀಕಾಕೃತ್ಪಾದರು ತಮ್ಮ ಗ್ರಂಥಗಳಲ್ಲಿ ಪ್ರಸ್ತುತಪಡಿಸದ ಪ್ರಮೇಯಗಳಿಲ್ಲ. ವಿಮರ್ಶಿಸದ ವಿಚಾರಗಳಿಲ್ಲ. ಪ್ರತಿಯೊಂದು ವಿಷಯದ ಕುರಿತಾಗಿಯೂ ನ್ಯಾಯ, ವೈಶೇಷಿಕ, ಪ್ರಾಭಾಕರ, ಭಾಟ್ಟ, ಅದ್ವೈತ, ವಿಶಿಷ್ಟಾದ್ವೈತ, ಸಾಂಖ್ಯ, ಬೌದ್ಧ, ಜೈನ, ಚಾರ್ವಾಕ ಹೀಗೆ ಎಲ್ಲ ಸಿದ್ಧಾಂತಗಳನ್ನೂ ವಿಮರ್ಶೆಗೆ ಒಳಪಡಿಸಿ, ವ್ಯಾಪಕವಾಗಿ ತಲಸ್ಪರ್ಶಿಯಾಗಿ ಕೂಲಂಕುಷವಾಗಿ ಚರ್ಚೆ ಮಾಡಿ ನಿರ್ಣಯ ಮಾಡುವ ಅದ್ಭುತ ವಿಮರ್ಶಕರು.

ಇಂತಹ ಸಕಲಶಾಸ್ತ್ರವಿಚಕ್ಷಣರಾದ ಶ್ರೀಮಟ್ಟೀಕಾಕೃತ್ಪಾದರು ನುಡಿಯುವ ನುಡಿ - "ನ ಚ ವಿದಿತವೇದ್ಯಾ ಅಪಿ ವಯಮ್" 'ನಮಗೆ ಎಲ್ಲ ಶಾಸ್ತ್ರಗಳ ಪರಿಚಯವಿಲ್ಲ. ನಾವು ಎಲ್ಲವನ್ನೂ ತಿಳಿದವರಲ್ಲ'

**‘ನ ಚ ನಿಗಮಚರ್ಚಾಸು ಚತುರಾಃ’**


ಸ್ವಾರಸ್ಯವೆಂದರೆ, ಭೇದ-ಅಭೇದಗಳ ವಾಕ್ಯಾರ್ಥ ನಡೆದಾಗ, ಭೇದವಿಷಯದಲ್ಲಿ ಏನು ಪ್ರಮಾಣ ? ಎಂದು ಕೇಳಿದರೆ, ಆಚಾರ್ಯರು ಸರ್ವಸಮ್ಮತವಾದ ಶ್ರುತಿವಾಕ್ಯಗಳನ್ನು ಉದಾಹರಿಸದೇ, ‘ಭೇದಪರವೋ ? ಅಭೇದಪರವೋ ?' ಎಂಬುದಾಗಿ ಯಾವ ಶ್ರುತಿವಾಕ್ಯ ಸಂದಿಗ್ಧವಾಗಿದೆ ಅಂತಹ ಸಂದಿಗ್ಧವಾಕ್ಯವನ್ನೇ ಭೇದಪರವಾಗಿ ಉದಾಹರಿಸುತ್ತಾರೆ ಆಚಾರ್ಯರು. ಆದರೆ ಹಾಗೆ ಸಂದಿಗ್ಧವಾದ ಶ್ರುತಿವಾಕ್ಯವನ್ನು ಉದಾಹರಿಸಿದಾಗ, ಸುದೀರ್ಘವಾಗಿ ಅದರ ಚರ್ಚೆ ಮಾಡಿ, ಉಪಕ್ರಮ-ಉಪಸಂಹಾರಾದಿಗಳಿಂದ, ಅಕಾಟ್ಯವಾದ ಯುಕ್ತಿಗಳಿಂದ ‘ಅದು ಭೇದಪರವೇ ಆಗಿದೆ' ಎಂದು ಸಮರ್ಥನೆ ಮಾಡಿ, ಆಚಾರ್ಯರ ಮಾತನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ಶ್ರೀಮಟ್ಟೀಕಾಕೃತ್ಪಾದರು ನಿರ್ವಹಿಸುತ್ತಾರೆ. ಶ್ರೀಮನ್ನ್ಯಾಯಸುಧಾ, ತತ್ವಪ್ರಕಾಶಿಕಾ, ವಿಷ್ಣುತತ್ವವಿನಿರ್ಣಯಟೀಕಾ, ತತ್ತ್ವೋದ್ಯೋತಟೀಕಾ ಮುಂತಾದ ಗ್ರಂಥಗಳಲ್ಲಿ ಶ್ರೀಮಟ್ಟೀಕಾಕೃತ್ಪಾದರ ಶ್ರುತಿವಾಕ್ಯಾರ್ಥ-ಕೌಶಲದ ವಿರಾಡ್ರೂಪವನ್ನು ಕಾಣುತ್ತೇವೆ. ಇಂತಹ ಅಸಾಮಾನ್ಯವಾಕ್ಯಾರ್ಥಚತುರರಾದ ಶ್ರೀಮಟ್ಟೀಕಾಕೃತ್ಪಾದರು ಹೇಳವ ಮಾತು -

**''ನ ಚ ನಿಗಮಚರ್ಚಾಸು ಚತುರಾಃ, ನ ಚ ನ್ಯಾಯೇ ಪ್ರೌಢಾಃ''**

''ನಾವು ವಾಕ್ಯಾರ್ಥ ಮಾಡುವ ಚತುರರಲ್ಲ, ನಮಗೆ ನ್ಯಾಯಶಾಸ್ತ್ರದಲ್ಲಿ ಪ್ರೌಢಿಮೆ ಇಲ್ಲ''. ನೋಡಿ ! ಅದೆಂತಹ ವಿನಯ !!

ಕಲಿತ ಅಲ್ಪ ಸ್ವಲ್ಪ ವಿದ್ಯೆಗೇ “ನನಗೆ ಸಮರಾದ ಪಂಡಿತರಿಲ್ಲ” ಎಂದು ಬೀಗುವವರಿಗೆ ವಿದ್ವತ್ಕುಲಚಕ್ರವರ್ತಿಗಳಾದ ಸರ್ವಜ್ಞಕಲ್ಪರಾದ ಶ್ರೀಮಟ್ಟೀಕಾಕೃತ್ಪಾದರ ಈ ವಿನಯ ಅದೆಂತಹ ಆದರ್ಶವಲ್ಲವೇ ? ವಿದ್ಯೆ ವಿನಯದಲ್ಲಿ ಪರ್ಯವಸಾನವಾದರೆ ನಿಜವಾಗಿ ಸಾರ್ಥಕ ಎಂಬ ಬಹುದೊಡ್ಡ ಸಂದೇಶವನ್ನು ನಮ್ಮೆಲ್ಲರಿಗೆ ಈ ಮೂಲಕ ಶ್ರೀಮಟ್ಟೀಕಾ ಕೃತ್ಪಾದರು ನೀಡುತ್ತಿದ್ದಾರೆ.

ಆಷಾಢ ಬಹುಳ ಪಂಚಮಿ ಶ್ರೀಮಟ್ಟೀಕಾಕೃತ್ಪಾದರ ಆರಾಧನಾ ಮಹೋತ್ಸವ. ಅವರ ಜೀವನದ ಪ್ರತಿಯೊಂದು ಹೆಜ್ಜೆಯ ಹಿನ್ನೆಲೆಯಲ್ಲಿಯೂ ಒಂದೊಂದು ಸಂದೇಶ ಅಡಗಿದೆ. ಅವರ ನ್ಯಾಯಸುಧಾದಿ ಗ್ರಂಥಗಳ ಅಧ್ಯಯನ-ಅಧ್ಯಾಪನಗಳು ನಿರಂತರ ನಡೆಯುವುದ-ರೊಂದಿಗೆ, ಅವರ ಜೀವನದ ಈ ತರಹದ ಆದರ್ಶಗಳನ್ನೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಆ ಮಹಾಗುರುಗಳೇ ಅನುಗ್ರಹ ಮಾಡಲಿ ಎಂಬುದಾಗಿ ಪ್ರಾರ್ಥಿಸಿಕೊಳ್ಳೋಣ. ★★



# ತಾಳ್ಮೆಗಿಂತ ಮಿಗಿಲಾದದ್ದು ಇಲ್ಲ

✍ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ

ಒಬ್ಬ ತತ್ತ್ವಜ್ಞಾನಿಗಳು ಒಂದು ಕಾರ್ಯಕ್ರಮದಲ್ಲಿ ಸಭಿಕರನ್ನು ಉದ್ದೇಶಿಸಿ ಮಾತನಾಡುತ್ತಾ, ಯಾವುದೇ ಕೆಲಸದಲ್ಲಿ ಯಶಸ್ಸು ಸಿಗಬೇಕಾದರೆ ಸಹನೆ ಮತ್ತು ತಾಳ್ಮೆಯಿಂದ ಪ್ರಯತ್ನಶೀಲರಾಗಬೇಕು ಎಂದು ಹೇಳಿದರು. ಆಗ ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದ ಒಬ್ಬರು “ತತ್ವಜ್ಞಾನಿಗಳೇ ! ನಾನು ಒಬ್ಬ ವ್ಯಾಪಾರಿ. ಕೆಲವು ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದೇನೆ. ಆದರೆ ಹೆಚ್ಚಿನ ಲಾಭ ಬರುತ್ತಿಲ್ಲ. ನೀವು ಹೇಳಿದಂತೆ, ಇಂದು ಒಳ್ಳೆಯ ವ್ಯಾಪಾರ ಆಗಬಹುದು, ನಾಳೆ ಲಾಭವಾಗಬಹುದು ಎಂದು ತಾಳ್ಮೆಯಿಂದ ಇದ್ದೆ. ಈಗ ನನ್ನ ಸಹನೆ ಮಿತಿಮೀರಿದೆ. ಆದ್ದರಿಂದ ಈ ವ್ಯಾಪಾರವನ್ನೇ ನಿಲ್ಲಿಸಲು ತೀರ್ಮಾನಿಸಿದ್ದೇನೆ” ಎಂದು ಹೇಳಿದ. ಆಗ ತತ್ವಜ್ಞಾನಿಯು “ಕಠಿಣ ಪರಿಶ್ರಮದಿಂದ ಪ್ರಯತ್ನಪಟ್ಟು ಕೆಲಸ ಮಾಡಿದರೆ ಖಂಡಿತ ಫಲ ದೊರೆಯುತ್ತದೆ. ಅಲ್ಲಿಯವರೆಗೂ ಸ್ವಲ್ಪ ಕಾಯಬೇಕು” ಎಂದರು. ಆ ವ್ಯಾಪಾರಿ “ತಾಳ್ಮೆಗೂ ಒಂದು ಮಿತಿ ಇರುತ್ತದೆ. ನಿಮ್ಮ ಮಾತಿನಂತೆ ತಾಳ್ಮೆಯಿಂದ ಕೆಲಸ ಮಾಡಿದರೆ ಫಲ ದೊರೆಯುವುದಾದರೆ, ನೀವು ತಾಳ್ಮೆಯಿಂದ ತೂತುಗಳಿರುವ ಜರಡಿಯಲ್ಲಿ ನೀರು ತುಂಬಿಸಲು ಆಗುತ್ತದೆಯಾ ?” ಎಂದು ಪ್ರಶ್ನಿಸಿದ. ಅದಕ್ಕೆ ತತ್ತ್ವಜ್ಞಾನಿಯು “ನಿಶ್ಚಿತವಾಗಿಯೂ ತುಂಬಿಸಬಹುದು. ಸಹನೆಯಿಂದ ಕಾದರೆ ಬಹಳ ಚಳಿ ಇರುವಾಗ ನೀರು ಮಂಜುಗಡ್ಡೆಯಾಗುತ್ತದೆ. ಆಗ ಜರಡಿಯಲ್ಲಿ ಖಂಡಿತ ನೀರನ್ನು ತುಂಬಿಸಬಹುದು” ಎಂದರು. ಹಿಂದೆ ಜನರಿಗೆ ಎಲ್ಲ ವಿಷಯದಲ್ಲೂ ಬಹಳಷ್ಟು ತಾಳ್ಮೆ ಇತ್ತು. ಉದಾಹರಣೆಗೆ ಸುಮಾರು 40 ವರ್ಷದ ಹಿಂದೆ ಫೋನ್ ಇಲ್ಲದ ದಿನಗಳಲ್ಲಿ ಮನೆಯವರು ಬೇರೆ ಊರಿಗೆ ಹೋದರೆ ಅವರು “ಸುಖವಾಗಿ ಊರು ತಲುಪಿದೆ” ಎಂದು ಪತ್ರ ಬರೆದು ತಿಳಿಸಿದ ಮೇಲೆ ಅಷ್ಟೇ ಅವರು ತಲುಪಿದ ವಿಚಾರ ಮನೆಗೆ ತಿಳಿಯುತ್ತಿತ್ತು. ಆಗ ಜನರಿಗೆ ಅಷ್ಟೇ ತಾಳ್ಮೆ ಇತ್ತು. ಆದ್ದರಿಂದ ಊರಿಗೆ ಹೊರಟವರಿಗೆ ಮನೆಗೆ ಹೋದ ಬಳಿಕ ಪತ್ರ ಬರೆಯಿರಿ ಎಂದು ಹೇಳುತ್ತಿದ್ದರು. ಹೀಗೆ ಪ್ರಯಾಣಿಕರು ಊರಿಗೆ ತಲುಪಿದ ವಿಚಾರ ತಿಳಿಯಲು 3-4 ದಿನವಾಗುತ್ತಿತ್ತು. ಅದೇ ಈಗಿನ ರಾಕೆಟ್ ಯುಗದಲ್ಲಿ ಇನ್ನು ಬಸ್ ಹತ್ತಿ ಮುಂದಿನ ನಿಲ್ದಾಣ ತಲುಪುವ ಹೊತ್ತಿಗೆ ಆಗಲೇ ಎಲ್ಲಿದ್ದೀರಾ ? ಎಂದು ಫೋನ್ ಕರೆ ಹೋಗುತ್ತದೆ. ಹೀಗೆ ನಾವೇ ಮಾಡಿಕೊಂಡಿರುವ ಎಲ್ಲವೂ ಬೇಗ ಆಗಬೇಕೆಂಬ ಒತ್ತಡದ ಜೀವನದಿಂದ ನೂರೆಂಟು ಕಾಯಿಲೆಗಳು ದೇಹವನ್ನು ವೇಗವಾಗಿ ಆವರಿಸುತ್ತಿದೆ. ಜನರ ಆಯಸ್ಸು ಬೇಗ ಮುಗಿದು ಹೋಗುತ್ತಿದೆ. ಇಜ್ಜಿಲು ಒಲೆಯ ಮೇಲೆ ಮಾಡುವ ಅಡಿಗೆ, ಒರಳಿನಲ್ಲಿ ರುಬ್ಬುವ ಚಟ್ನಿಗಿಂತ, ಗ್ಯಾಸ್ ಮೇಲೆ ಕುಕ್ಕರ್‌ನಲ್ಲಿ ಮಾಡುವ ಅಡುಗೆಯು, ಮಿಕ್ಸಿಯಲ್ಲಿ ಮಾಡುವ ಚಟ್ನಿಯು ಇವೆರಡರಲ್ಲಿರುವ ರುಚಿ ಹಾಗೂ ಶುಚಿಯ ವ್ಯತ್ಯಾಸ ಆರೋಗ್ಯದ ದೃಷ್ಟಿಯಿಂದಲೂ ಎಷ್ಟು ಸಮಂಜಸ ಎಂದು ಅವರವರ ಅನುಭವದಿಂದ ಸಿದ್ಧವಾದದ್ದು. ಶ್ರಮ ಮತ್ತು ತಾಳ್ಮೆ ಸೇರಿದಾಗ ಆಗುವ ಆರೋಗ್ಯಕರವಾದ ಬೆಳವಣಿಗೆಯೇ ಬೇರೆ.

॥ ಶ್ರೀಗುರುಭ್ಯೋ ನಮಃ ॥

# ಪರಮಪೂಜ್ಯ 1008 ಶ್ರೀ ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರ 25 ನೆಯ ಚಾತುರ್ಮಾಸ್ಯ ಮಹೋತ್ಸವ - ಸುವರ್ಣಪುರೀ

**ಚಾತುರ್ಮಾಸ್ಯಕ್ಕೆ ಮನಃಪೂರ್ವಕ ಸ್ವಾಗತ**

**ನಿಮ್ಮ ಮನಸ್ಸಿನಿಂದಲೇ ಬನ್ನಿ, ನಿಮ್ಮ ಮನಸ್ಸಿಗೇ ಗುರುಗಳನ್ನು ಕರೆತನ್ನಿ.**

**ಮನ ಮನಗಳಲ್ಲಿ ಶ್ರೀಮೂಲರಾಮನ ಚರಣಗಳನ್ನು ನೆನೆದು ಪಾವನರಾಗಿ.**

**ಸದ್ಭಕ್ತರೇ...**

ತಮ್ಮೆಲ್ಲರಿಗೂ ಗೊತ್ತಿರುವಂತೆ ದೇಶದ ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ತರಹದ ಸಾಮೂಹಿಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಪಾಯಕ್ಕೆ ಆಹ್ವಾನ ನೀಡಿದಂತೆಯೇ ಸರಿ. ಆದ್ದರಿಂದ ಎಲ್ಲರ ಹಿತದೃಷ್ಟಿಯಿಂದ ಶ್ರೀ ಶ್ರೀಪಾದಂಗಳವರು ಈ ಬಾರಿ ತಮ್ಮ ಚಾತುರ್ಮಾಸ್ಯವನ್ನು ಅತ್ಯಂತ ಏಕಾಂತದಲ್ಲಿ ನೆರವೇರಿಸಲಿದ್ದಾರೆ. ನಿರಂತರವಾಗಿ ಏಕಾಂತದಲ್ಲಿ ಪಾಠ, ಜಪ, ತಪಸ್ಸು, ಅಧ್ಯಯನ, ಪೂಜಾದಿಗಳನ್ನು ಮಾಡುವ ಮೂಲಕ ಜಗತ್ತಿನ ಕ್ಷೇಮಕ್ಕಾಗಿ ಪ್ರಾರ್ಥಿಸಲಿದ್ದಾರೆ.

ಶ್ರೀ ಶ್ರೀಪಾದಂಗಳವರ ಆದೇಶವನ್ನು ಗೌರವಿಸಿ, ನಮ್ಮ ವಿನಂತಿಯನ್ನು ಮನ್ನಿಸಿ, ಪರಿಸ್ಥಿತಿಯನ್ನು ಅವಲೋಕಿಸಿ, ಶ್ರೀ ಶ್ರೀಗಳವರ ಏಕಾಂತಸಾಧನೆಗೆ ಯಾವುದೇ ತರಹದ ಭಂಗ ತರದಿರಲು ಈಗಾಗಲೇ ತಾವೆಲ್ಲರೂ ನಿರ್ಧಾರ ಮಾಡಿದ್ದೀರಿ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇವೆ.

ತಮ್ಮೆಲ್ಲರ ಸಹಕಾರಕ್ಕಾಗಿ ಮನಃಪೂರ್ವಕ ಧನ್ಯವಾದಗಳು.

ಚಾತುರ್ಮಾಸ್ಯದ ಸಂದರ್ಭದಲ್ಲಿ ಪ್ರತಿವರ್ಷ ಅನೇಕ ಭಕ್ತರು ಶ್ರೀ ಶ್ರೀಪಾದರ ಸನ್ನಿಧಾನಕ್ಕೆ ಬಂದು, ಗುರುಗಳ, ಮೂಲರಾಮದೇವರ ದರ್ಶನವನ್ನು ಪಡೆದು, ಭಕ್ತಿಪೂರ್ವಕವಾಗಿ ವಿವಿಧಸೇವೆಯನ್ನು ಮಾಡುವ, ಕಾಣಿಕೆಯನ್ನು ಸಮರ್ಪಿಸುವ ವಾಡಿಕೆಯನ್ನು ಇಟ್ಟುಕೊಂಡಿದ್ದಾರೆ. ಈ ಬಾರಿ ಪ್ರತ್ಯಕ್ಷವಾಗಿ ಗುರುಗಳ ಸನ್ನಿಧಾನಕ್ಕೆ ಹೋಗಿ ಸೇವೆಯನ್ನು ಸಲ್ಲಿಸಲು ಅವಕಾಶ ಇಲ್ಲದೇ ಇರುವುದು ಭಕ್ತರ ಮನಸ್ಸಿಗೊಂದು ಕೊರಗು.

ಅನೇಕ ಭಕ್ತರು “ನಾವು ಹೋಗಲು ಸಾಧ್ಯವಿಲ್ಲ. ಆದರೆ ನಮ್ಮ ಕಾಣಿಕೆ, ಸೇವೆ ರಾಮದೇವರಿಗೆ ಸಮರ್ಪಿತವಾದರೆ ಸಾಕು. ನಮಗೆ ಪ್ರತಿಯಾಗಿ ಇನ್ನೇನೂ ಬೇಡ. ಶ್ರೀಮೂಲರಾಮದೇವರ, ಶ್ರೀಪಾದರ ಅನುಗ್ರಹ ಆದರೆ ಸಾಕು” ಎಂಬ ಭಾವನೆಯಿಂದ ಸೇವಾ ವಿವರಗಳನ್ನು ಕೇಳುತ್ತಿದ್ದಾರೆ.

ಅವರಿಗಾಗಿ ಸೇವೆಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

ಕೆಳಗೆ ನೀಡಿದ ವೆಬ್‌ಸೈಟ್ ಮೂಲಕ ನಿಮ್ಮ ಸೇವೆಯನ್ನು ಸಮರ್ಪಿಸಬಹುದು.

• **http://srijspn.org/chaturmasya.html**

• ಇದಲ್ಲದೇ ನಿಮ್ಮ ನಿಮ್ಮ ಊರುಗಳಲ್ಲಿರುವ ಶ್ರೀಮಠದ ಶಾಖೆಗಳಲ್ಲೂ ಚಾತುರ್ಮಾಸ್ಯ ಸೇವಾಕಾಣಿಕೆಯನ್ನು ಸಮರ್ಪಿಸಬಹುದು. ಅಧಿಕೃತ ರಸೀದಿಯನ್ನು ಪಡೆಯಬೇಕು.

**ವಿ.ಸೂ.** ತಾವೆಲ್ಲರೂ ಕೇವಲ ಗುರುಗಳ, ರಾಮದೇವರ ಅನುಗ್ರಹವನ್ನು ಬಯಸಿಯೇ ಕಾಣಿಕೆಯನ್ನು ಸಲ್ಲಿಸುತ್ತೀರಿ. ಆದರೂ ನಮ್ಮ ಕೃತಜ್ಞತೆಯನ್ನು ತೋರಿಸಲು ಪ್ರತಿವರ್ಷ ಸೇವಾಕರ್ತರಿಗೆ ಪ್ರಸಾದದ ರೂಪದಲ್ಲಿ ಮಡಿ, ಪ್ರತಿಮೆ ಮೊದಲಾದ ವಸ್ತುಗಳನ್ನು ಪ್ರತಿಯಾಗಿ ನೀಡಲಾಗುತ್ತದೆ. ಈ ಬಾರಿ ನಮ್ಮ ಕೃತಜ್ಞತೆಯನ್ನು ವಸ್ತುಗಳ ಮೂಲಕ ತೋರಿಸಲು ಆಗುವುದಿಲ್ಲ. ಹೃದಯದಿಂದ ಎಲ್ಲರಿಗೂ ಕೃತಜ್ಞತೆಗಳನ್ನು ಹೇಳುತ್ತಾ, ತಮ್ಮ ಹೆಸರಲ್ಲಿ ಸಂಕಲ್ಪವನ್ನು ಮಾಡಿ, ಎಲ್ಲರ ಕ್ಷೇಮಕ್ಕಾಗಿ ಪ್ರಾರ್ಥಿಸುತ್ತೇವೆ.

ಸೇವೆಗೆ ನಿಯಮಿತವಾದ ಮೊತ್ತ ಇರುವುದಿಲ್ಲ. ತಮ್ಮ ಶಕ್ತಿ, ಇಚ್ಛೆಗೆ ಅನುಗುಣವಾಗಿ ಸ್ವಪ್ರೇರಣೆಯಿಂದ ಎಷ್ಟಾದರೂ ಕಾಣಿಕೆಯನ್ನು ಕೃಷ್ಣಾರ್ಪಣಭಾವದಿಂದ ಸಮರ್ಪಣೆ ಮಾಡಬಹುದು. **-ದಿವಾನರು ಶ್ರೀ ಉತ್ತರಾದಿಮಠ**

## ದೀಪ ಹೇಗಿರಬೇಕು...?

**ಲಭ್ಯತೇ ಯಸ್ಯ ತಾಪಸ್ತು ದೀಪಸ್ಯ ಚತುರಂಗುಲಾತ್ ।**
**ನ ಸ ದೀಪ ಇತಿ ಖ್ಯಾತೋ ಹ್ಯೋಘವಹ್ನಿಸ್ತು ಸ ಶ್ರುತಃ ॥ ಕಾ.ಪು**

ದೀಪವನ್ನು ಹಚ್ಚಿದಾಗ ಅದರ ತಾಪ ನಾಲ್ಕು ಅಂಗುಲಕ್ಕಿಂತಲೂ ಮೀರಿ ಇರಬಾರದು. ಹಾಗಿದ್ದರೆ ಅದನ್ನು ಶಾಸ್ತ್ರವು ದೀಪವೆಂದು ವ್ಯವಹರಿಸುವುದಿಲ್ಲ. ಅದನ್ನು 'ಓಘವಹ್ನಿ' ಎಂದು ಕರೆಯುತ್ತದೆ. ಆದ್ದರಿಂದ ಹಿರಿಯರು ತಮ್ಮ ಕೈಯನ್ನು ಹಿಡಿದು ಅದರ ತಾಪವನ್ನು ಗುರುತಿಸಿ ದೀಪವನ್ನು ಹಚ್ಚುತ್ತಾರೆ. ಇದನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಮೊದಲು ಇದು ಕಷ್ಟವೆನಿಸಬಹುದು. ಅಭ್ಯಾಸವಾದಾಗ ಅತಿ ಸುಲಭವಾಗುತ್ತದೆ.

**ನೇತ್ರಾಹ್ಲಾದಕರಃ ಸ್ವರ್ಚಿಃ ದೂರತಾಪವಿವರ್ಜಿತಃ ।**
**ಸುಶಿಖಃ ಶಬ್ದರಹಿತೋ ನಿರ್ಧೂಮೋ ನಾಽತಿಹ್ರಸ್ವಕಃ ।**
**ದಕ್ಷಿಣಾವರ್ತವರ್ತಿಸ್ತು ಪ್ರದೀಪಃ ಶ್ರೀವಿವೃದ್ಧಯೇ ॥ ಕಾ.ಪು**

ದೀಪವು ಕಣ್ಣಿಗೆ ಹಿತವಾಗುವಂತೆ ಇರಬೇಕು. ದೀಪದ ತಾಪವು ದೂರದ ವರೆಗೆ ಇರಬಾರದು. ಶಾಂತವಾದ ಜ್ವಾಲೆಯಿಂದ ಕೂಡಿರಬೇಕು. ಶಬ್ದವಿರಬಾರದು. ಹೊಗೆ ಇರಬಾರದು. ಅತಿ ಸಣ್ಣದಾಗಿರಬಾರದು. ಬಲಭಾಗಕ್ಕೆ ಬತ್ತಿಯನ್ನು ಬಾಗಿಸಿರಬೇಕು. ಇಂತಹ ದೀಪದಿಂದ ಜ್ಞಾನ-ಐಶ್ವರ್ಯಗಳು ಅಭಿವೃದ್ಧಿವಾಗುತ್ತವೆ

# ಮಹರ್ಷಿ ಯಾಜ್ಞವಲ್ಕ್ಯ - ೮

✍ ಪಂ. ಶ್ರೀನಿವಾಸಾಚಾರ್ಯ
ನಾಗರಹಳ್ಳಿ



ಯಾಜ್ಞವಲ್ಕರು ಪಡೆದ ಶುಕ್ಲಯಜುರ್ವೇದದಲ್ಲಿ ಒಟ್ಟು ೪೦ ಅಧ್ಯಾಯಗಳಿವೆ. ೩೦೩ ಅನುವಾಕಗಳಿವೆ. ೧೯೩೫ ಮಂತ್ರಗಳಿವೆ. ಕರ್ಮಕಾಂಡಕ್ಕೆ ಹಾಗೂ ಅಧ್ಯಾತ್ಮಚಿಂತನೆಗೆ ಅತ್ಯುಪಯುಕ್ತ ಮಂತ್ರಗಳು ಈ ವೇದದಲ್ಲಿವೆ.

೧) ಮೊದಲಿನ ೨ ಅಧ್ಯಾಯಗಳಲ್ಲಿ ದರ್ಶ-ಪೌರ್ಣಿಮಾಸೇಷ್ಟಿ ಮಂತ್ರಗಳಿವೆ. ೨ನೆಯ ಅಧ್ಯಾಯದ ಕೊನೆಯಲ್ಲಿ ಪಿಂಡ ಪಿತೃಯಜ್ಞಗಳ ಮಂತ್ರಗಳಿವೆ.

೨) ೩ನೆಯ ಅಧ್ಯಾಯದಲ್ಲಿ ಅಗ್ನಿಕರ್ಮ-ಅಗ್ನಿಪ್ರತಿಷ್ಠಾ-ಅಗ್ನಿಹೋತ್ರ ಮತ್ತು ಚಾತುರ್ಮಾಸ್ಯದ ಮಂತ್ರಗಳಿವೆ.

೩) ೪ ರಿಂದ ೮ ಅಧ್ಯಾಯಗಳಲ್ಲಿ ಸೋಮಯಜ್ಞಪರ ಅರ್ಥಾತ್ ಅಗ್ನಿಷ್ಟೋಮ ಸಂಬಂಧಿ ಮಂತ್ರಗಳಿವೆ.

೪) ೯ ಹಾಗೂ ೧೦ ಅಧ್ಯಾಯಗಳಲ್ಲಿ ವಾಜಪೇಯ ಹಾಗೂ ರಾಜಸೂಯ ಯಜ್ಞಗಳ ಮಂತ್ರಗಳಿವೆ.

೫) ೧೧ ರಿಂದ ೧೮ ಅಧ್ಯಾಯಗಳಲ್ಲಿ ಚಯನಕರ್ಮಸಂಬಂಧಿ ಮಂತ್ರಗಳಿವೆ. ೧೬ನೇ ಅಧ್ಯಾಯದಲ್ಲಿ ಪ್ರಸಿದ್ಧ "ರುದ್ರ" ಮಂತ್ರಗಳಿವೆ. ೧೮ನೇ ಅಧ್ಯಾಯದಲ್ಲಿ ವಸೋರ್ಧಾರಾ ಮಂತ್ರಗಳಿವೆ.

೬) ೧೯ ರಿಂದ ೨೧ ಅಧ್ಯಾಯಗಳಲ್ಲಿ "ಸೌತ್ರಾಮಣಿ" ಯಜ್ಞದ ಮಂತ್ರಗಳಿವೆ.

೭) ೨೨ ರಿಂದ ೨೫ ಅಧ್ಯಾಯಗಳಲ್ಲಿ "ಅಶ್ವಮೇಧ"ಯಜ್ಞದ ಮಂತ್ರಗಳಿವೆ.

೮) ೨೬ ರಿಂದ ೩೫ ಅಧ್ಯಾಯಗಳಲ್ಲಿ "ಖಿಲ"ಸಂಜ್ಞಕ ಮಂತ್ರಗಳಿವೆ. ಈ ಅಧ್ಯಾಯಗಳಲ್ಲಿ ಸೌತ್ರಾಮಣಿ, ಅಶ್ವಮೇಧಯಜ್ಞಗಳ ಅವಶಿಷ್ಟ ಮಂತ್ರಗಳು, ಪುರುಷಮೇಧಮಂತ್ರ, ಪುರುಷಸೂಕ್ತ,ಸರ್ವಮೇಧಾಮಂತ್ರ,ಪುರೋಋುಜ್‌ಮಂತ್ರ,ಶಿವಸಂಕಲ್ಪೋಪನಿಷತ್, ಪಿತೃಮೇಧಮಂತ್ರ, ಔರ್ಧ್ವದೈಹಿಕ ಸಂಸ್ಕಾರಮಂತ್ರಗಳಿವೆ.

೯) ೩೬ನೇ ಅಧ್ಯಾಯದಲ್ಲಿ "ಶಾಂತಿಮಂತ್ರ"ಗಳಿವೆ.

೧೦) ೩೭-೩೮ನೇ ಅಧ್ಯಾಯಗಳಲ್ಲಿ "ಮಹಾವೀರಮಂತ್ರ"ಗಳಿವೆ.

೧೧) ೩೯ ನೇ ಅಧ್ಯಾಯದಲ್ಲಿ "ಪ್ರವರ್ಗ್ಯ" ಮಂತ್ರಗಳಿವೆ.

೧೨) ಕೊನೆಯ ೪0ನೇ ಅಧ್ಯಾಯದಲ್ಲಿ ಪ್ರಸಿದ್ಧ "ಈಶಾವಾಸ್ಯ-ಉಪನಿಷತ್" ಮಂತ್ರಗಳಿವೆ.

ಇಂದು ಯಜ್ಞಸಂಸ್ಥೆಗಳು ನಾಮಶೇಷವಾಗಿದ್ದರೂ ಅನೇಕಮಂತ್ರಗಳು ನಿತ್ಯನೈಮಿತ್ತಿಕ ಆಚರಣೆಗಳಲ್ಲಿ ಸಂಸ್ಕಾರಗಳಲ್ಲಿ ಹೆಜ್ಜೆ-ಹೆಜ್ಜೆಗಳಲ್ಲಿ ಎಲ್ಲರಿಂದಲೂ ಪಠಿಸಲ್ಪಡುತ್ತಿವೆ.

**“ವೃಣುತೇ ಹಿ ವಿಮೃಶ್ಯಕಾರಿಣಂ ಗುಣಲುಬ್ಧಾ: ಸ್ವಯಮೇವ ಸಂಪದ:”**

ಮಹರ್ಷಿಯಾಜ್ಞವಲ್ಕ್ಯರು ಸೂರ್ಯದೇವನಿಂದ ಪಡೆದ ಶುಕ್ಲಯಜುರ್ವೇದವು ಜಗತ್ತಿನಲ್ಲಿ ಪ್ರಸಿದ್ಧವಾದಂತೆ ಯಾಜ್ಞವಲ್ಕ್ಯರ ಕೀರ್ತಿಯು ಶುಕ್ಲಪಕ್ಷದ ಚಂದ್ರನಂತೆ ಬೆಳೆಯಲಾರಂಭಿಸಿತು. ವಿಶೇಷವಾಗಿ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಈ ವೇದದ ಮಂತ್ರಗಳು ಬಹುವಾಗಿ ಪ್ರಯೋಗಕ್ಕೆ ಬಂದವು. ಅನೇಕ ಶ್ರೇಷ್ಠ ರಾಜ-ಮಹಾರಾಜರು ಅವರನ್ನು ಯಜ್ಞಗಳಿಗೆ ಕರೆಯಲಾರಂಭಿಸಿದರು.

ಹೊಸದಾದ ವೇದಗಳನ್ನು ಕಂಡ ತೇಜಸ್ವೀ ಯುವಕನನ್ನು ಅಳಿಯನನ್ನಾಗಿ ಮಾಡಿಕೊಳ್ಳಲು ಅನೇಕ ಋಷಿಗಳು ಮುಂದೆ ಬಂದರು. ಕಾತ್ಯಾಯನ ಗೋತ್ರದ “ಕಾತ್ಯಾಯನೀ” ಹಾಗೂ ವಚಕ್ನುಋುಷಿಗಳ ಮಗಳಾದ “ಗಾರ್ಗಿ” ಈ ಇಬ್ಬರು ತೇಜಸ್ವಿನಿಯರನ್ನು ಯಾಜ್ಞವಲ್ಕ್ಯರು ಮದುವೆಯಾದರು. ಕಾತ್ಯಾಯನಿಯು ಗೃಹಕಾರ್ಯಗಳಲ್ಲಿ ಅತ್ಯಂತ ಪ್ರವೀಣೆಯಾಗಿದ್ದಳು. ಗಾರ್ಗಿಯು ಶ್ರೇಷ್ಠ ತತ್ವಜ್ಞಾನಿಯೂ ಹಾಗೂ ಋಷಿಕೆಯೂ ಆಗಿದ್ದಳು. ತಮ್ಮ ಆಶ್ರಮದಲ್ಲಿ ನಡೆಯುವ ತತ್ವಜ್ಞಾನಗಳ ಚರ್ಚೆಯಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಳು.

ಇವರ ಬುದ್ಧಿಪೂರ್ವಕ ಮನಸ್ಸಿನೈಕ್ಯದ ದಾಂಪತ್ಯವನ್ನು ಕಂಡೇ ಆಶ್ವಲಾಯನರು ಮದುವೆಯ ಸಂದರ್ಭದಲ್ಲಿಯೇ ಹೇಳುವ “ಓಂ ಯದೇತತ್ ಹೃದಯಂ ತವ ತದಸ್ತು ಹೃದಯಂ ಮಮ” (ಎಲೈ ವಧುವೇ ನಿನ್ನ ಹೃದಯದಲ್ಲಿರುವ ಅಭಿಲಾಷೆಗಳೆಲ್ಲ ನನ್ನ ಅಭಿಲಾಷೆಗಳೇ ಆಗಿವೆ. ಅಂದರೆ ನಿನ್ನ ಮನದ ವಿರುದ್ಧ ನಾನೇನನ್ನೂ ಬಯಸುವದಿಲ್ಲ. ನನ್ನ ಮನದ ವಿರುದ್ಧ ನೀನೂ ಏನನ್ನೂ ಬಯಸುವದಿಲ್ಲ) ಎಂಬ ಮಂತ್ರವನ್ನು ತಮ್ಮ ಗೃಹ್ಯಸೂತ್ರದಲ್ಲಿ ಸೇರಿಸಿರಬೇಕು.

ಈ ಪ್ರೀತಿ ಈ ಸ್ವೀಕೃತಿ ಇಂದಿನ ಆಕರ್ಷಣಜನ್ಯ ವಿವಾಹಪೂರ್ವ ಸ್ವಾರ್ಥಪೂರ್ಣಅಸಾಕ್ಷಿಕ ಅನಿಶ್ಚಿತ ವ್ಯಾಪಾರೀ ಪ್ರೇಮವಲ್ಲ. ಹೊರತು ಬುದ್ಧಿಪೂರ್ವಕ, ಸ್ವೀಕೃತಿಪೂರ್ವಕ, ಎಂದಿಗೂ ವಿಚ್ಛಿನ್ನವಾಗದ, ವಿವಾಹಾನಂತರದ ಪ್ರೇಮವಾಗಿದೆ. ಈ ಪ್ರೇಮವೇ ಕುಟುಂಬವನ್ನು ಮಂಗಲಪೂರ್ಣವನ್ನಾಗಿ ಮಾಡುತ್ತದೆ.

ಆದುದರಿಂದಲೇ ಮನುಮಹರ್ಷಿಯು ಈ ಶ್ಲೋಕವನ್ನು ಹೇಳಿರುವನು-

**ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।**
**ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಮ್ ॥ ೩/೬**

ಒಂದುಸಲ ದೇವರಾತ ಜನಕನು ಒಂದು ವಿಶಾಲಯಜ್ಞವನ್ನು ಮಾಡಿದನು. ಆ ಯಜ್ಞದ ಆಧ್ವರ್ಯವನ್ನು ಸ್ವತಃ ವೈಶಂಪಾಯನರು ಸ್ವೀಕರಿಸಿದ್ದರು. ಯಜ್ಞದಲ್ಲಿ ಒಂದು ವೈಗುಣ್ಯ ವುಂಟಾದಾಗ ಅದರ ನಿವಾರಣೆಗಾಗಿ ಪ್ರಾಯಶ್ಚಿತ್ತವಿಧಿಯು ಅನಿವಾರ್ಯವಾಯಿತು. ಆ ವಿಧಿಯನ್ನು ಬಹಳ ಜ್ಞಾನಪೂರ್ವಕವಾಗಿ ಮಾಡುವ ಆವಶ್ಯಕತೆಯಿತ್ತು. ಅಧ್ವರ್ಯುಗಳಾದ

ವೈಶಂಪಾಯನರು ಆ ಕಾರ್ಯವನ್ನು ತಮ್ಮ ಪೂರ್ವಶಿಷ್ಯರಾದ ಯಾಜ್ಞವಲ್ಕ್ಯರಿಗೆ ಒಪ್ಪಿಸಿದರು. ಯಾಜ್ಞವಲ್ಕ್ಯರು ತಾವು ಹೊಸದಾಗಿ ಪಡೆದ ಶುಕ್ಲಯಜುರ್ವೇದದ ವಿಧಿಯಿಂದ ಸಾರ್ಥಕವಾಗಿ ಪೂರ್ಣಗೊಳಿಸಿ, ಯಜ್ಞವು ಸುರಳೀತವಾಗಿ ನಡೆಯುವಂತೆ ಮಾಡಿದರು. ಆದರೆ ಯಾಜ್ಞವಲ್ಕ್ಯರು ಹಿಂದೆ ವೈಶಂಪಾಯನರು ತಮ್ಮಿಂದ ಯುಜುರ್ವೇದವನ್ನು ಹಿಂತಿರುಗಿ ಪಡೆದ ವ್ಯಥೆಯನ್ನು ಪೂರ್ಣವಾಗಿ ಮರೆತಿರಲಿಲ್ಲ.

ಆದುದರಿಂದ ಇಂದು ಎಲ್ಲರೆದುರಿನಲ್ಲಿ ಅವರಿಗೆ ಮುಜುಗರ ಉಂಟುಮಾಡಬೇಕೆಂಬ ತಾರುಣ್ಯದ ತ್ವೇಷದಿಂದ ಈ ಯಜ್ಞವು ನನ್ನಿಂದಲೇ ಪೂರ್ಣವಾದುದರಿಂದ ಯಜ್ಞದ ದಕ್ಷಿಣೆಯ ಅರ್ಧಭಾಗವು ನನಗೇ ಬರಬೇಕು ಎಂದು ಹಟ ಮಾಡಿದರು. ವೈಶಂಪಾಯನರು ಒಪ್ಪಲಿಲ್ಲ .ಆಗ ದೇವಲಋಷಿಗಳು ಮಧ್ಯಸ್ಥರಾಗಿ ಅರ್ಧದಕ್ಷಿಣೆ ಕೊಡಿಸಿದರು. ಈ ಮಾತನ್ನು ಸ್ವತಃ ಯಾಜ್ಞವಲ್ಕ್ಯರೇ ಅನಂತರ ದೇವರಾತ ಜನಕನ ಮಗನಾದ ದೇವರಾತಿ (ಕರಾಲ) ಜನಕನಿಗೆ ವಿವರಿಸಿದ್ದಾರೆ.

**ವಿಪ್ರಿಯಾರ್ಥಂ ಸಶಿಷ್ಯಸ್ಯ ಮಾತುಲಸ್ಯ ಮಹಾತ್ಮನಃ ।**
**ಮಿಷತೋ ದೇವಲಸ್ಯಾಪಿ ತತೋ..ರ್ಧಂ ಹೃತವಾನಹಮ್॥** (ಮ.ಭಾ.ಶಾಂ-೩೧೪)

ದೇವರಾತನ ಪುತ್ರನಾದ ದೇವರಾತಿ (ಕರಾಲ) ಜನಕನು ನಿಜವಾಗಿಯೂ "ವಿದೇಹ" ನಾಗಿದ್ದನು. ರಾಜ್ಯದ ಭಾರವನ್ನು ಮಂತ್ರಿ-ಸೇನಾಪತಿಗಳಿಗೆ ಒಪ್ಪಿಸಿ. ತತ್ವಜ್ಞಾನದ ಆರಾಧನೆ ಯಲ್ಲಿ ತೊಡಗಿದನು. ಯಾಜ್ಞವಲ್ಕ್ಯರಿಂದ ಸಂಪೂರ್ಣ ಪ್ರಕೃತಿ-ಪುರುಷ ವಿವೇಕ ರೂಪ ಸಾಂಗ ಸಾಂಖ್ಯಶಾಸ್ತ್ರವನ್ನು (ಶುದ್ಧಾತ್ಮತತ್ವವಿಜ್ಞಾನಂ ಸಾಂಖ್ಯಮಿತ್ಯುಚ್ಯತೇ ಬುಧೈಃ - ಗೀತಾಭಾಷ್ಯ ೨/೩೯) ಅಧ್ಯಯನ ಮಾಡಿದನು. (ಮ.ಭಾ ಶಾಂತಿಪರ್ವ ಅ-೩೧೦) ಇವನ ಆ ಸ್ಥಾನದಲ್ಲಿ ಯಾವಾಗಲೂ ತತ್ವಜ್ಞಾನಿಗಳು ತತ್ವಚಿಂತನೆಯನ್ನು ಮಾಡುತ್ತಿದ್ದರು.

ಒಮ್ಮೆ ದೇವರಾತಿ ಜನಕನು ಬಹುದಕ್ಷಿಣಾಕ ಅಶ್ವಮೇಧಯಜ್ಞವನ್ನು ಮಾಡಿದನು. ಆಗ ಆ ಯಜ್ಞಕ್ಕೆ ಕುರು-ಪಾಂಚಾಲದೇಶಗಳಿಂದ ಅನೇಕ ತತ್ವಜ್ಞಾನಿಗಳು ಬಂದರು. ಅವರಲ್ಲಿ ಯಾರು ಅತ್ಯುತ್ತಮ ಬ್ರಹ್ಮಜ್ಞಾನಿಗಳು ? ಎಂಬ ಜಿಜ್ಞಾಸೆಯಿಂದ ೧೦೦೦ (ಸಾವಿರ) ಹಸುಗಳ ಎರಡೂ ಕೊಂಬುಗಳಿಗೆ ೧೦-೧೦ ತೊಲ ಬಂಗಾರದ ಹೊದಿಕೆ ಹಾಕಿ, ನಿಮ್ಮಲ್ಲಿ ಯಾರು ಶ್ರೇಷ್ಠ ಬ್ರಹ್ಮಜ್ಞಾನಿಗಳಿದ್ದೀರಿ ಅವರು ಈ ಹಸುಗಳನ್ನು ತೆಗೆದುಕೊಂಡು ಹೋಗಿರಿ ಎಂದು ಘೋಷಿಸಿದನು.

**"ಬ್ರಾಹ್ಮಣಾಃ ಭಗವಂತೋ ಯೋ ವೋ ಬ್ರಹ್ಮಿಷ್ಠಃ ಸ ಏತಾ ಗಾ ಉದಜಗಾ"** ಬೃ.ಉ- ೩

ಆಗ ಆ ಹಸುಗಳನ್ನು ನಾನು ತೆಗೆದುಕೊಳ್ಳುವೆನು ಎಂಬ ಎದೆಗಾರಿಕೆಯನ್ನು ಯಾರೂ ತೋರಿಸಲಿಲ್ಲ. ಆಗ ಮಹರ್ಷಿ ಯಾಜ್ಞವಲ್ಕ್ಯರು ತಮ್ಮ ಶಿಷ್ಯ ಸಾಮಶ್ರವನಿಗೆ ಈ ಹಸುಗಳನ್ನು ತೆಗೆದುಕೊಂಡು ನಮ್ಮ ಆಶ್ರಮಕ್ಕೆ ನಡೆ ಎಂದರು

"ಏತಾಃ ಸೋಮ್ಯ ಉದಜ ಸಾಮಶ್ರವಾ" (ಬೃ ಉ ೩)

ಆಗ ಅಲ್ಲಿದ್ದ ವಿದ್ವಾಂಸರಿಗೆ ಸರಿ ಎನಿಸಲಿಲ್ಲ. ಒಬ್ಬೊಬ್ಬರಾಗಿ ಯಾಜ್ಞವಲ್ಕ್ಯರ ಮೇಲೆ ಪ್ರಶ್ನೆಗಳ ಸುರಿಮಳೆಯನ್ನು ಸುರಿದರು.

ಮೊದಲು ಅಶ್ವಲರು ಯಜಮಾನನು ಮೃತ್ಯುವಿನಿಂದ ಹಾಗೂ ಕಾಲದ ಪರಿಣಾಮದಿಂದ ಮುಕ್ತನಾಗಿ ಹೇಗೆ ಮೋಕ್ಷವನ್ನು ಪಡೆಯುವನು ? ದೇವಪದವಿಯನ್ನು ಪಡೆಯಲು ಸಾಧನಗಳಾವವು ? ಸಾಮಗಾನದ ಉದ್ದೇಶ್ಯವೇನು ? ಎಂದು ಕೇಳಿದರು.

ಯಾಜ್ಞವಲ್ಕ್ಯರು - ೧) ಹೋತೃ ೨) ಅಧ್ವರ್ಯು ೩) ಉದ್ಗಾತೃ ೪) ಬ್ರಹ್ಮ, ಈ ನಾಲ್ಕು ಯಜ್ಞದಲ್ಲಿಯ ಪ್ರಮುಖ ವ್ಯಕ್ತಿಗಳ ಅಂತರ್ಯಾಮಿಗಳಾದ ವಾಕ್ ಅಗ್ನಿ ಇತ್ಯಾದಿ ದೇವತೆಗಳ ಅಂತರ್ಯಾಮಿ ಹಾಗೂ ನಿಯಾಮಕರಾದ ವಾಸುದೇವಾದಿ ಚತೂರೂಪಗಳ ಉಪಾಸನೆಯಿಂದ ಮೋಕ್ಷ ಹಾಗೂ ಪುರೋನುವಾಕ್ಯಾ, ಯಾಜ್ಯಾ, ಶಸ್ಯಾ ಇತ್ಯಾದಿ ಋಕ್ಕುಗಳಿಂದ ಪ್ರತಿಪಾದ್ಯ ಸಂಕರ್ಷಣಾದಿ ರೂಪಗಳ ಉಪಾಸನೆಯು ದೇವಪದವಿಯನ್ನು ಪಡೆಯುವ ಉಪಾಯ ಹಾಗೂ ಇದೇ ಋಕ್‌ಗಳಿಂದ ಸಾಮಗಾನವು ದೇವಲೋಕದಾಯಕವೆಂದು ತಿಳಿಸಿದರು.

ಆನಂತರ ಆರ್ತಭಾಗನೆಂಬ ಋಷಿಯ ಪ್ರಶ್ನೆಗಳಿಗೆ ಇಂದ್ರಿಯ-ವಿಷಯ, ತನ್ನಿಯಾಮಕ ದೇವತೆಗಳು, ತದಂತರ್ಯಾಮಿ ಆಕಾಶನಾಮಕ ಶ್ರೀಹರಿಯ ಉಪಾಸನೆಯಿಂದ ಮುಕ್ತಿ-ಯಾಗುವದು ಎಂದು ವಿವರಿಸುತ್ತ ತ್ರಿವಿಧಜೀವರ ಅಂತರ್ಯಾಮಿಯಾದ ಶ್ರೀಹರಿಯು ಜ್ಞಾನ-ಪುಣ್ಯ- ಪಾಪಗಳಿಗನುಸಾರ ಮುಕ್ತಿ-ಸ್ವರ್ಗ-ನರಕಗಳ ದಾಯಕನಾಗುವನು ಎಂಬ ದೇವರಹಸ್ಯವನ್ನು ಅನಧಿಕಾರಿಗಳಾದ ಉಳಿದವರಿಗೆ ಕೇಳಿಸದಂತೆ ಆರ್ತಭಾಗರಿಗೆ ಮಾತ್ರ ಉಪದೇಶಿಸಿದರು.

ಅನಂತರ ಲಹ್ಯಪುತ್ರರಾದ ಭುಜ್ಯು ಎಂಬ ಋಷಿಯ ಪ್ರಶ್ನೆಗಳಿಗೆ ಉತ್ತರಿಸುತ್ತ ದೇವ-ಋಷಿ ಇತ್ಯಾದಿ ಎಂಟು ವರ್ಗದವರನ್ನು ಮತ್ತು ಗರುಡ-ಶೇಷ-ರುದ್ರ-ಇಂದ್ರ ಹಾಗೂ ಅವರ ಪತ್ನಿಯರೇ ಮೊದಲಾದ ಎಂಟುವರ್ಗದವರನ್ನು ಮುಕ್ತಿಗೆ ಒಯ್ಯುವ ವ್ಯಷ್ಟಿ-ಸಮಷ್ಟಿನಾಮಕ ವಾಯುದೇವರ ಬಗ್ಗೆ, ತದಂತರ್ಗತ ಶ್ರೀಹರಿಯ ಬಗ್ಗೆ ವಿವರಿಸಿದರು.

ಚಕ್ರಪುತ್ರ ಉಪಸ್ತರಿಗೆ ಭಗವಂತನ ಲಕ್ಷಣಗಳನ್ನು ಹಾಗೂ ಮಹಿಮೆಗಳನ್ನು, ಕುಷೀತಕ ಪುತ್ರ ಕಹೋಳರಿಗೆ ಮುಕ್ತ ಹಾಗೂ ಭಗವಂತರ ಮಧ್ಯದಲ್ಲಿರುವ ಭೇದವನ್ನು, ಭಗವಂತನ ವೈಶಿಷ್ಟ್ಯವನ್ನು, ಅವನ ಆನಂದಪರಿಪೂರ್ಣತ್ವವನ್ನು ಹಾಗೂ ವಿಷ್ಣುಸರ್ವೋತ್ತಮತ್ವವನ್ನು ವಿವರಿಸಿದರು.

ಇಷ್ಟೆಲ್ಲ ಚರ್ಚೆಯನ್ನು ಏಕಾಗ್ರಮನಸ್ಸಿನಿಂದ ಲಕ್ಷ್ಯಗೊಟ್ಟು ಕೇಳುತ್ತಿರುವ ಅವರ ಪತ್ನಿ ಋಷಿಕೆ ವಾಚಕ್ನವೀ ಗಾರ್ಗಿಯು ಪ್ರಶ್ನೆಗಳನ್ನು ಕೇಳುತ್ತಾಳೆ -

"ಅಥ ಹೈನಂ ಗಾರ್ಗೀ ವಾಚಕ್ನವೀ ಪಪ್ರಚ್ಛ ........" ... ಕ್ರಮಶ:

# ನವವಧುವಿಗೆ ಕಿವಿಮಾತು - ೮

**ವನಿತಾ ವಿಜ್ಞಾನ**

✍ ಪಂ. ಆತ್ರೇಯ ಪ್ರಹ್ಲಾದ

(ಶಾಸ್ತ್ರಗಳು ಕೇವಲ ಹೆಣ್ಣುಮಗಳಿಗೆ ಮಾತ್ರ ಉಪದೇಶಿಸುವದಿಲ್ಲ. ಹೊರತು ಗಂಡ-ಹೆಂಡತಿ ಇಬ್ಬರೂ ಸೇರಿ ಮಾಡುವ ಕರ್ತವ್ಯಗಳನ್ನು ಉಪದೇಶಿಸುತ್ತವೆ.)

ಪರಸ್ಪರರಲ್ಲಿ ಮಾಡುವ ಅಪಮಾನ, ತಿರಸ್ಕಾರ ಅಶಾಸ್ತ್ರೀಯ --

ಇಂದು ಆಧುನಿಕ-ಸುಶಿಕ್ಷಿತ ಗಂಡ-ಹೆಂಡತಿಯರಿಬ್ಬರಲ್ಲಿಯೂ ಅನವಶ್ಯಕ ಅಹಂಕಾರ (Ego) ಹೆಚ್ಚಾಗಿದೆ. ಹೀಗಾಗಿ ಸಣ್ಣ ಪುಟ್ಟ ಕಾರಣಕ್ಕಾಗಿ ಇಬ್ಬರಲ್ಲಿಯೂ ವಾದ-ವಿವಾದ (argument) ಹೆಚ್ಚಾಗಿ ಒಬ್ಬರು ಇನ್ನೊಬ್ಬರನ್ನು ನೀವು ನನಗಿಂತ ಕಡಿಮೆ ಎಂದು ಅಪಮಾನಿಸುವದು, ತಿರಸ್ಕರಿಸುವದು ಸರ್ವೇಸಾಮಾನ್ಯವಾಗಿದೆ. ಇದರಿಂದಾಗಿ ಪರಸ್ಪರರು ತಿಳಿಯದೇ ತಮ್ಮಲ್ಲಿದ್ದ ಭಗವಂತನ ಸನ್ನಿಧಾನವನ್ನು ಅಪಮಾನಿಸುತ್ತ ಪಾಪಗಳಿಸಿ ದುಃಖಿತರಾಗುತ್ತಿದ್ದಾರೆ. ಇದು ಸರಿಯಲ್ಲ.

ದಂಪತಿಗಳಲ್ಲಿ (ಗಂಡ ಹಾಗೂ ಹೆಂಡತಿಯಲ್ಲಿ) ಒಳ್ಳೆಯ ಸಂತಾನಪ್ರದರಾಗಿ ಸನ್ನಿಹಿತರಾದ ಪ್ರಾಣದೇವರು ಹಾಗೂ ರಯಿ(ಭಾರತಿ-ಸರಸ್ವತಿ)ಯ ಅಂತರ್ಗತರಾದ ಲಕ್ಷ್ಮೀನಾರಾಯಣರ ಸನ್ನಿಧಾನವಿರುತ್ತದೆ ಎಂದು ತಿಳಿದು ವ್ಯವಹರಿಸುವವರನ್ನು ಶ್ರೀಹರಿಯು ಅನುಗ್ರಹಿಸುತ್ತಾನೆ --

**"ದಂಪತ್ಯೋರ್ಭಗವಾನ್ ವಿಷ್ಣುಃ ಭಾರ್ಯಾಸ್ಥಾ ತು ಸರಸ್ವತೀ ।**
**ಭರ್ತೃಸ್ಥಃ ಸ ಸ್ವಯಂ ವಾಯುಃ ಏವಂ ಜಾನನ್ ವಿಮುಚ್ಯತೇ ॥"**

(ಪ್ರಜಾಪತಿಸಂಹಿತಾ -ಷಟ್ಪ್ರಶ್ನೋಪನಿಷದ್ಭಾಷ್ಯ-- ೧/೯)

ಅನವಶ್ಯಕವಾಗಿ ಒಬ್ಬರು ಇನ್ನೊಬ್ಬರನ್ನು ಅಪಮಾನಿಸುವುದೆಂದರೆ (ಗುರು-ಗುರುಪತ್ನಿ, ತಂದೆ-ತಾಯಿ, ಅತ್ತೆ-ಮಾವ ಇತ್ಯಾದಿ) ಅವರಲ್ಲಿದ್ದ ದೇವತೆಗಳನ್ನು ಅಪಮಾನಿಸಿದಂತಾಗುವದನ್ನು ಸರಿಯಾಗಿ ತಿಳಿದು ಅಲ್ಲಿದ್ದ ದೇವತೆಗಳನ್ನು ಸಂತಸಪಡಿಸಲು ಪರಸ್ಪರ ಆದರದಿಂದ ವ್ಯವಹರಿಸುವದು ಸುಖದ ನಾಂದಿಯಾಗಿದೆ.

**"ವಿವಾಹ" ಜಗಳವಾಡಿ ವಿಚ್ಛೇದನ ಪಡೆಯುವದಕ್ಕೋಸ್ಕರವಲ್ಲ -**

ಭಾರತೀಯ ಸಂಸ್ಕೃತಿಯಲ್ಲಿ ವಿವಾಹವು ದಿನಾಲು ಜಗಳವಾಡುತ್ತ ಅತ್ತು-ಕರೆದು ದುಃಖಪಡುವುದಕ್ಕಾಗಲೀ ಅಥವಾ ಒಂದುದಿನ ವಿಚ್ಛೇದವನ್ನು ಪಡೆಯುವದಕ್ಕೋಸ್ಕರ ಆಗಲೀ ಇರುವದಲ್ಲ. ಅಗ್ನಿಸಾಕ್ಷಿ ವಿವಾಹವು ಜನ್ಮ-ಜನ್ಮಾಂತರ ಶ್ರೀಹರಿಯ ಅನುಗ್ರಹಕ್ಕಾಗಿ ಸಾಧನ ಮಾಡುವದಕ್ಕೋಸ್ಕರ ವಿಹಿತವಾಗಿದೆ.

ಅಕ್ಷತಾರೋಪಣಕ್ಕಾಗಿ ಅಂತಃಪಟದ ಎದುರು ನಿಂತ ವರನು ದೇವತೆಗಳಿಗೆ "ವರುಣನೇ ! ಈ ವಧುವು ನನ್ನ ಅಣ್ಣ-ತಮ್ಮ-ಅಕ್ಕ-ತಂಗಿಯರಿಗೆ ಸುಖಕಾರಕಳಾಗಲಿ,

ಬೃಹಸ್ಪತಿಯೇ ! ಇವಳು ನನಗೆ ಸುಖಪ್ರದಳಾಗಲಿ, ಇಂದ್ರನೇ ! ಇವಳು ನಮ್ಮ ಮಕ್ಕಳಿಗೆ ಸುಖದಾಯಕಳಾಗಲಿ, ಸೂರ್ಯನೇ ! ಇವಳು ದೈವೀಸಂಪತ್ಪ್ರದಳಾಗಲಿ" ಎಂದು ಪ್ರಾರ್ಥಿಸುವನು --

**ಅಭ್ರಾತೃಘ್ನೀಂ ವರುಣಾಪತಿಘ್ನೀಂ ಬೃಹಸ್ಪತೇ।**
**ಇಂದ್ರಾಪುತ್ರಘ್ನೀಂ ಲಕ್ಷ್ಮ್ಯಂತಾಮಸ್ಯೈ ಸವಿತಃ ಸುವಃ ॥**

ಜ್ಞಾನಿಗಳು ಹಾಗೂ ಹಿರಿಯರು ಅಕ್ಷತಾರೋಪಣ ಮಾಡಿ ಅಂತಃಪಟ ಸರಿಸಿದಾಕ್ಷಣ ವರನು ವಧುವಿಗೆ ಹೀಗೆ ಆಶೀರ್ವದಿಸುತ್ತಾನೆ -

"ಎಲೈ ವಧುವೇ ! ನಿನ್ನ ದೃಷ್ಟಿ ಮಂಗಲಕರವಾಗಿರಲಿ. ನೀನು ಪತಿಗೆ ಹಿತಕರಳಾಗು. ನಿನ್ನ ಕಾಲ್ಗುಣದಿಂದ ನಮ್ಮ ಮನೆಯಲ್ಲಿರುವ ಆಕಳು, ಎತ್ತು ಇತ್ಯಾದಿ ಪಶುಗಳು ಸುಖಕರಗಳಾಗಲಿ. ನಿನ್ನ ಮನಸ್ಸು ಮಂಗಲಕರವಾಗಿರಲಿ. ನಿನ್ನ ಕಾಂತಿಯಿಂದ ಮನೆ ಬೆಳಗಲಿ. ಶ್ರೇಷ್ಠ ಸಂತಾನಗಳನ್ನು ಪಡೆಯುವವಳಾಗು. ದೇವರಲ್ಲಿ ಶ್ರದ್ಧೆ ಇಡುವವಳಾಗು. ಮನೆಯಲ್ಲಿರುವ ಸಕಲ ಜೀವಿಗಳಿಗೆ ನಿನ್ನಿಂದ ಸುಖ-ನೆಮ್ಮದಿಗಳು ಸಿಗಲಿ" -

**ಅಘೋರಚಕ್ಷುರಪತಿಘ್ನ್ಯೇಧಿ ಶಿವಾ ಪಶುಭ್ಯಃ ಸುಮನಾಃ ಸುವರ್ಚಾಃ ।**
**ವೀರಸೂಃ ದೇವಕಾಮಾ ಸ್ಯೋನಾ ಶಂ ನೋ ಭವ ದ್ವಿಪದೇ ಶಂ ಚತುಷ್ಪದೇ ।**

ಋಗ್ವೇದ ೧೦/೮೫/೪೪.

ಅನಾದಿಕಾಲದಿಂದಲೂ ಗಂಡನು ಹೆಂಡತಿಯಿಂದ ಬಯಸುವ ವಿಶಿಷ್ಟತೆಗಳು ಅದೆಷ್ಟು ಉದಾರವಾಗಿವೆ ? ಈ ಸಂಕಲ್ಪನೆಗಳನ್ನು ಇಂದಿನ ಯುವಕ ಯುವತಿಯರು ಅರ್ಥ ಮಾಡಿಕೊಳ್ಳಬೇಕು. ಪಾಶ್ಚಾತ್ಯರ ಅಂಧಾನುಕರಣ ಮಾಡುತ್ತ ದೇಹದಿಂದ ಮಾತ್ರ ಭಾರತೀಯರಾಗಿ; ಆದರೆ ವೇಷ-ಕೂದಲು ಕಟ್ಟುವ (ಕಟ್ ಮಾಡುವ) ಶೈಲಿ, ಭಾಷೆ, ಹೊರಗಿನ ಆಹಾರ, ಅಪಾರ ಹಣವನ್ನು ಗಳಿಸಿ ಪಾಪದಾಯಕ ಅಭಕ್ಷ್ಯ-ಅಪೇಯಗಳಿಗೆ, ಅನವಶ್ಯಕ ವೇಷ-ಭೂಷಣಗಳಿಗೆ ಖರ್ಚು ಮಾಡುವಿಕೆ, ಓದುವ ಪುಸ್ತಕ, ನೋಡಿ ಕೇಳುವ ವಿಷಯಗಳು ಎಲ್ಲವೂ ವಿದೇಶೀಯರ ಅಂಧಾನುಕರಣೆ. ಇದು ಇಂದಿನ ಪತಿ-ಪತ್ನಿಯರ ನಿಜವಾದ ಚಿತ್ರವಾಗಿದೆಯಲ್ಲವೇ ? ನಮ್ಮ ಶಾಸ್ತ್ರಗಳ ಹೆಸರು ಗೊತ್ತಿಲ್ಲ. ಅಲ್ಲಿಯ ವಿಷಯಗಳನ್ನು ಸರ್ವಥಾ ತಿಳಿದುಕೊಂಡಿಲ್ಲ. ಆಚರಣೆಯಂತೂ ಇಲ್ಲವೇ ಇಲ್ಲ. ಹೀಗಾಗಿ ನಾವು ಇಂದು ಸ್ವತಂತ್ರ ಭಾರತದಲ್ಲಿದ್ದೂ ವೈಚಾರಿಕವಾಗಿ ವಿದೇಶೀಯರ ದಾಸರಾಗಿದ್ದೇವೆ. ನಮ್ಮನ್ನು ಹೀಗೆಯೇ ವೈಚಾರಿಕದಾಸರನ್ನಾಗಿ ಮಾಡಲು ೧೭೫ ವರ್ಷಗಳ ಹಿಂದೆಯೇ ಭಾರತದಲ್ಲಿ ಪಾಶ್ಚಾತ್ಯ ಶಿಕ್ಷಣಜನಕನಾದ Lard Macaulay ಎಂಬ ಅಧಿಕಾರಿಯು ೧೮೫೮ ರಲ್ಲಿಯೇ ಕನಸು ಕಂಡಿದ್ದನು--" English education would trainup A class of persons Indian in blood and colour only but English men in opinions in morals and in intellects. ಇಂದು ಅವನ ಕನಸನ್ನು ನನಸು ಮಾಡುತ್ತ, ಶ್ರೀಕೃಷ್ಣನು

ಹೇಳಿದ "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಮಾತನ್ನು ಮೂಲೆಗುಂಪು ಮಾಡಿ, ವಿದೇಶೀಯರ ಅಂಧಾನುಕರಣ ಮಾಡುತ್ತ ಅವರ ದಾಸರಾಗಿದ್ದೇವೆ.

ಇಷ್ಟೆಲ್ಲ ವಿವರಣೆ ಯಾರನ್ನೂ ಟೀಕಿಸುವುದಕ್ಕೋಸ್ಕರವಲ್ಲ. ನಮ್ಮ ವಿಶಾಲ-ಉದಾರ-ಆನಂದದಾಯಕ ಸಂಸ್ಕೃತಿಯನ್ನು ಮರೆಯುತ್ತಿರುವೆವಲ್ಲ; ದೇವರ ಆಜ್ಞೆಯನ್ನು ಮೀರಿ ದುಃಖಿತರಾಗುತ್ತಿರುವೆವಲ್ಲ ? ಎಂಬ ಕಳವಳದಿಂದ ಬಂದ ಮಾತುಗಳಾಗಿವೆ.

ಇಂದಿನ ಹೆಣ್ಣುಮಕ್ಕಳು ಮೇಲಿಂದ ಮೇಲೆ ಕೇಳುವ ಇನ್ನೊಂದು ಪ್ರಶ್ನೆಯೆಂದರೆ - ನಮ್ಮನ್ನು ದಾನವಾಗಿ ಕೊಡುತ್ತೀರಲ್ಲ; ನಾವೇನು ಜಡ ವಸ್ತುಗಳೇ ? ನಾವು ಪ್ರೀತಿಸಿದ ಹುಡುಗನ ಜತೆಯಲ್ಲಿ ಮದುವೆಯಾಗುವ ಸ್ವಂತಿಕೆಗೆ ಬೆಲೆಯಿಲ್ಲವೇ ?

ನೀವು ಜಡವಸ್ತುವಲ್ಲ. ಹುಟ್ಟಿದ ಮನೆ ಹಾಗೂ ಗಂಡನ ಮನೆ ಎರಡನ್ನೂ ಉದ್ಧರಿಸುವ ದೇವತೆಗಳು "ಕನ್ಯೋದಿತಾ ಬತ ಕುಲದ್ವಯತಾರಿಣೀತಿ" (ಮ.ಭಾ.ತಾ.ನಿ ೧೯/೭೬) ದೇವತಾಶಬ್ದದ ಅನೇಕ ಪರಿಭಾಷೆಗಳಲ್ಲಿ "ದೀಪನಾತ್ ದೇವತಾ" ತನ್ನ ಗುಣ-ಪರಿಶ್ರಮ-ಉಪಕಾರ-ಸಹನಶೀಲತೆ-ದೈವಭಕ್ತಿ ಹಾಗೂ ವಿನಯಗಳಿಂದ ಮನೆಯನ್ನು ಬೆಳಗುವದರಿಂದ ಹೆಣ್ಣುಮಕ್ಕಳನ್ನು ದೇವತೆ ಎಂದು ಶಾಸ್ತ್ರವು ಕರೆದಿದೆ. "ಮಾತೃದೇವೋ ಭವ" ಕನ್ಯಾದಾನದಿಂದ ಕನ್ಯೆಯು ಹುಟ್ಟಿದ ಮನೆಯ ಮೊದಲಿನ ೧೨ ಹಾಗೂ ನಂತರ ೧೨ ತಲೆಮಾರುಗಳು (Generation) ಪವಿತ್ರವಾಗುವವು. ಕನ್ಯೆಯ ತಂದೆಗೆ ಭಗವಂತನ ಅನುಗ್ರಹವಾಗುವದು.

ಕನ್ಯಾದಾನದ ಸಂಕಲ್ಪದಲ್ಲಿ ಈ ವಿಷಯ ಬಹಳ ಸ್ಪಷ್ಟವಾಗಿದೆ. "ಅನೇನ ಕನ್ಯಾದಾನೇನ ದ್ವಾದಶ ಅವರಾನ್ ದ್ವಾದಶ ಅಪರಾನ್ ಪವಿತ್ರೀಕರ್ತುಂ ಆತ್ಮನಶ್ಚ ಶ್ರೀ ಲಕ್ಷ್ಮೀನಾರಾಯಣ ಪ್ರೀತಯೇ......." ಕನ್ಯಾದಾನದ ಸಂದರ್ಭದಲ್ಲಿ ಕನ್ಯೆಯಲ್ಲಿ ಮಹಾಲಕ್ಷ್ಮಿಯನ್ನು ಹಾಗೂ ವರನಲ್ಲಿ ಶ್ರೀಹರಿಯ ಸನ್ನಿಧಾನವನ್ನು ಕಲ್ಪಿಸಲಾಗುವದು "ಶ್ರೀಧರರೂಪಿಣೇ ಕನ್ಯಾರ್ಥಿನೇ ವರಾಯ......ಕನ್ಯಾಂ ಶ್ರೀರೂಪಿಣೀಂ" ಪಿತೃಗಳ ಹಾಗೂ ಲಕ್ಷ್ಮೀನಾರಾಯಣರ ಅನುಗ್ರಹ ದಿಂದ ವಧುವು ಗಂಡನ ಜೀವನವನ್ನು ಸಾರ್ಥಕಗೊಳಿಸುವುದಲ್ಲದೇ; ಸಕಲ ಸುಖಗಳನ್ನು ಅನುಭವಿಸುವಳು. ಇದಕ್ಕಾಗಿ ಕನ್ಯೆಯರು ಶಾಸ್ತ್ರ ಹಾಗೂ ಹಿರಿಯರ ಮಾರ್ಗದರ್ಶನದಲ್ಲಿ ನಮ್ಮ ಸಂಸ್ಕೃತಿಯ ಜ್ಞಾನವನ್ನು ಸಂಪಾದಿಸಿ, ಶರೀರ-ಮನಸ್ಸು-ಬುದ್ಧಿ-ವಿಚಾರಗಳನ್ನು ಪವಿತ್ರಗೊಳಿಸಿಕೊಳ್ಳಬೇಕು. ಆಧುನಿಕ ಶಿಕ್ಷಣವು ಹೊಟ್ಟೆಹೊರೆಯವದನ್ನು ಮಾತ್ರ ಕಲಿಸುವುದಲ್ಲದೇ; ಅಹಂಕಾರ ಹಾಗೂ ಭೋಗಸಂಸ್ಕೃತಿಯ ಕಡೆಗೆ ನಮ್ಮನ್ನು ನೂಕುತ್ತದೆ.

ಕನ್ಯಾದಾನವನ್ನು ಸ್ವೀಕರಿಸಿದ ವರನ ತಲೆಯಮೇಲೆ ವಧುವು ಅಕ್ಷತೆಗಳನ್ನು ಹಾಕುತ್ತ ನಾನು ತಮ್ಮಿಂದ -- ೧) "ಭಗ" ವನ್ನು = ಐಶ್ವರ್ಯ-ವೀರ್ಯ-ಕೀರ್ತಿ-ಕಾಂತಿ-ಜ್ಞಾನ-ವಿಜ್ಞಾನಗಳನ್ನು (ಐಶ್ವರ್ಯಸ್ಯ ಸಮಗ್ರಸ್ರ ವೀರ್ಯಸ್ಯ ಯಶಸಃ ಶ್ರಿಯಃ । ಜ್ಞಾನವಿಜ್ಞಾನ-

ಯೋಶ್ಚೈವ ಷಣ್ಣಾಂ ಭಗ ಇತೀರಣಾ) ೨) ಶ್ರೀಃ - ದೈವೀಸಂಪದವನ್ನು ೩) ಪ್ರಜಾಃ - ಉತ್ತಮ ಸಂತಾನಗಳನ್ನು ಬಯಸಿ ಬಂದಿದ್ದೇನೆ. ದೇವರು ಇವುಗಳನ್ನು ಕರುಣಿಸಲಿ ಎಂದು ಪ್ರಾರ್ಥಿಸುವಳು.

ಆಗ ವರನೂ ಸಹ ವಧುವಿನ ತಲೆಯ ಮೇಲೆ ಅಕ್ಷತೆಗಳನ್ನು ಹಾಕುತ್ತ -- ನಾನು ನಿನ್ನಿಂದ

೧) ಯಜ್ಞಃ = ಯಜ್ಞ-ಯಾಗಾದಿ ಧಾರ್ಮಿಕಕಾರ್ಯಗಳಲ್ಲಿ ಪೂರ್ಣ ಸಹಕಾರವನ್ನು

೨) ಧರ್ಮಃ = ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಪುರುಪಾರ್ಥಗಳ ಪ್ರಾಪ್ತಿ

೩) ಯಶಃ = ಆದರ್ಶದಂಪತಿಗಳೆಂಬ ಕೀರ್ತಿಯನ್ನು ಬಯಸಿ ನಿನ್ನನ್ನು ಸ್ವೀಕರಿಸುತ್ತಿದ್ದೇನೆ, ದೇವರು ಈ ಕಾಮನೆಗಳನ್ನು ಪೂರೈಸಲಿ ಎಂದು ಪ್ರಾರ್ಥಿಸುತ್ತಾನೆ.

ಮದುವೆಯ ಸಂದರ್ಭದಲ್ಲಿ ಇಷ್ಟೆಲ್ಲ ನಾವು ದೇವರಲ್ಲಿ ಪ್ರಾರ್ಥಿಸಿದ್ದೇವೆ ಎಂದು ಎಷ್ಟು ಜನರು ತಿಳಿದುಕೊಂಡು ಆ ದಾರಿಯಲ್ಲಿ ಪ್ರಯತ್ನಿಸುತ್ತಿರುವರು? ........ -ಕ್ರಮಶಃ ...

## ಯಾರು ಸ್ತ್ರೀ ....?

ಸ್ತ್ರೀ ಎಂಬ ಶಬ್ದಕ್ಕೆ ಹೀಗೊಂದು ಸುಂದರವಾದ ಅರ್ಥವನ್ನು ತಿಳಿಯಬಹುದು. ಈ ಅರ್ಥವನ್ನು ತಿಳಿಯಲು ವಿಷ್ಣುಧರ್ಮೋತ್ತರಪುರಾಣ ಮತ್ತು ಪದ್ಮಪುರಾಣಗಳ ಮೊರೆ ಹೋಗಬೇಕು.

**ಕರ್ಮಣಾ ಮನಸಾ ವಾಚಾ ಭರ್ತುಃ ಪ್ರಿಯಹಿತೈಷಿಣೀ ।**
**ಯಾ ನಾರೀ ಸಾ ಸ್ಮೃತಾ ಸಾಧ್ವೀ ಪತಿಪೂಜನತತ್ಪರಾ ॥ ವಿ.ಧ.ಪು**
**ವಾಚಾ ಸುಮನಸಾ ಚೈವ ಕರ್ಮಣಾ ಶೃಣು ಭಾಮಿನಿ ।**
**ಶುಶ್ರೂಷಾ ಕುರುತೇ ಯಾ ಹಿ ಭರ್ತುಶ್ಚೈವ ದಿನೇ ದಿನೇ ॥**
**ಸಾ ಚಾಪಿ ಕಥ್ಯತೇ ನಾರೀ ಪತಿವ್ರತಪರಾಯಣಾ ॥ ಪ.ಪು.ಭೂ.ಖ**

ತ್ರಿ=ಮಾತು, ಮನಸ್ಸು, ಕರ್ಮ ಈ ಮೂರರಿಂದ ಸ್=ಸಹಿತಳಾದವಳು ಸ್ತ್ರೀ. (ತ್ರಿಭಿಃ ಸಹಿತಾ)

ಪತಿಯ ಅಂತರ್ಯಾಮಿಯಾದ ಪರಮಾತ್ಮನ ಆರಾಧನೆಯನ್ನು ಸದಾ ಸತಿಯು ಮಾಡುತ್ತಿರಬೇಕು. ಕಾಟಾಚಾರಕ್ಕಾಗಿ ಮಾಡಿದರೆ ಯಾವ ಪ್ರಯೋಜನವಿಲ್ಲ. ಮಾಡುವಾಗ ಮನಸ್ಸು ಮುಂದಾಗಿರಬೇಕು. ಉಲ್ಲಾಸ, ಉತ್ಸಾಹ, ಲವಲವಿಕೆ ಇರಬೇಕು. ಮನಸ್ಸಿದ್ದರೆ ಮಾತ್ರ ಸಾಲದು. ಹಿತವಾದ ಮಾತುಗಳಿಂದ ಪತಿಯನ್ನು, ಪತ್ಯಂತರ್ಯಾಮಿಯಾದ ಪರಮಾತ್ಮನನ್ನು ಸಂತೋಷಪಡಿಸುತ್ತಿರಬೇಕು. ಹಾಗೆಂದು ಮಾತಿನ ಮಲ್ಲಿಯಾಗಬಾರದು. ಪತಿಗೆ ಅನುಕೂಲಕರವಾದ ಕರ್ಮಗಳನ್ನು ಮಾಡುತ್ತಿರಬೇಕು. ಹೀಗೆ ತ್ರಿಕರಣ ಪೂರ್ವಕವಾಗಿ ಪತಿಯ ಸೇವೆಯನ್ನು ಮಾಡಿದ ಸತಿಗೆ ಶ್ರೀಪತಿಯು ಒಡನೆಯೇ ಒಲಿಯುತ್ತಾನೆ.

ಆದ್ದರಿಂದ ತ್ರಿ=ಪತಿಯ ಸೇವೆಗಾಗಿ ಮನಸ್ಸು, ಮಾತು, ಕರ್ಮ ಈ ಮೂರರಿಂದ ಸ್=ಸಹಿತಳಾದವಳು ಸ್ತ್ರೀ.

# ಲಕ್ಷ್ಮೀನರಸಿಂಹಾತ್ಮಕ ವಿಶೇಷಣದ ಔಚಿತ್ಯ

✍ ಪಂ. ಸಗ್ರಿ ರಾಘವೇಂದ್ರಾಚಾರ್ಯ

**"ದೇಶಕಾಲಾಧಿಪತೇ" ವಿಶೇಷಣದ ಸ್ವಾರಸ್ಯ**

"......... ಕರಿಷ್ಯೇ........ ಕಾರಯಿಷ್ಯೇ ಚ" ಎಂದು ನಡೆಸಲಾಗುವ ಸಂಕಲ್ಪಕ್ಕೆ ಪಾತ್ರನಾಗಿ ಪ್ರಾತಃಸಂಕಲ್ಪಗದ್ಯದಲ್ಲಿ ಉಲ್ಲೇಖಿಸಲ್ಪಡುವ ರಾಮಚಂದ್ರನಿಗೆ "ದೇಶಕಾಲಾಧಿಪತೇ ......" ಎಂಬ ವಿಶೇಷಣವನ್ನು ನೀಡಲಾಗಿದೆ. ಇದರ ಅನುಸಂಧಾನಿಕ ಸ್ವಾರಸ್ಯವನ್ನು ಆಸ್ವಾದಿಸೋಣ. ದೇಶಕಾಲಗಳ ಆಧಾರಾಧೇಯಭಾವಸಂಬಂಧಕ್ಕೊಳಗಾಗಿಯೇ ಪ್ರತಿಯೊಂದು ಪದಾರ್ಥವೂ ತನ್ನ ಅಸ್ತಿತ್ವವನ್ನು = ಇರವನ್ನು ಹೊಂದುವಷ್ಟು ದೇಶಕಾಲಗಳು ಪ್ರತಿಯೊಂದು ಪದಾರ್ಥಕ್ಕೂ ಆಧಾರವಾಗಿರುವವು. ಆದ್ದರಿಂದಲೇ ಭಗವಂತನಲ್ಲಿ ಸಮರ್ಪಿಸಬೇಕಾದ ಪ್ರತಿಯೊಂದು ಸಾಧನಾನುಷ್ಠಾನಕ್ಕೂ ದೇಶಕಾಲಗಳು ಆಧಾರವಾಗಿದ್ದಿರಬೇಕು. ಕೇವಲ ಸಾಧನಾನುಷ್ಠಾನಕ್ಕಷ್ಟೇ ಅಲ್ಲ. ಸಾಧನಾನುಷ್ಠಾನಕ್ಕೆ ಅವಶ್ಯಕಗಳಾದ ಸಾಧನಾಶರೀರ, ಗಾಳಿ, ಬೆಳಕು, ಆಹಾರ, ನೀರು, ಪ್ರತಿಮೆ ಮುಂತಾದ ಪಾರ್ಥಿವ ಪದಾರ್ಥಗಳು ಇವೆಲ್ಲವುಗಳಿಗೂ ಆಧಾರವಾಗಿ ಕಾಲವೂ, ದೇಶವೂ ಬೇಕೇಬೇಕು. ಕಾಲ ವ್ಯಾಪ್ತ, ದೇಶ ವಿಶಾಲ. ಇಂತಹ ವ್ಯಾಪ್ತವಾದ, ವಿಶಾಲವಾದ ಕಾಲ, ದೇಶಗಳು ಸಾಧನಾನುಷ್ಠಾನಕ್ಕೆ ಬೇಕಾಗಿಲ್ಲ. ಆದರೆ ಅಂತಹ ವ್ಯಾಪ್ತವಾದ ಕಾಲದ, ವಿಶಾಲವಾದ ದೇಶದ ಘಟಕವಾದ ಬಿಂದುಭಾಗ ಬೇಕು. ಈ ಘಟಕ ಭಾಗಗಳಾದರೂ ಮಹಾಕಾಲನ್ನು ವಿಶಾಲದೇಶವನ್ನೂ ಸಂಬಂಧಿಸಿಕೊಂಡೇ ಇರುವವು. ಅಂದರೆ ಯಾವುದೋ ಬಿಂದುದಿನದಲ್ಲಿ ಸಂಧ್ಯಾವಂದನೆ ನಡೆಸುತ್ತಿದ್ದೇವೆ ಎಂದರೆ ಆ ದಿನ ಯಾವುದರ ಘಟಕವಾಗಿದೆಯೋ ಅಂತಹ ಪಕ್ಷವನ್ನಾಗಲೀ ಮಾಸವನ್ನಾಗಲೀ, ಸಂವತ್ಸರವನ್ನಾಗಲೀ ಸಂಬಂಧಿಸಿಕೊಳ್ಳದೇ ತಾನು ತಾನಾಗಿಯೇ ಇರಲಾರದು. ಅಂತೆಯೇ ಯಾವುದೋ ಒಂದು ಊರಿನ ಮನೆಯಲ್ಲಿ ನಾವು ಸಂಧ್ಯಾವಂದನೆ ನಡೆಸುತ್ತಿರುವೆವೆಂದರೆ ಆ ಊರು ಯಾವ ರಾಜ್ಯದ, ಯಾವ ದೇಶದ ಘಟಕವಾಗಿದೆಯೋ ಅಯಾ ರಾಜ್ಯ, ದೇಶ ಮುಂತಾದವನ್ನು ಸಂಬಂಧಿಸಿಕೊಂಡೇ ಇರುವಂತಹದ್ದು. ಆದ್ದರಿಂದಲೇ ನಾವು ಸಂಕಲ್ಪದಲ್ಲಿ ಪ್ರಕೃತ ಸಾಧನಾನುಷ್ಠಾನಕ್ಕೆ ಆಧಾರವಾಗಿರುವ ದೇಶವನ್ನೂ, ಕಾಲವನ್ನೂ, ಉಲ್ಲೇಖಿಸುವಾಗ "ಆದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಮೇರೋಃ ದಕ್ಷಿಣಪಾರ್ಶ್ವೇ" ಎಂದು ಅಂತಹ ದೊಡ್ಡ ಗಡುವನ್ನು ಉಲ್ಲೇಖಿಸಿ ಕ್ರಮೇಣ ಅವುಗಳ ಚಿಕ್ಕ ಚಿಕ್ಕ ಭಾಗಗಳನ್ನು ನಮೂದಿಸುತ್ತೇವೆ. ಕೊನೆಯಲ್ಲಿ ನಮ್ಮ ಸಾಧನಾನುಷ್ಠಾನಕ್ಕೆ ಬೇಕಾದ ಕಾಲದ ದೇಶದ ಚಿಕ್ಕ ಭಾಗವನ್ನು ಉಲ್ಲೇಖಿಸುತ್ತೇವೆ.

ಹಾಗಾದರೆ ನಮ್ಮ ಸಾಧನಾನುಷ್ಠಾನಕ್ಕೆ ಆಧಾರವಾಗಿ ಆವಶ್ಯಕಗಳಾದ ಕಾಲವನ್ನು ದೇಶವನ್ನೂ ಒದಗಿಸಿಕೊಡುವ ಭಗವಂತ ಆಯಾ ಕಾಲಭಾಗವನ್ನು, ಆಯಾ

ದೇಶಭಾಗವನ್ನು ಅಷ್ಟೇ ಒದಗಿಸಿಕೊಡಲಾಗದು. ಬದಲಾಗಿ ಸಮಗ್ರ ಕಾಲಚಕ್ರವನ್ನು ಸಂಪೂರ್ಣ ಬ್ರಹ್ಮಾಂಡವನ್ನು ನಿಯಮಿಸುತ್ತ ಅವುಗಳ ತುಣುಕಾಗಿಯಷ್ಟೇ ಆಯಾ ಕಾಲದ ಆಯಾ ದೇಶದ ಭಾಗವನ್ನು ಒದಗಿಸಿಕೊಡಬೇಕು. ರಾಮಚಂದ್ರನಲ್ಲಿ ನಮ್ಮ ನಿತ್ಯ ನೈಮಿತ್ತಿಕ ಕಾಮ್ಯಕರ್ಮಗಳ ಕರ್ತೃ ಹಾಗೂ ಕಾರಯಿತೃ ನೀನೇ ಎನ್ನುವಾಗ ಹಾಗೆ ಕರ್ತೃ ಎನಿಸುವಿ. ಕಾರಯಿತೃ ಎನಿಸಲು ಆಧಾರವಾಗಿ ಬೇಕಾದ ದೇಶದ ಭಾಗವನ್ನೂ, ಕಾಲದ ಭಾಗವನ್ನೂ ಒದಗಿಸಿಕೊಡುವವನು ನೀನೇ ಎಂದೂ ಸೂಚಿತವಾಗುವುದು.

ಹೀಗೆ ಕಾಲದ ಭಾಗವನ್ನೂ, ದೇಶದ ಭಾಗವನ್ನೂ ಒದಗಿಸಿಕೊಡಬೇಕೆಂದರೆ ಆಯಾ ಭಾಗಕ್ಕಷ್ಟೇ ಒಡೆಯನಾದರೆ ಸಾಲದು. ಬದಲಾಗಿ ಸಮಗ್ರ ದೇಶಕಾಲಗಳಿಗೆ ಒಡೆಯ-ನಾಗಿದ್ದಿರಬೇಕು. ಇದನ್ನೇ "ದೇಶಕಾಲಾಧಿಪತೇ......." ಎಂದು ಶ್ರೀರಾಮಚಂದ್ರನನ್ನು ಸಂಬೋಧಿಸಿ ನಿವೇದಿಸಿಕೊಳ್ಳಲಾಗಿದೆ. ದೇಶದ ಹಾಗೂ ಕಾಲದ ಚಿಕ್ಕ ಪುಟ್ಟ ಭಾಗಗಳಾಗಿ ಬೇರೆ ಬೇರೆ ಅಭಿಮಾನಿದೇವತೆಗಳು ಒಡೆಯರಾಗಿರುವುದರಿಂದ ರಾಮಚಂದ್ರನಾದರೂ ಹಾಗಲ್ಲ ಮುಖ್ಯ ಒಡೆಯ ಎಂದು ಸೂಚಿಸುವುದಕ್ಕಾಗಿ 'ಅಧಿಪತೇ' ಎನ್ನಲಾಗಿದೆ. "ಅಧಿಕಶ್ಚಾಸೌ ಪತಿಶ್ಚ ಅಧಿಪತಿಃ" ಶ್ರೇಷ್ಠನಾದ ಪತಿ ಎಂದು ಅಧಿಪತಿ ಶಬ್ದದ ಅರ್ಥ.

ಭಗವಂತ ತನ್ನ ಶಿಂಶುಮಾರರೂಪದಲ್ಲಿ ಕಾಲಕ್ಕೆ ಅಧಿಪತಿಯಾಗಿದ್ದರೆ, ವರಾಹರೂಪ-ದಲ್ಲಿ ಭೂಮಿಗೆ ಅಧಿಪತಿಯಾಗಿರುವನು. ರಾಮಚಂದ್ರನಾದರೂ ಅಂತಹ ಶಿಂಶುಮಾರ ವರಾಹ ರೂಪಗಳಿಗಿಂತ ಅತ್ಯಂತಾಭಿನ್ನನಾಗಿರುವುದರಿಂದ 'ದೇಶಕಾಲಾಧಿಪತೇ' ಎಂದು ಸಂಬೋಧಿಸಲಾಗಿದೆ ಎಂದು ಅರ್ಥೈಸಿಕೊಳ್ಳಬೇಕು. ಕರ್ತೃ ಹಾಗೂ ಕಾರಯಿತೃ ನೀನೇ ಎನ್ನುವಾಗ ಹಾಗೆ ಕರ್ತೃ ಎನಿಸುವಿ, ಕಾರಯಿತೃ ಎನಿಸಲು ಆಧಾರವಾಗಿ ಬೇಕಾದ ದೇಶದ ಭಾಗವನ್ನೂ, ಕಾಲದ ಭಾಗವನ್ನೂ ಒದಗಿಸಿಕೊಡುವವನು ನೀನೇ ಎಂದೂ ಸೂಚಿತ-ವಾಗುವುದು.

...ಸಶೇಷ....

## ಮೇಜಿನ ಮೇಲೆ ಊಟಮಾಡಬಾರದು

**ನಾಽನ್ನಮಾಸನಮಾರೋಪಯೇತ್ ॥**

ಅನ್ನವನ್ನು ಆಸನದ ಮೇಲೆ ಎಂದಿಗೂ ಇರಿಸಬಾರದು. ಅರ್ಥಾತ್ ಭೋಜನ ಮಾಡುವಾಗ ಭೋಜನಪಾತ್ರೆಯನ್ನು ಭೂಮಿಯ ಮೇಲೆ ಮಂಡಲ ಮಾಡಿ ಇಟ್ಟುಕೊಳ್ಳಬೇಕು. ಮೇಜಿನ ಮೇಲೆ ಭೋಜನ ಪಾತ್ರೆಯನ್ನಿಟ್ಟುಕೊಂಡು ಊಟ ಮಾಡುವುದನ್ನು ಶಾಸ್ತ್ರ ನಿಷೇಧಿಸುತ್ತದೆ. ಈ ವಿಷಯದಲ್ಲಿ ಸ್ತ್ರೀಯರು ಎಚ್ಚರಿಕೆ ವಹಿಸಬೇಕು. ಅನರ್ಥಕಾರಿಯಾದ ಈ ಪದ್ಧತಿಯನ್ನು ಪರಿತ್ಯಜಿಸಬೇಕು.

# ವಿಷ್ಣುಸಹಸ್ರನಾಮ

✍ ಪಂ. ಪದ್ಮನಾಭಾಚಾರ್ಯ ಚಿಟಗುಪ್ಪ

**456 ಸತಾಂ ಗತಿಃ** - ಸತಾಂ ವಿದ್ಯಮಾನಾನಾಂ ಗತಿಃ ಜ್ಞಾನಂ ಯಸ್ಯ ಸಃ ಎಂದರೆ ಇರುವ ಎಲ್ಲ ವಸ್ತುಗಳ ಜ್ಞಾನವುಳ್ಳವನು ಪರಮಾತ್ಮನು. ಸರ್ವಜ್ಞನಾದ ಭಗವಂತನು ಅನಾದಿಕಾಲದಿಂದ ಅನಂತಕಾಲಗಳಲ್ಲಿ ಆಯಾ ಕಾಲದಲ್ಲಿ ಇರುವ ಅನಂತಾನಂತ ವಸ್ತುಗಳ ಜ್ಞಾನವನ್ನು ಪಡೆದಿರುವನು. ಅವನಿಂದ ಕಾಣಲ್ಪಡದ ವಸ್ತುಗಳು ಇಲ್ಲವೇ ಇಲ್ಲ.

**ಯತ್ತದ್ ದೃಷ್ಟಂ ಭಗವತಾ ತದೇವಾಸ್ತಿ ನ ಚಾಪರಮ್ ।**

ಆದ್ದರಿಂದ ಇರುವ ಎಲ್ಲ ವಸ್ತುಗಳನ್ನು ಸಾಕ್ಷಾತ್ತಾಗಿ ತಿಳಿದವನು ಎಂದರ್ಥ.

★ ಸತ್ ಎಂದರೆ ಸಜ್ಜನರು ಎಂದರ್ಥ. ಸಜ್ಜನರಿಗೆ ಜ್ಞಾನವನ್ನು ಕೊಡುವವನು. ಸಂಸಾರದಲ್ಲಿರುವ ಅಜ್ಞಾನಿಗಳಾದ ಸಜ್ಜನರಿಗೆ ಗತಿಃ ಜ್ಞಾನವನ್ನು ಕೊಡುವನು. ಜ್ಞಾನಿಗಳಾದ ಮುಕ್ತಿಯೋಗ್ಯರಾದ ಸಜ್ಜನರಿಗೆ ಗತಿಯನ್ನು ಸದ್ಗತಿಯನ್ನು (ಮೋಕ್ಷವನ್ನು) ಕೊಡುವನು. ಮುಕ್ತರಾದ ಸಚೇತನರಿಗೆ ಆನಂದದ ಗತಿಯನ್ನು ಅನುಭವವನ್ನು ಕೊಡುವನು. ಆದ್ದರಿಂದ ಸತಾಂ ಗತಿಃ ಎಂದು ಕರೆಯಲ್ಪಡುವನು. ಈ ವಿಷಯವನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ -

**ಅಜ್ಞಾನಾಂ ಜ್ಞಾನದೋ ವಿಷ್ಣುಃ ಜ್ಞಾನಿನಾಂ ಮೋಕ್ಷದಶ್ಚ ಸಃ ।**
**ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥**

ಎಂಬ ಪ್ರಮಾಣವನ್ನು ಉದಾಹರಿಸಿ ನಿರೂಪಿಸಿದ್ದಾರೆ.

★ ಇರುವ ಎಲ್ಲರಿಗೆ ಭಗವಂತನು ಆಸರೆ ಆಗಿರುವನು. ಚೇತನಾಚೇತನಾತ್ಮಕವಾದ ಸಮಗ್ರ ವಿಶ್ವಕ್ಕೆ, ರಮಾ ಬ್ರಹ್ಮಾದಿ ದೇವತೆಗಳಿಗೆ ಮುಕ್ತಾಮುಕ್ತವರ್ಗಕ್ಕೆ ಭಗವಂತನು ಆಸರೆ ಆಧಾರನಾಗಿ ಇರುವವನು. ದ್ವಾದಶಸ್ತೋತ್ರದಲ್ಲಿ "ಹರಿರೇವ ಜಗತ್ಪಿತೃಮಾತೃಗತಿಃ" ಎಂದು ಹೇಳಿದ್ದಾರೆ.

★ ವಿದ್ಯಮಾನವಾದ, ಸತ್ಯವಾದ ಪೃಥಿವೀ ಮೊದಲಾದ 14 ಲೋಕಗಳಿಗೆ ಆಸರೆ - ಆಧಾರನಾಗಿ ಇರುವವನು. ಕೂರ್ಮರೂಪದಿಂದ ಧರಿಸಿ ರಕ್ಷಣೆ ಮಾಡಿರುವನು. ಆದ್ದರಿಂದಲೂ ಸತಾಂ ಗತಿಃ ಎಂದು ತಿಳಿಯಬಹುದು.

**457 ಸರ್ವದರ್ಶೀ**– ಸರ್ವವಸ್ತುಗಳನ್ನು ಸರ್ವತೋಮುಖವಾಗಿ ಸಾಕ್ಷಾತ್ಕರಿಸಿ-ಕೊಂಡವನು. ಪ್ರತಿಯೊಂದು ವಸ್ತುವಿನ ಪ್ರತಿ ಅಂಶಗಳನ್ನು ಚೆನ್ನಾಗಿ ತಿಳಿದಿರುವನು.

ಭಗವಂತನಿಗೆ ಸರ್ವ ಎಂದು ಹೆಸರು. ಇದೇ ವಿಷ್ಣುಸಹಸ್ರನಾಮದಲ್ಲಿ "ಸರ್ವಃ ಶರ್ವಃ ಶಿವಃ ಸ್ಥಾಣುಃ ಭೂತಾದಿರ್ನಿಧಿರವ್ಯಯಃ" ಎನ್ನುವಲ್ಲಿ ಬಂದಿದೆ. ಸರ್ವಂ ದ್ರಷ್ಟುಂ ಶೀಲಮಸ್ಯಾಸ್ತೀತಿ - ಸರ್ವದರ್ಶೀ ।

ಸರ್ವನಾದ ಅಂದರೆ ಪೂರ್ಣನಾದ ತನ್ನನ್ನು ತಾನು ತಿಳಿದುಕೊಂಡಿರುವನು. ಆದ್ದರಿಂದ ಸರ್ವದರ್ಶೀ. ಗುಣಗಳಿಂದ, ಕ್ರಿಯೆಗಳಿಂದ, ಅವತಾರಗಳಿಂದ ಇತ್ಯಾದಿ ಅನೇಕ ನಿಮಿತ್ತಗಳಿಂದ ಭಗವಂತನು ಪೂರ್ಣನಾಗಿರುವುದರಿಂದ ಸರ್ವ ಎಂದೆನಿಸಿಕೊಂಡಿರುವನು ಭಗವಂತನು. ಅಂತಹ ತಾನು ಪೂರ್ಣನು ಎಂದು ಅನಾದಿಯಿಂದ ತಿಳಿದಿರುವ ಕಾರಣ ಪರಮಾತ್ಮನು ಸರ್ವದಾ ಪರಿಪೂರ್ಣನಾಗಿರುವನೆಂದು ಬೃಹದಾರಣ್ಯಕೋಪನಿಷತ್ ಸರ್ವಶಬ್ದವನ್ನು ಉಲ್ಲೇಖಿಸಿದೆ -

"ತದಾತ್ಮಾನಮೇವ ಅವೇತ್ ಅಹಂ ಬ್ರಹ್ಮಾಸ್ಮೀತಿ ತಸ್ಮಾತ್ತತ್ ಸರ್ವಮಭವತ್" ಎಂಬುದಾಗಿ. ಆದ್ದರಿಂದ ಶ್ರೀಹರಿಯು ಸರ್ವದರ್ಶೀ.

★ ಎಲ್ಲ ದರ್ಶ, ಅಮಾವಾಸ್ಯೆಗಳಲ್ಲಿ ಮಾಡುವ ಇಷ್ಟಿಗಳಲ್ಲಿ ಪೂಜೆಗೊಳ್ಳುವವನು. ಅದರಿಂದ ಉಪಲಕ್ಷಿತವಾದ ಸರ್ವ ಯಜ್ಞಗಳಿಗೆ ನಿಯಾಮಕನಾಗಿರುವನು, ಯಜ್ಞಗಳಿಂದ ಪೂಜೆಗೊಳ್ಳುವವನು ಆಗಿರುವವನು. ಆದ್ದರಿಂದ ಸರ್ವದರ್ಶೀ.

ಎಲ್ಲರ ದರ್ಶನಗಳಿಗೆ ನಿಯಾಮಕನು, ಪ್ರೇರಕನು ಆಗಿರುವನು. ಎಲ್ಲರ ದರ್ಶನಸಾಧನವಾದ ಚಕ್ಷುರಿಂದ್ರಿಯಗಳಿಗೆ ದರ್ಶನಶಕ್ತಿಪ್ರದನು ಆಗಿದ್ದಾನೆ.

"ಚಕ್ಷುಷಃ ಚಕ್ಷುಃ... .. .. . ಯೇನ ಚಕ್ಷೂಂಷಿ ಪಶ್ಯಂತಿ । ತದೇವ ಬ್ರಹ್ಮ ತ್ವಂ ವಿದ್ಧಿ"

ಇತ್ಯಾದಿಯಾಗಿ ತಲವಕಾರ ಉಪನಿಷತ್ತಿನಲ್ಲಿ ಹೇಳಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಕಣ್ಣಿನ ಮೂಲಕ ನೋಡಲು ಭಗವದನುಗ್ರಹ ಅತ್ಯಾವಶ್ಯಕ. ಆದ್ದರಿಂದ ಭಗವಂತನು ಸರ್ವದರ್ಶೀ.

**458 ವಿಮುಕ್ತಾತ್ಮಾ -** ಭಗವಂತನು ನಿತ್ಯಮುಕ್ತನು. ಅವನಿಗೆ ಸಂಸಾರಬಂಧವಿಲ್ಲ. 15 ಕಲೆಗಳನ್ನು ಕಳೆದುಕೊಂಡು 16ನೆಯ ಕಲೆಯಿಂದ ಇರುವದಕ್ಕೆ ಮುಕ್ತಿ ಎಂದು ಕರೆಯುವರು. ಅಜ್ಞಾನ, ದುಃಖಾದಿಗಳನ್ನು ಕಳೆದುಕೊಳ್ಳುವುದನ್ನು ಮುಕ್ತಿಯೆಂದು ಕರೆಯುವರು. ಭಗವಂತನಿಗೆ ಈ ಯಾವ ದೋಷಗಳೂ ಇಲ್ಲವಾದ್ದರಿಂದ ಮುಕ್ತನು.

**ಮುಕ್ತಾಖ್ಯಾ ದುಃಖಮೋಕ್ಷಾತ್ ಸ್ಯಾತ್ ಬದ್ಧಾಖ್ಯಾ ಹರ್ಯಧೀನತಃ ।**
**ನಿತ್ಯಮುಕ್ತಸ್ತ್ವೇಕ ಏವ ಹರಿರ್ನಾರಾಯಣಃ ಪ್ರಭುಃ ॥**

ಭಗವಂತನಿಗೆ ಅನಾದಿಕಾಲದಿಂದ ಸಂಸಾರಬಂಧವಿಲ್ಲ. ಆದ್ದರಿಂದ ವಿಮುಕ್ತನು. ಭಗವಂತನಂತೆ ಲಕ್ಷ್ಮೀದೇವಿಗೂ ಅನಾದಿಕಾಲದಿಂದ ಸಂಸಾರಬಂಧವಿಲ್ಲ. ಅವಳೂ ವಿಮುಕ್ತಾತ್ಮಳು. ಆದರೂ ಲಕ್ಷ್ಮೀದೇವಿಯಲ್ಲಿರುವ ಮುಕ್ತತ್ವವು ಭಗವಂತನ ವಶದಲ್ಲಿರುವುದು. ಆದರೆ ಭಗವಂತನು ಸ್ವತಂತ್ರನಾಗಿ ವಿಮುಕ್ತಾತ್ಮನು. ಸರ್ವಸ್ವಾಮಿಯಾಗಿರುವನು. ಈ ಅಸಾಧಾರಣಗುಣದಿಂದ ಭಗವಂತನು ವಿಶೇಷವಾಗಿ ಮುಕ್ತಾತ್ಮನು ಆಗಿರುವನು.

ಆದ್ದರಿಂದ ವಿಮುಕ್ತಾತ್ಮಾ ಎಂದು ತಿಳಿಯಬೇಕು. ಭಾಗವತ ತಾತ್ಪರ್ಯದ 11ನೇ ಸ್ಕಂಧದ 1ನೆಯ ಅಧ್ಯಾಯದಲ್ಲಿ -

"ನಿತ್ಯಮುಕ್ತತ್ವತೋ ವಿಷ್ಣುರ್ಮುಕ್ತನಾಮಾ ಸದೋದಿತಃ । ಮುಕ್ತಶಬ್ದೋದಿತೋ ಬಂಧರಾಹಿತ್ಯಾತ್ ನ ವಿಮೋಕತಃ ॥" ಎಂಬುದಾಗಿ ಹೇಳಿದ್ದಾರೆ.

★ ವಿಮುಕ್ತಃ ದೋಷೇಭ್ಯಃ ಆತ್ಮಾ ದೇಹಃ ಯಸ್ಯ ಸಃ - ದೋಷಗಳಿಂದ ರಹಿತವಾದ ದೇಹವುಳ್ಳವನು. ಭಗವಂತನಿಗೂ ಅವನ ದೇಹಕ್ಕೂ ಭೇದವಿಲ್ಲ. ಅವನು ಚಿದ್ರೂಪಿ, ದೋಷದೂರ. ಅವನ ದೇಹವೂ ಚಿದಾತ್ಮಕ, ದೋಷವರ್ಜಿತ.

ವಿಶೇಷವಾಗಿ ಮುಕ್ತರಿಗೆ ಆತ್ಮ = ಸ್ವಾಮಿ. ಆದ್ದರಿಂದ ವಿಮುಕ್ತಾತ್ಮಾ.

ವಿಮುಕ್ತಃ ಅಜ್ಞಾನಾಭಿಭವಾತ್ ಆತ್ಮಾ=ವಾಯುಃ ಯಸ್ಮಾತ್ ಸಃ ವಿಮುಕ್ತಾತ್ಮಾ. ವಾಯುದೇವರು ಅಜ್ಞಾನಾದಿದೋಷಗಳಿಂದ ಮುಕ್ತರಾಗುವಂತೆ ಅನುಗ್ರಹಿಸಿರುವನು. ಆದ್ದರಿಂದ ಹರಿಯು ವಿಮುಕ್ತಾತ್ಮನು. ಐತರೇಯಭಾಷ್ಯದಲ್ಲಿ -

**"ದ್ವಾವಾತ್ಮಾನೌ ಹಿ ವೇದೇಷು ದ್ವೌ ಪ್ರಾಣೌ ದ್ವೌ ಚ ಚೇತನೌ ।**
**ಅಜ್ಞಾನಾಭಿಭವಾಸ್ಪೃಷ್ಟೌ ವಾಯುರ್ನಾರಾಯಣಶ್ಚ ತೌ ॥"** ಎಂದು ಹೇಳಿದ್ದಾರೆ. .ಸಶೇಷ.

## ಸತಿ-ಪತಿಯರಲ್ಲಿ ಪುಣ್ಯಪಾಪದ ಪಾಲು

**ಪತಿಪುಣ್ಯಾರ್ಧಭಾಕ್ ನಾರೀ ನ ಹಿ ಪತ್ಯಘಭಾಗಭಾಕ್ ।**
**ನ ಪತ್ನೀಪುಣ್ಯಭಾಗ್ಭರ್ತಾ ಭವೇತ್ ಪಾಪಾರ್ಧಭಾಗ್ಭವೇತ್ ॥**
**ಭರ್ತೃಭ್ಯಃ ಸಕಲಂ ಧರ್ಮಂ ಶೃಣ್ವಂತಿ ಹಿ ಪತಿವ್ರತಾಃ ॥ ಶಾತಾತಪಸ್ಮೃತಿ**

ಪತಿಯ ಪುಣ್ಯದಲ್ಲಿ ಅರ್ಧಭಾಗ ಸತಿಯರಿಗೆ ಬರುತ್ತದೆ. ಆದರೇ ಪತಿಯ ಪಾಪದಲ್ಲಿ ಸತಿಯಾದವಳಿಗೆ ಪಾಲು ಇಲ್ಲ. ಪತ್ನಿಯು ಆಚರಿಸಿದ ಪುಣ್ಯದಲ್ಲಿ ಪತಿಗೆ ಪಾಲು ಇಲ್ಲ. ಪತ್ನಿಯು ಆಚರಿಸಿದ ಪಾಪದಲ್ಲಿ ಅರ್ಧದಷ್ಟು ಪತಿಗೆ ಸೇರುತ್ತದೆ. ಈ ವಿಷಯವನ್ನೇ ಪುರಂದರದಾಸರು ತಮ್ಮ ಪದ್ಯದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಪತಿಯು ಮಾಡುತ್ತಿರುವ ಅತಿ ಸಣ್ಣ ಧರ್ಮದಲ್ಲಿಯೂ ಸತಿಯು ಸಹಕಾರಿಯಾಗಿ ಇರಬೇಕು.

**ಗಂಡ ಮಾಡಿದ ಪಾಪ ಹೆಂಡತಿಗಿಲ್ಲ ಹೆಂಡತಿ ಮಾಡಿದ ಪಾಪ ಗಂಡಗುಂಟು**
**ಹೆಂಡತಿ ಮಾಡಿದ ಪುಣ್ಯ ಗಂಡಗಿಲ್ಲ ಗಂಡ ಮಾಡಿದ ಪುಣ್ಯ ಹೆಂಡತಿಗುಂಟು**
**ಜೀವ ಜೀವರ ಭೇದ ನೀನೆ ಉದ್ಧರಿಸಯ್ಯ ಪುರಂದರವಿಠಲ ॥**

# ಮನಸ್ಸನ್ನು ಅಜ್ಞಾನ ಆಕ್ರಮಿಸದಿರಲು ಯಾರನ್ನು ಭಜಿಸಬೇಕು ?

**ಶ್ರುತಿಸುಧಾ**

✍ ಡಾ.ವೆಂಕಟಗಿರೀಶಾಚಾರ್ಯ

ವೇದವು ಒಂದು ದೊಡ್ಡದಾದ ಸ್ತೋತ್ರಗಳ ಆಗರವಾಗಿದೆ. ಮಾನವನ ಜೀವನಕ್ಕೆ ಬೇಕಾದ ನಾನಾವಿಧವಾದ ವಸ್ತುಗಳನ್ನು ಪಡೆಯಬೇಕಾದರೆ ಅವನು ಮಾಡಬೇಕಾದ ಅನೇಕವಿಧವಾದ ಸ್ತೋತ್ರಗಳನ್ನು ವೇದವು ನಮಗೆ ತಿಳಿಸಿಕೊಡುತ್ತದೆ. ದೀರ್ಘವಾದ ಆಯುಷ್ಯ, ಒಳ್ಳೆಯ ಆರೋಗ್ಯ, ಸತ್ಸಂಪತ್ತು, ಸಜ್ಜನರ ಸಂಗ, ಯೋಗ್ಯ ಗುರುಗಳು, ಅನುರೂಪಳಾದ ಮಡದಿ, ವಿವೇಕಿಗಳಾದ ಮಕ್ಕಳು ಇತ್ಯಾದಿ ಅನೇಕ ಆವಶ್ಯಕತೆಗಳು ಮಾನವನಿಗೆ ಉಂಟು. ಅವೆಲ್ಲವನ್ನು ನಾವು ಪಡೆಯಬೇಕಾದರೆ ಅದಕ್ಕೆ ವೇದ ವಿಧಾನ ಮಾಡುವ ಸ್ತುತಿಗಳನ್ನು, ಪೂಜಾ-ಜಪಾದಿಗಳನ್ನು ಮಾಡುವುದು ಆವಶ್ಯಕ.

ಮೇಲೆ ತಿಳಿದ ಮನುಷ್ಯನ ಅನೇಕ ಆವಶ್ಯಕ ವಸ್ತುಗಳಲ್ಲಿ ಒಂದು ಶುದ್ಧವಾದ ಜ್ಞಾನವು. ಈ ಜ್ಞಾನವು ಒಂದು ತುಂಬ ಮಹತ್ತ್ವವಾದ ವಸ್ತುವಾಗಿದೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ತಿಳಿಸುವಂತೆ –

**"ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ"** –

"ಜಗತ್ತಿನಲ್ಲಿ ಜ್ಞಾನಕ್ಕಿಂತಲೂ ಮಿಗಿಲಾದ ಮತ್ತೊಂದು ಪವಿತ್ರವಾದ ವಸ್ತುವು ಇಲ್ಲ"

ಶುದ್ಧವಾದ ಶಾಸ್ತ್ರಜ್ಞಾನವು ಬಹಳ ಪವಿತ್ರವಾಗಿದೆ. ಇಂತಹ ನಿರ್ಮಲವಾದ ಜ್ಞಾನವು ದೊರೆಯುವುದು ಬಹಳ ಕಷ್ಟವಾಗಿದೆ. ಅದನ್ನು ಪಡೆಯಲು ಮೊದಲಿಗೆ ನಮ್ಮ ಮನಸ್ಸು ಶುದ್ಧವಾಗಿರಬೇಕು. ಅನಂತರ, ಉಪದೇಶ ಮಾಡುವ ಯೋಗ್ಯ ಗುರುಗಳು ದೊರೆಯಬೇಕು. ಇಂತಹ ಸತ್ಕಾರ್ಯಕ್ಕೆ ಬರುವ ವಿಘ್ನಗಳು ದೂರವಾಗಬೇಕು. ಇವೇ ಮುಂತಾದ ಎಲ್ಲ ಅನುಕೂಲತೆಗಳು ಇದ್ದಾಗ ಮಾತ್ರ ನಮಗೆ ಶುದ್ಧವಾದ ಶಾಸ್ತ್ರಜ್ಞಾನವು ಪ್ರಾಪ್ತವಾಗುವುದು.

ಸಮೀಚೀನವಾದ ಜ್ಞಾನವು ದೊರೆಯಲು ಆವಶ್ಯಕವಾದವುಗಳಲ್ಲಿ ಒಂದು ಶುದ್ಧವಾದ ಮನಸ್ಸು. ಈ ಮನಸ್ಸು ಶುದ್ಧವಾಗುವುದು ಹೇಗೆ ? ಅದು ಅಶುದ್ಧವಾಗುವುದು ಯಾವುದರಿಂದ ? ಇತ್ಯಾದಿ ಪ್ರಶ್ನೆಗಳು ಬರುವುದು ಸಹಜವಾಗಿದೆ. ಇವುಗಳಿಗೆ ಉತ್ತರ ರೂಪವಾದ ಒಂದು ವೇದಮಂತ್ರವನ್ನು ಋಗ್ವೇದದ ಮೊದಲನೆಯ ಮಂಡಲದ ಪ್ರಥಮಾಧ್ಯಾಯದಲ್ಲಿ ಕಾಣುತ್ತೇವೆ –

**"ಯಸ್ಯ ಸಂಸ್ಥೇ ನ ವೃಣ್ವತೇ ಹರೀ ಸಮತ್ಸು ಶತ್ರವಃ ।**
**ತಸ್ಮಾ ಇಂದ್ರಾಯ ಗಾಯತ ॥" (೧.೫.೪)**

ಮೇಲಿನ ಮಂತ್ರಕ್ಕೆ ಶ್ರೀಮಧ್ವಾಚಾರ್ಯರು ತಮ್ಮ ಋಗ್ಭಾಷ್ಯದಲ್ಲಿ ಈ ಪ್ರಕಾರ ವ್ಯಾಖ್ಯಾನ ಮಾಡಿರುವರು –

**ಯಸ್ಯ ಸ್ಥಿತೌ ನ ವೃಣುತೇ ಹರ್ಯಗ್ರಮಪಿ ಶತ್ರವಃ ।**
**ಮನಃ ಪುರೋ ವಾ ವಿಷಯಹರಣಾನ್ಮನ ಏವ ಚ ।**

ಬುದ್ಧಿಶ್ಚ ಹರಿಶಬ್ದೋಕ್ತೇ ತಮಆದೀನಿ ಶತ್ರವಃ ॥

ದೇವತೆಗಳಿಗೆ ಅಧಿಪತಿಯಾದ ಇಂದ್ರನು ರಥದಲ್ಲಿ ಕುಳಿತಿರಲು ಯುದ್ಧಗಳಲ್ಲಿ ಶತ್ರುಗಳು ಕುದುರೆಯ ಮುಂದೆ ಸಹ ಬರಲು ಸಾಧ್ಯವಿಲ್ಲ. ಅಂತಹ ದೇವೇಂದ್ರನಿಗಾಗಿ ಸ್ತೋತ್ರವನ್ನು ಮಾಡಿರಿ.

ಮೇಲಿನ ಮಂತ್ರಕ್ಕೆ ಶ್ರೀಮಧ್ವಾಚಾರ್ಯರು ಆಧ್ಯಾತ್ಮಿಕಪರವಾದ ಅರ್ಥವನ್ನು ತಿಳಿಸುವವರಾಗಿ ಮಂತ್ರದಲ್ಲಿಯ ಹರಿ ಎಂಬ ಶಬ್ದಕ್ಕೆ ಅರ್ಥವನ್ನು ಸಹ ವಿವರಿಸುವರು -

ಮಂತ್ರದಲ್ಲಿಯ ಹರಿ ಎಂಬ ಶಬ್ದಕ್ಕೆ ಮನಸ್ಸು ಎಂದು ಅರ್ಥವು. ಮನಸ್ಸೆಂಬ ಶಬ್ದದಿಂದ ಬುದ್ಧಿಯನ್ನು ಸಹ ತೆಗೆದುಕೊಳ್ಳಬೇಕು. ಮನೋಬುದ್ಧಿಗಳಿಗೆ ಹರಿ ಎಂದು ಏಕೆ ಕರೆಯುತ್ತಾರೆ ಎಂದರೆ- ವಿಷಯಹರಣಾತ್ = ಪ್ರಪಂಚದ ವಿಷಯಗಳನ್ನು ಕುರಿತು ನಮ್ಮನ್ನು ಸೆಳೆದುಕೊಂಡು ಹೋಗುವುದರಿಂದ ಮನಸ್ಸು, ಬುದ್ಧಿಗಳಿಗೆ ಹರಿ ಎಂದು ಕರೆಯುತ್ತಾರೆ.

ಆಧ್ಯಾತ್ಮಿಕ ಅರ್ಥ – ನಿರವಧಿಕವಾದ ಐಶ್ವರ್ಯವಿರುವುದರಿಂದ ಇಂದ್ರನಾಮಕನಾದ ಶ್ರೀಹರಿಯು ಭಕ್ತರ ಶರೀರವೆಂಬ ರಥದಲ್ಲಿ ಸನ್ನಿಹಿತನಾಗಿರಲು, ಜ್ಞಾನಪ್ರಾಪ್ತಿ ಎಂಬ ಯುದ್ಧಗಳಲ್ಲಿ ಅಜ್ಞಾನಾದಿಶತೃಗಳು ಮನಸ್ಸು ಮತ್ತು ಬುದ್ಧಿಗಳನ್ನು ಆಕ್ರಮಿಸುವುದಿಲ್ಲ. ಅಂತಹ ಇಂದ್ರನಾಮಕ ಶ್ರೀಹರಿಗಾಗಿ ಶಾಸ್ತ್ರದ ವ್ಯಾಖ್ಯಾನ, ಪ್ರವಚನ ರೂಪವಾದ ಸ್ತೋತ್ರವನ್ನು ಮಾಡಿರಿ.

ಶ್ರೀಹರಿಯು ನಮ್ಮ ದೇಹದಲ್ಲಿ ಸದಾ ನೆಲೆಸಿರುವನು. ಈ ನಮ್ಮ ದೇಹವು ಪರಮಾತ್ಮನಿಗೆ ರಥವೆಂದು ಅನೇಕ ಕಡೆ ಉಪನಿಷತ್ತುಗಳಲ್ಲಿ ಹೇಳಿದ್ದನ್ನು ಕಾಣುವೆವು. ಆದರೆ ಪರಮಾತ್ಮನು ಎಲ್ಲರನ್ನು ಅಜ್ಞಾನಾದಿ ಶತೃಗಳಿಂದ ರಕ್ಷಿಸುವನೋ ? ಎಂದರೆ, ಇಲ್ಲವೆಂದು ಉತ್ತರ ಹೇಳಬೇಕು. ಹಾಗಾದರೆ ಶ್ರೀಹರಿಯು ಯಾರನ್ನು ರಕ್ಷಿಸುವನು ? ಎಂದರೆ, ಯಾರು ಶ್ರೀಹರಿ ನಮ್ಮ ಶರೀರದಲ್ಲಿ ನಿಯಾಮಕನಾಗಿ ನೆಲೆಸಿದ್ದಾನೆ ಎಂದು ತಿಳಿದಿರುವರೋ ಅವರನ್ನು ಮಾತ್ರ ರಕ್ಷಿಸುವನು.

ದೇಹವೆಂಬ ರಥದಲ್ಲಿ ಭಗವಂತನು ರಕ್ಷಕನಾಗಿ ಇರುವಾಗ ಜ್ಞಾನವು ದೊರೆಯುವುದು. ಗುರುಗಳಿಂದ ಉಪದೇಶದ ಮೂಲಕ ಜ್ಞಾನ ದೊರೆಯಬೇಕಾದರೆ ಅದಕ್ಕೆ ಪ್ರತಿಬಂಧಕವಾದ ಅನೇಕ ಶತೃಗಳು ಇರುವರು. ಅವು ಯಾವುವೆಂದರೆ – ಅಜ್ಞಾನ, ಕಾಮ, ಕ್ರೋಧ ಮುಂತಾದವುಗಳು. ಈ ಶತೃಗಳು ನಮ್ಮ ಜ್ಞಾನಪ್ರಾಪ್ತಿ ಎಂಬ ಯಜ್ಞದಲ್ಲಿ ಅಡ್ಡಿಯಾಗಬಾರದು ಎಂದಾದರೆ ಭಗವಂತನು ನಮ್ಮ ದೇಹದಲ್ಲಿ ಸದಾ ನೆಲೆಸಿರಬೇಕು. ಆ ಭಗವಂತನು ನಮ್ಮ ಶರೀರದಲ್ಲಿ ಸನ್ನಿಹಿತನಾಗಿರಲು ಅಜ್ಞಾನಾದಿಗಳು ನಮ್ಮ ಮನಸ್ಸು ಹಾಗೂ ಬುದ್ಧಿಗಳನ್ನು ಜಗತ್ತಿನ ವಿಷಯಗಳ ಕುರಿತು ಸೆಳೆಯಲಾರವು, ಅಂದರೆ ನಮ್ಮ ಮನಸ್ಸು ಅಥವಾ ಬುದ್ಧಿಯು ಪ್ರಾಪಂಚಿಕ ಪದಾರ್ಥಗಳಲ್ಲಿ ಮೋಹವನ್ನು ಹೊಂದುವಂತೆ ಮಾಡಲಾರವು.

ಭಗವಂತನು ಈ ಪ್ರಕಾರ ನಮ್ಮ ಶತೃಗಳನ್ನು ದೂರ ಮಾಡಿ ನಮಗೆ ಜ್ಞಾನ ದೊರೆಯುವಂತೆ ಮಾಡಿ ಪರಮೋಪಕಾರವನ್ನು ಮಾಡಿರುವನು. ಅಂತಹ ಸ್ವಾಮಿಗೆ ನಾವು ಏನನ್ನು ಪ್ರತಿಯಾಗಿ ಮಾಡಬೇಕು ಎಂದರೆ ವೇದವು ಹೀಗೆ ತಿಳಿಸುತ್ತದೆ - "ತಸ್ಮಾ ಇಂದ್ರಾಯ ಗಾಯತ ।।" ಅಂತಹ ಪರಮೋಪಕಾರ ಮಾಡಿದ ಪರಿಪೂರ್ಣನಾದವನನ್ನು ಶಾಸ್ತ್ರದ ಪಾಠ, ಪ್ರವಚನ, ವ್ಯಾಖ್ಯಾನಗಳ ಮೂಲಕ ಸ್ತೋತ್ರ ಮಾಡಿರಿ. ಶಾಸ್ತ್ರದ ಎಲ್ಲ ಶಬ್ದಗಳು ಪರಮಾತ್ಮನ ಸ್ತುತಿರೂಪವಾಗಿವೆ. ಅವುಗಳ ವ್ಯಾಖ್ಯಾನಾದಿಗಳನ್ನು ಮಾಡಿದಾಗ ಅದು ಅವನ ಸ್ತೋತ್ರವಾಗುತ್ತದೆ. ಇದೇ ನಾವು ಆಪ್ತಕಾಮನಾದವನಿಗೆ ಮಾಡಬಹುದಾದ ಉತ್ತಮ ಕಾರ್ಯವಾಗಿದೆ. ಈ ಪ್ರಕಾರವಾಗಿ ವೇದವು ನಮಗೆ ಜ್ಞಾನಾದಿಗಳ ಪ್ರಾಪ್ತಿಗೆ ವಿಘ್ನಗಳ ಪರಿಹಾರೋ-ಪಾಯವನ್ನು ತಿಳಿಸಿ ಭಗವಂತನನ್ನು ಭಜಿಸಿ ಎಂದು ಉಪದೇಶಿಸುತ್ತದೆ. ಅದರಂತೆ ನಾವು ಅವನನ್ನು ಭಜಿಸಿ ಜ್ಞಾನಾದಿಗಳನ್ನು ಪಡೆದು ಕೃತಾರ್ಥರಾಗೋಣ. ★

## ಈ ತಿಂಗಳು ಶ್ರೀಸುಧಾಕ್ಕೆ ಪೋಷಕರಾದವರು (2000 ರೂ)

| | |
|---|---|
| 1. ಶಾಮರಂಗನಾಥ ವಡವಿ ಬೆಂಗಳೂರು | 21. ರಾಜೇಂದ್ರ ಎಚ್ ಬೆಂಗಳೂರು |
| 2. ಉದಯ ಕೆ ನಾಯಕ ಬೆಂಗಳೂರು | 22. ವಾಸುದೇವ ಆರ್.ಗುಡಿ ಹಾವೇರಿ |
| 3. ಟಿ.ಜಿ.ಎ ಸಿಮ್ಹಾ ಬೆಂಗಳೂರು | 23. ಎ ಎನ್ ಬಬಲೇಶ್ವರ ಬೆಂಗಳೂರು |
| 4. ಪ್ರಹ್ಲಾದ ಎಂ ಹೈದರಾಬಾದ್ | 24. ರಾಘವೇಂದ್ರ ಎನ್ ಬೆಂಗಳೂರು |
| 5. ಸರ್ವೋತ್ತಮ ಜೋಶಿ ಬೆಂಗಳೂರು | 25. ಪಿ. ಆರ್. ಕಟ್ಟಿ ಪುಣೆ |
| 6. ವಿದ್ಯಾಧರ ವಿ ನವರತ್ನ ರಾಣೆಬೆನ್ನೂರ | 26. ಅಜಯ ತೋರಣಗಲ್ ಬೆಂಗಳೂರು |
| 7. ಬಿ ಎಸ್ ರಾಮಚಂದ್ರ ಬೆಂಗಳೂರು | 27. ಅಶೋಕ ಬಾದಾಮಿ ಧಾರವಾಡ |
| 8. ಆರ್.ಎಚ್. ಕುಲಕರ್ಣಿ ಶಿವಮೊಗ್ಗ | 28. ಶ್ರೀನಿವಾಸ ಚಿಕ್ಕರೂರು ಮುಂಬೈ |
| 9. ನಾಗರಾಜ ನಾಗರಗದ್ದೆ ಮಂಡ್ಯ | 29. ವಿ.ಆರ್. ಅಯೋಧ್ಯ ಗಂಗವತಿ |
| 10. ಸುಜಾತಾ ಎಚ್ ವಿ ಬೆಂಗಳೂರು | 30. ರೂಪಾ ಕಿರಣ ಗೋತೆ ಮುಂಬೈ |
| 11. ಆರ್ ಬಿ ಕುಲಕರ್ಣಿ ಪಣಜಿ ಗೋವಾ | 31. ವಾದಿರಾಜ ಎ.ಅಥಣಿಕರ್ ಧಾರವಾಡ |
| 12. ಪ್ರಭಾ, ಹೈದರಾಬಾದ್ | 32. ಜಿ.ಕೆ. ಖಾಸನೀಸ್ ಗದ್ದನಕೇರಿ |
| 13. ಮುರಳೀಧರ ಎಸ್ ಜಹಗಿರದಾರ ಹೈದ್ರಾಬಾದ | 33. ರಾಮನಾಥ ಜೀವಣಗಿ ಬೆಂಗಳೂರು |
| 14. ದೇಸಾಯಿ ರಾಮರಾವ್ ಅನಂತಪುರ | 34. ಗೂಳಿ ಜಗನ್ನಾಥ ಬೆಂಗಳೂರು |
| 15. ನಾರಾಯಣ ಕಡಕೋಲ ಬೆಂಗಳೂರು | 35. ಡಾ.ಶಿವಶಂಕರ್ ಮೂರ್ತಿ ಬೆಂಗಳೂರು |
| 16. ಎಸ್ ಜಿ ಮಧುಸೂದನ ದೋನಿಮಲೈ | 36. ಪ್ರಸಾದ ದೇಶಪಾಂಡೆ ಡೊಂಬಿವಲಿ (ಇ) |
| 17. ಹನುಮಂತ ಗುಂಡೋ ಕುಲಕರ್ಣಿ ಬೆಂ | 37. ರಮಾ ಬೆನ್ನೂರ್ ಬೆಂಗಳೂರು |
| 18. ಶ್ರೀಶ ಎ ಕುಲಕರ್ಣಿ ಬೆಂಗಳೂರಿನ | 38. ಉಷಾ ಜಗನ್ನಾಥ ಬೆಂಗಳೂರು |
| 19. ಎಚ್ ಎಸ್ ಜೋಶಿ ಬಾಗಲಕೋಟ | 39. ಅಶ್ವತ್ಥನಾರಾಯಣ ಬೆಂಗಳೂರು |
| 20. ಪದ್ಮಾವತಿ ಕೆ.ಎಸ್ ಬೆಂಗಳೂರು | 40. ನಿಮಗಾಗಿ.... |

ಇವರೆಲ್ಲರೂ ಶ್ರೀಸುಧಾಪತ್ರಿಕೆಯ ಮೇಲಿನ ಅಭಿಮಾನದಿಂದ ಪೋಷಕರಾಗಿರುವರು. ಹರಿ-ವಾಯು-ಗುರುಗಳು ಇವರಿಗೂ ಇವರ ಕುಟುಂಬಕ್ಕೂ ವಿಶೇಷವಾಗಿ ಜ್ಞಾನ-ಭಕ್ತಿ-ಆಯು-ಆರೋಗ್ಯಾದಿಗಳನ್ನು ಕರುಣಿಸಲೆಂದು ಪ್ರಾರ್ಥಿಸುವೆವು. **–ಸಂ.**

**!!! ಬನ್ನಿ ನೀವೂ ಶ್ರೀಸುಧಾ ಪತ್ರಿಕೆಯನ್ನು ಪೋಷಿಸಿ, ಬೆಳೆಸಿ....**

# ಉತ್ತರಾದಿಮಠ ಯತಿ ಪರಂಪರೆ

# ಶ್ರೀಮದಕ್ಷೋಭ್ಯತೀರ್ಥರು

✍ ಪಂ. ವಾದಿರಾಜಾಚಾರ್ಯ ಕರಣಂ

**ಸ ತತ್ಕೃತಂ ಸರ್ವಮಲಂ ವಿಚಾರ್ಯ ತಯೋರ್ನಗಾಗ್ರಾತ್ಪತನಂ ಸುನಿಷ್ಕೃತಿಮ್ ।**
**ಉವಾಚ ತೌ ತತ್ಕ್ಷಣ ಏವ ವೃಕ್ಷಮಾರುಹ್ಯ ಯಾತೌ ಚ ತದಗ್ರಮೇವ ॥2.37॥**

ಶ್ರೀಅಕ್ಷೋಭ್ಯತೀರ್ಥರು ಭಕ್ತರನ್ನು ಉದ್ಧರಿಸುವ ಕಾರ್ಯದಲ್ಲಿ ತೊಡಗಿದ್ದರು. ವೇದಾಂತವಿದ್ಯಾಸಾಮ್ರಾಜ್ಯದ ಸಾರ್ವಭೌಮರಾಗಿದ್ದರು. ಅಂಥಹ ಅಕ್ಷೋಭ್ಯತೀರ್ಥರು ರಂಗಣ್ಣ ಮತ್ತು ಧಾಮಣ್ಣ ಎಂಬ ಬ್ರಾಹ್ಮಣರು ಮಾಡಿದ ಪಾಪವನ್ನು ಆಮೂಲಾಗ್ರವಾಗಿ ಕೇಳಿದರು. ಅವರು ಭಕ್ತಾಗ್ರಣಿಗಳು. ಯಾವುದೋ ಕೆಟ್ಟ ಪ್ರಾರಬ್ಧಕ್ಕೆ ವಶರಾಗಿ ಬ್ರಹ್ಮಹತ್ಯೆಯನ್ನು ಮಾಡಿದ್ದರು. ನಂತರ ಅತಿಶಯವಾದ ಪಶ್ಚಾತ್ತಾಪದಿಂದ ತಪ್ತರಾಗಿದ್ದರು. ಅವರ ದುಃಖವನ್ನು ಕಂಡರು. ಅವರಿಗೆ ಸರಿಯಾದ ಪ್ರಾಯಶ್ಚಿತ್ತವನ್ನು ನೀಡಬೇಕೆಂದು ಆಲೋಚಿಸಿದರು. ಮತ್ತೆ ಅವರು ತಮ್ಮ ಧರ್ಮಕಾರ್ಯಗಳಲ್ಲಿ ತೊಡಗಬೇಕೆಂದು ವಿಚಾರಿಸಿದರು. ಎದುರಿಗಿರುವ ಎತ್ತರ ವೃಕ್ಷವನ್ನು ತೋರಿಸಿದರು. ಆ ವೃಕ್ಷದ ತುಟ್ಟ ತುದಿಯನ್ನು ಮುಟ್ಟಿ ಅಲ್ಲಿಂದ ಹಾರಬೇಕೆಂದು ಆದೇಶಿಸಿದರು. ಇದುವೇ ತಕ್ಕುದಾದ ಪ್ರಾಯಶ್ಚಿತ್ತವೆಂದು ಹೇಳಿದರು.

ಗುರುಗಳು ಹೇಳಿದ ಮಾತನ್ನು ಶ್ರದ್ಧೆಯಿಂದ ಕೇಳಿದರು. ಅವರು ತಿಳಿಸಿದ ಪ್ರಾಯಶ್ಚಿತ್ತವನ್ನು ಅನುಷ್ಠಾನ ಮಾಡಲು ಸಿದ್ಧರಾದರು. ಕ್ಷಣದಲ್ಲಿಯೇ ಆ ವೃಕ್ಷವನ್ನು ಏರಿದರು. ಮೇಲಿನ ಭಾಗಕ್ಕೆ ಹೋದರು.

**ದೃಷ್ಟ್ವಾ ಸುದಾರ್ಢ್ಯಂ ಸ ತಯೋರ್ಯತೀಂದ್ರ ಆಹೂಯ ತೌ ಸದ್ದರವಾರಿಣೈವ ।**
**ಚಕಾರ ಪೂತೌ ಜಹಸುಸ್ತದಾನೀಂ ತದ್ಬಾಂಧವಾಃ ಪೂತತರೌ ನಿಶಮ್ಯ ॥2.38॥**

ರಂಗಣ್ಣ ಮತ್ತು ಧಾಮಣ್ಣರು ತಾವು ಮಾಡಿದ ಬ್ರಹ್ಮಹತ್ಯಾ ಪಾಪಕ್ಕೆ ತಕ್ಕುದಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲೇಬೇಕೆಂದು ಬಯಸಿದ್ದರು. ಅವರ ದಾರ್ಢ್ಯವನ್ನು ಪರೀಕ್ಷಿಸಲೆಂದು ಶ್ರೀಅಕ್ಷೋಭ್ಯತೀರ್ಥರು ವಿಶಿಷ್ಟವಾದ ಪ್ರಾಯಶ್ಚಿತ್ತವನ್ನು ವಿಧಾನ ಮಾಡಿದರು. ಎತ್ತರ ವೃಕ್ಷದ ತುಟ್ಟ ತುದಿಯನ್ನು ಏರಿ ಅಲ್ಲಿಂದ ಜಿಗಿಯಬೇಕೆಂಬುದೇ ಅಕ್ಷೋಭ್ಯತೀರ್ಥರು ಮಾಡಿದ ವಿಧಾನ. ಗುರುಗಳ ಆಜ್ಞೆಯನ್ನು ಪಾಲಿಸಲು ಆ ವಿಪ್ರರು ಬದ್ಧರಾದರು. ಏನೂ ವಿಚಾರ ಮಾಡದೇ ವೃಕ್ಷದ ತುಟ್ಟ ತುದಿಗೆ ಏರಿದರು. ಅಲ್ಲಿಂದ ಹಾರಬೇಕೆನ್ನುವಷ್ಟರಲ್ಲಿಯೇ ಅಕ್ಷೋಭ್ಯತೀರ್ಥರು ಅವರನ್ನು ಕರೆದರು. ಕೆಳಗೆ ಇಳಿದು ಬರುವಂತೆ ಹೇಳಿದರು. ಮತ್ತೆ ಗುರುಗಳ ಆಜ್ಞೆಯನ್ನು ಪಾಲಿಸುತ್ತಾ ಇಬ್ಬರೂ ಕೆಳಗೆ ಇಳಿದರು. ಅವರಿಬ್ಬರ ದಾರ್ಢ್ಯವೇನೆಂದು ಗುರುಗಳಿಗೆ ಸಿದ್ಧವಿತ್ತು. ಈ ಉಪಾಯದಿಂದ ಅಲ್ಲಿರುವ ಜನರಿಗೂ ತಿಳಿಯುವಂತೆ ಮಾಡಿದರು. ನಂತರ ಶಂಖೋದಕವನ್ನು ಆ ವಿಪ್ರರ ಮೇಲೆ ಪ್ರೋಕ್ಷಣ ಮಾಡಿದರು. ಇನ್ನು ನೀವಿಬ್ಬರೂ ಶುದ್ಧರಾಗಿರುವಿರಿ. ನಿಮ್ಮ ಧರ್ಮಗಳನ್ನು ಶ್ರದ್ಧಾ-

ಭಕ್ತಿಗಳಿಂದ ಅನುಷ್ಠಾನ ಮಾಡಿರಿ. ಈ ಬ್ರಾಹ್ಮಣಜನ್ಮವನ್ನು ಸಾರ್ಥಕ ಮಾಡಿಕೊಳ್ಳಿರಿ ಎಂದು ಹೇಳಿದರು. ಇದರಿಂದ ಆ ವಿಪ್ರರು ತೃಪ್ತರಾದರು.

ಈ ವಿಷಯ ಆಚೆ ಈಚೆ ಸಂಚರಿಸುತ್ತಾ ರಂಗಣ್ಣ ಧಾಮಣ್ಣರ ಬಂಧುಗಳ ಕಿವಿಗೆ ಬಿದ್ದಿತು. ಅಕ್ಷೋಭ್ಯತೀರ್ಥರ ಮಹಾಮಹಿಮೆಯ ಜ್ಞಾನ ಅವರಿಗೆ ಇರಲಿಲ್ಲ. ತೀರ್ಥಪ್ರೋಕ್ಷಣವಂತೆ? ಬ್ರಹ್ಮಹತ್ಯಾಪರಿಹಾರವಂತೆ? ಇತ್ಯಾದಿಯಾಗಿ ಅಪಹಾಸ ಮಾಡಿದರು. ಆ ಅಪಹಾಸ ಬ್ರಹ್ಮಹತ್ಯೆಗಿಂತಲೂ ದೊಡ್ಡದಾದ ಅಪರಾಧವೆಂದು ಅವರಿಗೆ ತಿಳಿಯಲಿಲ್ಲ. ಪವಿತ್ರವಾದ ಸಕಲ ತೀರ್ಥ-ಕ್ಷೇತ್ರಗಳಲ್ಲಿ ಸಂಚರಿಸಿದರೂ ಅಲ್ಲಲ್ಲಿಯ ತೀರ್ಥಸ್ನಾನ, ಪವಿತ್ರಪ್ರತಿಮೆಗಳ ಸಂದರ್ಶನವನ್ನು ಮಾಡಿದರೂ ಅವರ ಪಾಪ ತೊಲಗುವುದಿಲ್ಲ. ಅಂಥ ಪಾಪ ಶಂಖಜಲದ ಪ್ರೋಕ್ಷಣೆಯಿಂದ ತೊಲಗೀತೇ? ಎಂದರು. ಅಪಹಾಸ ಮಾಡಿದರು.

ಯತಿಸಾರ್ವಭೌಮರಾದ ಅಕ್ಷೋಭ್ಯತೀರ್ಥರು ಶಂಖಜಲದ ಮಹಿಮೆಯನ್ನು ತಿಳಿಸಲು ಸಿದ್ಧರಾದರು. ಅದಕ್ಕೊಂದು ನಿದರ್ಶನ ತೋರಿಸಲು ಮುಂದಾದರು.

**ನಿದರ್ಶನಂ ದರ್ಶಯಿತುಂ ಜನಸ್ಯ ಪಟಂ ಸುಶುದ್ಧಂ ತರಸಾ ನಿನಾಯ ।**
**ಭಲ್ಲಾತಕಾದ್ಯೈಃ ಪ್ರವಿಧಾಯ ಕಚ್ಚರಂ ತೀರ್ಥೋದಕೇಮಜ್ಜಯದತ್ರ ಪೂರ್ವಮ್ ॥2.40॥**

ಅಕ್ಷೋಭ್ಯತೀರ್ಥರು ಜನರ ಅಪಹಾಸಗಳನ್ನು ಕೇಳಿದರು. ಆದರೂ ಅವರಲ್ಲಿ ಯಾವುದೇ ವಿಕಾರವಾಗಲಿಲ್ಲ. ಅಧೀರರು ಅಪಹಾಸಗಳಿಂದ ವಿಕೃತರಾಗುತ್ತಾರೆ. ಧೀರರು ತಾವು ನಂಬಿದ ತತ್ತ್ವದಲ್ಲಿ ಅಚಲವಾದ ವಿಶ್ವಾಸವಿದ್ದವರು ಎಂದಿಗೂ ಯಾವ ಕಾರಣಕ್ಕೂ ಧೃತಿಗೆಡುವುದಿಲ್ಲ.

ನೆರೆದ ಜನಸ್ತೋಮಕ್ಕೆ ದೃಷ್ಟಾಂತವನ್ನು ತಿಳಿಸಲು ಸಿದ್ಧರಾದರು. ತಮ್ಮ ಶಿಷ್ಯರಿಂದ ಸ್ವಚ್ಛವಾದ, ಅತ್ಯಂತ ಶುಭ್ರವಾದ ವಸ್ತ್ರವನ್ನು ತರಿಸಿದರು. ಗೇರು ಬೀಜ ಮುಂತಾದವುಗಳಿಂದ ಆ ವಸ್ತ್ರ ಮಲಿನವಾಗುವಂತೆ ಮಾಡಿಸಿದರು. ಮಲಿನವಾದ ಆ ವಸ್ತ್ರವನ್ನು ಅಲ್ಲಿಯ ನದಿಯಲ್ಲಿ ಮುಳುಗಿಸಿದರು. ಆದರೆ ಆ ವಸ್ತ್ರ ಹಾಗೆಯೇ ಮಲಿನವಾಗಿಯೇ ಇತ್ತು. ಕಿಂಚಿತ್ತೂ ಮಾಲಿನ್ಯವು ಕಳೆಯಲಿಲ್ಲ.

ಅದೇ ವಸ್ತ್ರದ ಮೇಲೆ ಶಂಖೋದಕವನ್ನು ಪ್ರೋಕ್ಷಣ ಮಾಡಿದರು. ಕ್ಷಣದಲ್ಲಿಯೇ ವಸ್ತ್ರ ಅತ್ಯಂತಶುಭ್ರವಾಯಿತು.ಆಮಹಿಮೆಯನ್ನುನೋಡುವವರೆಲ್ಲರೂಆಶ್ಚರ್ಯಚಕಿತರಾದರು. ಮೂಕವಿಸ್ಮಿತರಾದರು. ಭಯಭೀತರಾದರು. ಸಮರ್ಥರಾದ ಗುರುಗಳನ್ನು ಅಪಹಾಸ ಮಾಡಿದ ಭಯ ಅವರ ಅಣುವಣುವಿನಲ್ಲಿಯೂ ಗೋಚರಿಸುತ್ತಿತ್ತು. ತಾವು ಮಾಡಿದ ಅಪಹಾಸ ಅಪರಾಧವಾಯಿತೆಂದು ತಿಳಿದರು. ದೀನರಾಗಿ ಆರ್ತರಾಗಿ ಗುರುಗಳನ್ನು ಸಂಪ್ರಾರ್ಥಿಸಿದರು. ಸ್ವಾಮಿನ್ ! ನಮ್ಮ ಈ ಅಪರಾಧವನ್ನು ತಾವು ಕ್ಷಮಿಸಬೇಕೆಂದು ಅಂಗಲಾಚಿದರು. ನಾವು ಅಜ್ಞಾನಿಗಳು. ಇಂಥ ಚರಿತೆಯನ್ನು ಕಂಡು ಕೇಳಿ ಅರಿಯೆವು. ಹೀಗಾಗಿ ಇದು ಅಶಕ್ಯ ಎಂದು ತಿಳಿದಿದ್ದೆವು. ಆದರೆ ಪ್ರತ್ಯಕ್ಷವಾಗಿಯೇ ತಮ್ಮ ಮಹಿಮೆಯನ್ನು ಕಂಡಿದ್ದೇವೆ. ತಮಗೆ ವಿನೀತರಾಗಿಯೇ ನಮ್ಮ ಪಾಪಗಳನ್ನು ಕಳೆದುಕೊಳ್ಳುತ್ತೇವೆ ಎಂದು ಹೇಳಿದರು. ಉದ್ದಂಡ ನಮಸ್ಕಾರವನ್ನು ಆ ಸಭೆಯಲ್ಲಿಯೇ ಹಾಕಿದರು. ...ಸಶೇಷ...

✍ ಡಾ. ವೆಂಕಟೇಶಾಚಾರ್ಯ ಬಿ.ಆರ್

**ದ್ವಿದಳ ವ್ರತ-**

ದ್ವಿದಳಗಳು ಎಂದರೆ ಅಂಕುರ (ಮೊಳಕೆ) ಇಲ್ಲದೆಯೇ ಯಾವ ಸಸ್ಯಗಳಲ್ಲಿ ಎರಡು ಬೀಜಗಳು ಉತ್ಪನ್ನವಾಗುತ್ತವೆಯೋ ಅವು ದ್ವಿದಲಗಳು ಎನಿಸಿಕೊಳ್ಳುತ್ತವೆ. ಅಲ್ಲದೇ ಬೀಜವನ್ನು ಹುರಿದಾಗ ಎರಡು ದಲಗಳು ಕಂಡರೆ ಅವುಗಳನ್ನೂ ದ್ವಿದಲಗಳು ಎನ್ನಲಾಗಿದೆ. ಉದ್ದು, ಹೆಸರು, ಕಡಲೆ, ಹುರಳೀ, ಅವರೆ, ತೊಗರಿ ಇತ್ಯಾದಿಗಳು. ಕಾರ್ತಿಕಮಾಸದಲ್ಲಿ ಇಂತಹ ದ್ವಿದಲಗಳನ್ನು ಹಾಗೂ ಬಹುಬೀಜಗಳನ್ನು ತ್ಯಜಿಸಬೇಕು. ಈ ದ್ವಿದಲವ್ರತವನ್ನು ಮಾಡದೇ ಆ ಮಾಸದಲ್ಲಿ ನಿಷಿದ್ಧವಾದ ದ್ವಿದಲಗಳನ್ನು ತಿಂದರೆ ಕ್ರಿಮಿಗಳನ್ನು ತಿಂದ ಪಾಪಕ್ಕೆ ಗುರಿಯಾಗುತ್ತಾನೆ.

ದಂಟಿನ ಸೊಪ್ಪು, ಅಗಸೆ ಸೊಪ್ಪು, ಹಸಿ ಶುಂಠಿ, ಬಾಳೇಕಾಯಿ, ಬಾಳೇಹಣ್ಣು, ಸುವರ್ಣಗಡ್ಡೆ, ಗೆಣಸು, ಸಾಮೇಗಡ್ಡೆ ಇವುಗಳು ದ್ವಿದಲವ್ರತದಲ್ಲಿ ಗ್ರಾಹ್ಯವಾದವುಗಳು. ವ್ರತಕಾಲ ಮುಗಿದ ಮೇಲೆ ದ್ವಿದಲಗಳನ್ನು ಭಗವಂತನಿಗೆ ಸಮರ್ಪಿಸಿ ಬ್ರಾಹ್ಮಣನಿಗೆ ದಾನ ನೀಡಬೇಕು.

**ತಪ್ತ ಮುದ್ರಾಧಾರಣೆ**

**ಅಗ್ನಿಹೋತ್ರಂ ಯಥಾ ನಿತ್ಯಂ ವೇದಸ್ಯಾಧ್ಯಯನಂ ಯಥಾ ।**
**ಬ್ರಾಹ್ಮಣಸ್ಯ ತಥೈವೇದಂ ತಪ್ತಮುದ್ರಾದಿಧಾರಣಮ್॥**

(ಪದ್ಮಪು.ಉ.ಖಂ-6,ಅ-66,ಶ್ಲೋ-81)

ಬ್ರಾಹ್ಮಣನಾದವನಿಗೆ ಅಗ್ನಿಹೋತ್ರವಾಗಲೀ, ವೇದಾಧ್ಯಯನವಾಗಲೀ ಹೇಗೆ ಅತ್ಯಂತ ಮುಖ್ಯವೋ ಹಾಗೆಯೇ ಪ್ರತಿಯೊಬ್ಬ ವೈಷ್ಣವನೂ ಸುದರ್ಶನಹೋಮ ಮಾಡಿ ತಮ್ಮ ಗುರುಗಳಿಂದ ದೇಹಶುದ್ಧಿಗಾಗಿ ತಪ್ತಮುದ್ರಾಧಾರಣೆಯನ್ನು ಮಾಡಿಸಿಕೊಳ್ಳುವದೂ ಅಷ್ಟೇ ಮುಖ್ಯ ಕರ್ತವ್ಯವಾಗಿದೆ.

ಹಿಂದೆ ದೇವತೆಗಳು ವೃತ್ರಾಸುರನಿಂದ ಪರಾಜಿತರಾಗಿ ವಿಷ್ಣುವಿಗೆ ಮೊರೆ ಹೋದಾಗ ವಿಷ್ಣುವು ತನ್ನ ಚಕ್ರಾದಿಲಾಂಛನವನ್ನು ಧರಿಸಿ ಯುದ್ಧ ಮಾಡಿರಿ ಎಂದನು. ಹಾಗೆ ಮುದ್ರಾಧಾರಣೆಯನ್ನು ಮಾಡಿಕೊಂಡು ಯುದ್ಧವನ್ನು ಮಾಡಿದಾಗ ಶತ್ರುಗಳು ಸೋತು ಹೋದರು ಎನ್ನುವ ಕಥೆಯನ್ನು ಕೇಳುತ್ತೇವೆ. ಚಕ್ರಾದಿಗಳನ್ನು ಧರಿಸದೇ ಮಾಡುವ ಕರ್ಮಗಳು ವ್ಯರ್ಥವಾಗುವವು ಎಂದು ಹೇಳಲಾಗಿದೆ. ಬ್ರಹ್ಮಾದಿದೇವತೆಗಳೇ ಮುದ್ರಾಧಾರಣೆ ಮಾಡಿಸಿಕೊಳ್ಳುವರು ಎಂದಮೇಲೆ ಮಾನವರು ನಿಶ್ಚಿತವಾಗಿ ಮಾಡಿಸಿಕೊಳ್ಳಲೇಬೇಕು. ಆ ಮುದ್ರಾಧಾರಣೆಯನ್ನು ತಮ್ಮ ಗುರುಗಳಿಂದಲೇ ಮಾಡಿಸಿಕೊಳ್ಳಬೇಕು.

**ಮುದ್ರಾಧಾರಣ ಕಾಲದಲ್ಲಿ ಪಠಿಸಬೇಕಾದ ಮಂತ್ರಗಳು-**

**ಸುದರ್ಶನ ಮಹಾಜ್ವಾಲ ಕೋಟಿಸೂರ್ಯಸಮಪ್ರಭ ।**
**ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥**

**ಪಾಂಚಜನ್ಯ ನಿಜಧ್ವಾನಧ್ವಸ್ತಪಾತಕಸಂಚಯ ।**
**ಪಾಹಿ ಮಾಂ ನರಕಾತ್ ಘೋರಾತ್ ಸಂಸಾರಾರ್ಣವತಾರಣ ॥**

ಈ ಮಂತ್ರಗಳನ್ನು ಉಚ್ಚರಿಸುತ್ತ ತಮ್ಮ ಗುರುಗಳಿಂದಲೇ ಮುದ್ರಾಧಾರಣೆಯನ್ನು ಮಾಡಿಸಿಕೊಳ್ಳಬೇಕು.

**ಸನ್ಯಾಸಿಗಳ ಚಾತುರ್ಮಾಸ್ಯ**

ಚಾತುರ್ಮಾಸ್ಯ ಕಾಲದಲ್ಲಿ ಸಕಲಪ್ರಾಣಿಗಳ ಹಿತಕ್ಕಾಗಿ ಸನ್ಯಾಸಿಗಳು ಒಂದು ಸ್ಥಳದಲ್ಲಿ ಸಂಕಲ್ಪಪೂರ್ವಕವಾಗಿ ಚಾತುರ್ಮಾಸ್ಯಕ್ಕೆ ಕುಳಿತುಕೊಳ್ಳಬೇಕು.

**ವರ್ಷಾಸು ಧ್ರುವಶೀಲಸ್ತು ಮಾಸ್ವೇಕಾಕೀ ಯತಿಶ್ಚರೇತ್ ।** (ಅಥರ್ವ,ಆರುಣಿಕೋಪನಿಷತ್-4)

ಮಳೆಗಾಲದಲ್ಲಿ ಯತಿಗಳು ಒಂದು ಸ್ಥಳದಲ್ಲಿ ಸ್ಥಿರವಾಗಿರಬೇಕು. ಸಜ್ಜನರು, ಪುಣ್ಯಪುರುಷರು ಇರುವ ಸ್ಥಳವನ್ನು ಆರಿಸಿಕೊಂಡು ಚಾತುರ್ಮಾಸ್ಯವನ್ನು ಕೈಗೊಳ್ಳಬೇಕು. ಮಳೆಗಾಲದಲ್ಲಿ ಕ್ರಿಮಿಗಳು ಪ್ರಾಯಶಃ ನಡೆದಾಡುವ ಮಾರ್ಗದಲ್ಲಿ ತುಂಬಿರುತ್ತವೆ. ಯತಿಗಳ ಪ್ರಧಾನಧರ್ಮಗಳಲ್ಲಿ ಒಂದಾದ ಅಹಿಂಸೆಯ ಪರಿಪಾಲನೆಗಾಗಿ ಆ ಕ್ರಿಮಿಗಳಿಗೆ ತಮ್ಮಿಂದ ಹಿಂಸೆ ಆಗಬಾರದು ಎನ್ನುವದಕ್ಕೆ ಯತಿಗಳು ಒಂದೆಡೆ ವಾಸಿಸುತ್ತಾರೆ.

**ಗೋಪದ್ಮವ್ರತ**

ಒಮ್ಮೆ ಸನತ್ಕುಮಾರರು ನಾರದರನ್ನು ಹೀಗೆ ಪ್ರಶ್ನಿಸಿದರು. ಸರ್ವವ್ರತಗಳಲ್ಲಿ ಶ್ರೇಷ್ಠವಾದ ವ್ರತ ಯಾವುದು ? ಎಂದು. ಅದಕ್ಕೆ ನಾರದರು ಹೇಳುತ್ತಾರೆ -

**ಗೋಪದ್ಮಸಂಜ್ಞಕಂ ಹ್ಯೇಕಂ ವ್ರತಾನಾಮುತ್ತಮೋತ್ತಮಮ್ ।**
**ಅಷ್ಟಸಿದ್ಧಿಪ್ರದಂ ದಿವ್ಯಂ ವಿಖ್ಯಾತಂ ಭೂಮಿಮಂಡಲೇ ॥**

ಗೋಪದ್ಮ ಎಂಬ ಹೆಸರಿನ ವತ್ರವನ್ನು ಮಾಡಿದರೆ ಅಣಿಮಾದಿ ಅಷ್ಟಸಿದ್ಧಿಯನ್ನು ಹೊಂದುತ್ತಾನೆ ಎಂದು. ಸುಮಂಗಲಿಸ್ತ್ರೀಯರು ಆಷಾಢಮಾಸ ಶುಕ್ಲ ಏಕಾದಶಿಯಿಂದ ಆರಂಭಿಸಿ ಉತ್ಥಾನ ದ್ವಾದಶಿಯವರೆಗೂ ಗೋಪದ್ಮವನ್ನು ಆಚರಿಸಬೇಕು. ಗೋವುಗಳು ವಾಸಿಸುವ ಗೋಷ್ಠದಲ್ಲಿ ಗೋಮಯದಿಂದ ನೆಲವನ್ನು ಸಾರಿಸಿ ಗೋವಿನ ಚಿತ್ರವನ್ನು ಬರೆಯಬೇಕು. ಆ ಗೋವಿನ ಚಿತ್ರದ ಸುತ್ತಲೂ ಮೂವತ್ತು ಮೂರು ಪದ್ಮಗಳನ್ನು ಬರೆಯಬೇಕು. ಗವಾಂತರ್ಯಾಮಿ ಗೋಪಾಲಕೃಷ್ಣನನ್ನು ಆವಾಹಿಸಿ ಷೋಡಶೋಪಚಾರ-ಗಳಿಂದ ಪೂಜಿಸಬೇಕು. ಗೋಪದ್ಮವ್ರತದಲ್ಲಿ ನೈವೇದ್ಯಕ್ಕಾಗಿ ಅಪೂಪಗಳನ್ನು ಅರ್ಪಿಸಬೇಕು. ನಂತರ 33 ಅರ್ಘ್ಯಗಳನ್ನು ಬಿಡಬೇಕು.

**ಅರ್ಘ್ಯಮಂತ್ರ-**

**ಅಷ್ಟದ್ರವ್ಯಸಮಾಯುಕ್ತಂ ಸ್ವರ್ಣಪಾತ್ರಸ್ಥಿತಂ ಜಲಮ್ ।**
**ಅರ್ಘ್ಯಂ ಗೃಹಾಣ ದೇವೇಶ ಭಕ್ತಾನಾಮಭಯಪ್ರದ ॥**

ನಂತರ ಮೂವತ್ತುಮೂರು ಪ್ರದಕ್ಷಿಣೆ ಹಾಗೂ ನಮಸ್ಕಾರಗಳನ್ನು ಮಾಡಿ ಅಪೂಪಗಳನ್ನು ದಾನವಾಗಿ ನೀಡಬೇಕು. ಹೀಗೆ ಐದು ವರ್ಷಗಳ ಕಾಲ ಈ ವ್ರತವನ್ನು ಮಾಡಿ ಉದ್ಯಾಪನೆ ಮಾಡಬೇಕು.

**ಅಶೂನ್ಯಶಯನವ್ರತ-**

ಆಷಾಢ ಕೃಷ್ಣ ದ್ವಿತೀಯಾದಂದು ಅಶೂನ್ಯವ್ರತವನ್ನು ಆಚರಿಸಬೇಕು. ಅಂದು ಆರಂಭಿಸಿದ ಈ ವ್ರತವನ್ನು ಮತ್ತೆ ಶ್ರಾವಣ, ಭಾದ್ರಪದ, ಆಶ್ವಯುಜ ಮಾಸಗಳ ಕೃಷ್ಣಪಕ್ಷದ ದ್ವಿತೀಯಾ ತಿಥಿಗಳಲ್ಲಿ ಆಚರಿಸಬೇಕು. ಪತಿಶಯನವು ಪತ್ನಿಶೂನ್ಯವಾಗದೇ ಇರುವದಕ್ಕೆ ಮಾಡುವ ವ್ರತ ಇದಾಗಿದೆ.

ಈ ವ್ರತದ ಅಂತ್ಯದಲ್ಲಿ ಒಂದು ಮಂಚವನ್ನು ಸಿದ್ಧಪಡಿಸಿ ರೇಷ್ಮೆವಸ್ತ್ರಗಳಿಂದ ಪರ್ಯಂಕವನ್ನು ತಯಾರಿಸಿ ಅದರ ಮೇಲೆ ಲಕ್ಷ್ಮೀನಾರಾಯಣರ ಪ್ರತಿಮೆಗಳನ್ನು ಇಟ್ಟು ಷೋಡಶೋಪಚಾರಗಳಿಂದ ಪೂಜಿಸಿ ಹೀಗೆ ಪ್ರಾರ್ಥಿಸಬೇಕು. ಓ ಭಗವಂತನೇ ! ನೀನು ಯಾವ ಕಾಲದಲ್ಲಿಯೂ ನಿನ್ನ ಪತ್ನಿಯಾದ ಲಕ್ಷ್ಮೀದೇವಿಯಿಂದ ವಿಯೋಗವನ್ನು ಹೊಂದಲಾರೆ. ಹೇಗೆ ನಿನ್ನ ಹಾಸಿಗೆಯು ಲಕ್ಷ್ಮಿಯಿಂದ ಶೂನ್ಯವಾಗಿರುವದಿಲ್ಲವೋ ಹಾಗೆ ನನ್ನ ಹಾಸಿಗೆಯೂ ನನ್ನ ಧರ್ಮಪತ್ನಿಯಿಂದ ಶೂನ್ಯವಾಗುವುದು ಬೇಡ ಎಂದು. ನಂತರ ಚಂದ್ರನಿಗೆ ಅರ್ಘ್ಯವನ್ನು ಕೊಡಬೇಕು. ಮರುದಿನ ಬ್ರಾಹ್ಮಣನಿಗೆ ವಸ್ತ್ರ ಫಲ ದಕ್ಷಿಣೆಗಳನ್ನು ಕೊಟ್ಟು ಆಶೀರ್ವಾದವನ್ನು ಪಡೆಯಬೇಕು. ತಾನು ಲವಣರಹಿತ ಆಹಾರವನ್ನು ಸ್ವೀಕರಿಸಿ ಬ್ರಾಹ್ಮಣ ದಂಪತಿಗಳಿಗೆ ಹಾಸಿಗೆಯನ್ನು ದಾನವಾಗಿ ಕೊಡಬೇಕು.

**ಭೀಮನ ಅಮಾವಾಸ್ಯ**

ಆಷಾಢಮಾಸದ ಅಮಾವಾಸ್ಯೆಯಂದು ಭೀಮಾವ್ರತವನ್ನು ಆಚರಿಸಬೇಕು. ಇದನ್ನು ಜ್ಯೋತಿರ್ಭೀಮೇಶ್ವರವ್ರತ ಎಂದೂ ಕರೆಯಲಾಗಿದೆ. ಈ ವ್ರತವನ್ನು ವಿವಾಹಿತರು ಅಥವಾ ಅವಿವಾಹಿಕನ್ಯೆಯರು ಆಚರಿಸಬಹುದಾಗಿದೆ. ಈ ವ್ರತದಿಂದ ಕನ್ಯೆಯರು ಸದ್ಗುಣಿಯಾದ ಪತಿಯನ್ನು, ವಿವಾಹಿತರು ದೀರ್ಘಸೌಭಾಗ್ಯವನ್ನು ಪಡೆಯಬಹುದಾಗಿದೆ. ...ಸಶೇಷ...

**"ಸಂಧ್ಯಾವಂದನೆಯ ಕಾಲ"** ಬ್ರಾಹ್ಮಣರು ಸೂರ್ಯೋದಯಕ್ಕೂ ಎರಡು ಮುಹೂರ್ತ (96 ನಿಮಿಷ) ಮೊದಲು ಪ್ರಾತಃ ಸಂಧ್ಯಾವಂದನೆ ಮಾಡಬೇಕು. ಕ್ಷತ್ರಿಯರು ಮುಹೂರ್ತಕ್ಕೂ (48ನಿಮಿಷ) ಮೊದಲು ಸಂಧ್ಯಾವಂದನೆಯನ್ನು ಆಚರಿಸಬೇಕು. ವೈಶ್ಯರು ಸೂರ್ಯೋದಯಕ್ಕಿಂತ 24 ನಿಮಿಷ ಮೊದಲು ಸಂಧ್ಯಾವಂದನೆ ಮಾಡಬೇಕು. ಹೀಗೆಯೇ ಸಾಯಂ ಸಂಧ್ಯಾವಂದನದಲ್ಲಿ ಸೂರ್ಯಾಸ್ತಕ್ಕಿಂತ ಮೊದಲು ಎಂದು ತಿಳಿಯಬೇಕು ಎಂಬುದಾಗಿ ಅಗ್ನಿಸ್ಮೃತಿ ಹೇಳುತ್ತದೆ.

# ಪುರಾಣಗಳು ತಿಳಿಸಿದಂತೆ ತೀರ್ಥ - ಕ್ಷೇತ್ರಗಳ ಮಹಿಮೆ



✍ ಪಂ. ಪುರಂದರಾಚಾರ್ಯ ಹಯಗ್ರೀವ

**ರಾಮಸೇತು ಯಾತ್ರೆ**

ಮೊಟ್ಟ ಮೊದಲಿಗೆ ನಮ್ಮ ದೇಶದ ದಕ್ಷಿಣದ ತುದಿಯಲ್ಲಿರುವ ರಾಮಸೇತು ಅಥವಾ ರಾಮೇಶ್ವರ ಕ್ಷೇತ್ರದ ಮಹತ್ವವನ್ನು ಸ್ಕಾಂದಪುರಾಣವು ತಿಳಿಸಿದಂತೆ ತಿಳಿಯುವ ಪ್ರಯತ್ನವನ್ನು ಮಾಡೋಣ.

ರಾಮೇಶ್ವರವು ಭರತಭೂಮಿಯ ಶ್ರೇಷ್ಠ ಕ್ಷೇತ್ರಗಳಲ್ಲೊಂದು. ಅಲ್ಲಿ ಪ್ರಭು ಶ್ರೀರಾಮ-ಚಂದ್ರನೇ ನಿರ್ಮಾಣ ಮಾಡಿ(ಸಿ)ದ ಸೇತು ಇದೆ. ಆದ್ದರಿಂದಲೇ ಆ ಸ್ಥಳಕ್ಕೆ ಬಹಳ ಮಹತ್ವ ಇದೆ. ಈ ಸೇತುವೆಯ ದರ್ಶನಮಾತ್ರದಿಂದಲೇ ಮಾನವರಿಗೆ ಸರ್ವಯಜ್ಞಗಳನ್ನು ಮಾಡಿದ ಫಲ ದೊರೆಯುತ್ತದೆ. ಇಲ್ಲಿನ ತೀರ್ಥಗಳಲ್ಲಿ ಸ್ನಾನ ಮಾಡುವ ಮಾತ್ರದಿಂದಲೇ ಪಾಪಗಳಿಂದ ಭಕ್ತರಿಗೆ ಮುಕ್ತಿ ದೊರೆಯುತ್ತದೆ. ಪ್ರತಿನಿತ್ಯವೂ ರಾಮಸೇತು ಮತ್ತು ರಾಮೇಶ್ವರದಲ್ಲಿರುವ ಲಿಂಗಗಳನ್ನು ಸ್ಮರಣೆ ಮಾಡಿದರೂ ಮಹಾಫಲ ಇದೆ. “ಗಣ್ಯಂತೇ ಪಾಂಸವೋ ಭೂಮೇರ್ಗಣ್ಯಂತೇ ದಿವಿ ತಾರಕಾಃ । ಸೇತುದರ್ಶನಜಂ ಪುಣ್ಯಂ ಶೇಷೇಣಾಪಿ ನ ಗಣ್ಯತೇ ॥” ಭೂಮಿಯ ಕಣಗಳನ್ನು ಎಣಿಸಬಹುದು. ಆಗಸದಲ್ಲಿರುವ ನಕ್ಷತ್ರಗಳನ್ನು ಎಣಿಸಬಹುದು. ಆದರೆ ರಾಮಸೇತುದರ್ಶನದಿಂದ ಉಂಟಾದ ಪುಣ್ಯವನ್ನು ಸಹಸ್ರವದನರಾದ ಶೇಷದೇವರಿಗೂ ಎಣಿಸಲಾಗದು. ಈ ಸ್ಥಳದ ಮೇಲೆ ಬೀಸಿ ಬಂದ ಗಾಳಿಯ ಸ್ಪರ್ಶವಾದರೂ ಬ್ರಹ್ಮಹತ್ಯಾ, ಸುರಾಪಾನ ಮೊದಲಾದ ಪಂಚ ಮಹಾಪಾಪಗಳು ನಾಶವಾಗುತ್ತವೆ. ಈ ಸೇತುತೀರ್ಥದಲ್ಲಿ ಸ್ನಾನ ಮಾಡಿದವರು ಉದ್ಧೃತರಾಗುವುದಲ್ಲದೇ, ಅವರು ಯಾರ ಹೆಸರಿನಲ್ಲಿ ಸ್ನಾನ ಮಾಡುವರೋ ಅವರೂ ಕೂಡ ಮಹಾಪಾತಕಗಳಿಂದ ಮುಕ್ತರಾಗುವರು. ಮೃತಮನುಷ್ಯನ ಅಸ್ಥಿಗಳನ್ನು, ಅವನ ಮಕ್ಕಳಾಗಲೀ ಅಥವಾ ಮೊಮ್ಮೊಕ್ಕಳಾಗಲೀ ಯಾರಾದರೂ ಈ ರಾಮೇಶ್ವರದ ತೀರ್ಥದಲ್ಲಿ ವಿಸರ್ಜಿಸಿದರೆ ಕೂಡಲೇ ಆ ಮೃತಮನುಷ್ಯನು ತನ್ನ ಪಂಚಮಹಾಪಾತಕಗಳಿಂದ ಮುಕ್ತನಾಗುವನು.

**ನಾನಾವಿಧದ ಬ್ರಹ್ಮಹತ್ಯೆ**

ಬ್ರಹ್ಮಹತ್ಯೆ ಮಹಾಪಾಪಗಳಲ್ಲಿ ದೊಡ್ಡದು. ಈ ಬ್ರಹ್ಮಹತ್ಯೆಯು ಅನೇಕ ಬಗೆಯಾಗಿದೆ. ವೇದಗಳು, ಉತ್ತಮ ವೇದವಿದ್ವಾಂಸರು, ಗೋವುಗಳು, ಯತಿಗಳು ಇವರ ನಿಂದನೆ ಮಾಡುವುದು ಬ್ರಹ್ಮಹತ್ಯೆ ಎಂದು ಕರೆಸಿಕೊಳ್ಳುತ್ತದೆ. ತಿಳಿಯದವರನ್ನು ವಾಮಮಾರ್ಗದಲ್ಲಿ ಪ್ರಚೋದಿಸುವುದು, ಹಣಕ್ಕಾಗಿ ವೇದಶಾಸ್ತ್ರಗಳ ಪಾಠ ಹೇಳುವುದು, ನೀರು ಕುಡಿಯಲು ಬಂದ ಅಥವಾ ಹುಲ್ಲು ತಿನ್ನಲು ಬಂದ ಹಸುಗಳನ್ನು ತಡೆದರೆ ಅಥವಾ ಓಡಿಸಿದರೆ ಬ್ರಹ್ಮಹತ್ಯೆ

ರೂಪವಾದ ಮಹಾಪಾಪವು ಬರುತ್ತದೆ. ಹೀಗೆ ನಾನಾ ವಿಧಗಳಾದ ಬ್ರಹ್ಮಹತ್ಯೆಯು ಸೇತುತೀರ್ಥದಲ್ಲಿ ಸ್ನಾನ ಮಾಡುವುದರಿಂದ ನಾಶವಾಗುತ್ತದೆ.

**ಅನೇಕ ಪ್ರಕಾರದ ಸುರಾಪಾನ**

ಪಂಚ ಮಹಾಪಾತಕಗಳಲ್ಲಿ ಸುರಾಪಾನ ಎಂಬುದು ಎರಡನೆಯದು. ಮದ್ಯಪಾನ ಮಾಡುವುದನ್ನು ಸುರಾಪಾನ ಎಂಬ ಹೆಸರಿನಿಂದ ಮುಖ್ಯವಾಗಿ ಕರೆದರೂ ಕೂಡ ಇನ್ನೂ ಕೆಲವು ಪಾಪಗಳನ್ನು ಸುರಾಪಾನ ಎಂಬ ಹೆಸರಿನಿಂದ ಕರೆಯಲಾಗಿದೆ. ಶ್ರೀಹರಿಯ ಪೂಜೆಯನ್ನು ಬಿಡುವುದು, ದೇವರಿಗೆ ಎಂದು ಕೊಟ್ಟ ಹಾಲು-ಹಣ್ಣು ಮೊದಲಾದ ಪದಾರ್ಥಗಳನ್ನು ದೇವರಿಗೆ ಅರ್ಪಿಸದೇ ತನಗಾಗಿಯೇ ಬಳಸುವುದು, ಮದ್ಯಪಾನ ಮಾಡಿದವರ ಸಹವಾಸ ಮಾಡುವುದು, ವೇಶ್ಯಾಸಹವಾಸ ಮಾಡುವುದು ಇತ್ಯಾದಿ ಕಾರ್ಯಗಳೂ ಕೂಡ ಸುರಾಪಾನವೆಂದು ಕರೆಯಲ್ಪಡುತ್ತವೆ. ಈ ಎಲ್ಲ ಪಾಪಗಳು ಶ್ರೀರಾಮೇಶ್ವರದ ರಾಮಸೇತುವಿನಲ್ಲಿ ಸ್ನಾನ ಮಾಡುವುದರಿಂದ ದೂರವಾಗುತ್ತವೆ.

**ಸ್ವರ್ಣಸ್ತೇಯದ ಬಗೆಗಳು**

ಸ್ವರ್ಣಸ್ತೇಯ ಎಂದರೆ ಚಿನ್ನವನ್ನು ಕಳ್ಳತನ ಮಾಡುವುದು ಎಂದರ್ಥ. ಈ ಸ್ವರ್ಣಸ್ತೇಯಕ್ಕೆ ಮಹಾಪಾತಕಗಳಲ್ಲಿ ಮೂರನೇ ಸ್ಥಾನವಿದೆ. ಗಡ್ಡೆ-ಗೆಣಸು, ಹಣ್ಣು-ಕಾಯಿ, ಕಸ್ತೂರಿ, ರೇಶಿಮೆ ವಸ್ತ್ರ, ಹಾಲು, ಮೊಸರು, ಬೆಣ್ಣೆ, ತುಪ್ಪ, ಚಂದನ, ಅಡಿಕೆ, ಕರ್ಪೂರ, ತಾಮ್ರ, ಹಿತ್ತಾಳೆ, ಕಂಚು, ತುಳಸೀಮಣಿ ಮುಂತಾದ ಪದಾರ್ಥಗಳ ಕಳ್ಳತನವೂ ಸಹ ಸ್ವರ್ಣಸ್ತೇಯವೆಂದು ಕರೆಸಿಕೊಳ್ಳುತ್ತವೆ. ಈ ರೀತಿಯ ಕಳ್ಳತನದ ಪಾಪವೂ ಕೂಡ ಸೇತುತೀರ್ಥದ ಸ್ನಾನದಿಂದ ಪರಿಹಾರವಾಗುತ್ತದೆ.

**ಗುರುತಲ್ಪ ಅಥವಾ ಗುರುಪತ್ನೀಗಮನ**

ಗುರುಪತ್ನೀಸಹವಾಸ ಮಹಾಪಾತಕವಾಗಿದೆ. ಸಹೋದರಿ, ಸೊಸೆ, ರಜಸ್ವಲಾ, ಸಹೋದರರ ಪತ್ನಿ, ಮಿತ್ರರ ಮಡದಿ ಅಥವಾ ಯಾವುದೇ ಪರಸ್ತ್ರೀಸಂಪರ್ಕ, ಗುರುಪತ್ನೀ ಗಮನ ರೂಪವಾದ ಮಹಾಪಾತಕದಲ್ಲಿ ಸೇರುತ್ತದೆ. ಇಂತಹ ಕೆಟ್ಟಕೆಲಸವನ್ನು ಮಾಡಿದವರು ಎಲ್ಲ ವೇದೋಕ್ತಕರ್ಮಗಳಲ್ಲಿ ಬಾಹ್ಯರು. ಇಂಥ ಪಾಪಗಳೂ ಕೂಡ ಸೇತುತೀರ್ಥದ ಸ್ನಾನದಿಂದ ಪರಿಹಾರವಾಗುತ್ತವೆ.

ಈ ಹಿಂದೆ ಹೇಳಿದ ಮಹಾಪಾಪಗಳನ್ನು ಮಾಡಿದವರ ಸಹವಾಸ ಮಾಡುವುದು ಐದನೆಯ ಮಹಾಪಾತಕ. ಇಂತಹವರ ಪಾಪಗಳ ಪರಿಹಾರವೂ ಕೂಡ ಸೇತುಸ್ನಾನದಿಂದ ಆಗುತ್ತದೆ.

ರಾಮಸೇತುಸ್ನಾನ ಯಾತ್ರಿಕರ ಪಾಲಿಗೆ ಕಾಮಧೇನು, ಕಲ್ಪವೃಕ್ಷ ಮತ್ತು ಚಿಂತಾಮಣಿ ಇದ್ದಂತೆ. ಎಲ್ಲರ ಎಲ್ಲ ಇಷ್ಟಾರ್ಥಗಳನ್ನು ಪೂರೈಸುತ್ತದೆ. ಹಾಗಾಗಿ ರಾಮೇಶ್ವರದ

ಯಾತ್ರೆಯನ್ನು ಪ್ರಯತ್ನಪೂರ್ವಕವಾಗಿ ಒಮ್ಮೆಯಾದರೂ ಜೀವನದಲ್ಲಿ ಮಾಡಲೇಬೇಕು. ಅದು ಸಾಧ್ಯವಿಲ್ಲದಿದ್ದಲ್ಲಿ ರಾಮೇಶ್ವರದ ಯಾತ್ರೆ ಮಾಡುವವರಿಗೆ ಆರ್ಥಿಕ ಸಹಾಯವನ್ನಾದರೂ ಮಾಡಿ ರಾಮೇಶ್ವರದ ಯಾತ್ರೆಯ ಪುಣ್ಯವನ್ನು ಪಡೆಯಬಹುದು.

ಈ ರಾಮಸೇತುವನ್ನು ಕಟ್ಟಲು ಪ್ರಾರಂಭ ಮಾಡಿದ ಸ್ಥಳವು ದರ್ಭಶಯನವೆಂದು ಪ್ರಸಿದ್ಧವಾಗಿದೆ. ಈ ಸೇತುವಿನ ಈ ದಂಡೆಯಿಂದ ಆಚೆಯ ದಂಡೆಯವರೆಗೆ ಒಟ್ಟು ಇಪ್ಪತ್ತನಾಲ್ಕು ತೀರ್ಥಗಳಿವೆ. ಅವು ಹೀಗಿವೆ -

| | | | |
|---|---|---|---|
| ೧ | ಚಕ್ರತೀರ್ಥ | ೧೩ | ಲಕ್ಷ್ಮೀತೀರ್ಥ |
| ೨ | ವೇತಾಳವರದತೀರ್ಥ | ೧೪ | ಅಗ್ನಿತೀರ್ಥ |
| ೩ | ಪಾಪವಿನಾಶನತೀರ್ಥ | ೧೫ | ಸುಚಕ್ರತೀರ್ಥ |
| ೪ | ಸೀತಾಸರೋವರತೀರ್ಥ | ೧೬ | ಶಿವತೀರ್ಥ |
| ೫ | ಮಂಗಳತೀರ್ಥ | ೧೭ | ಶಂಖತೀರ್ಥ |
| ೬ | ಅಮೃತವಾಪಿತೀರ್ಥ | ೧೮ | ಯಾಮುನತೀರ್ಥ |
| ೭ | ಬ್ರಹ್ಮಕುಂಡತೀರ್ಥ | ೧೯ | ಗಂಗಾತೀರ್ಥ |
| ೮ | ಹನುಮತ್ಕುಂಡತೀರ್ಥ | ೨೦ | ಗಯಾತೀರ್ಥ |
| ೯ | ಅಗಸ್ತ್ಯತೀರ್ಥ | ೨೧ | ಕೋಟಿತೀರ್ಥ |
| ೧೦ | ರಾಮತೀರ್ಥ | ೨೨ | ಸಾಧ್ಯಾಮೃತತೀರ್ಥ |
| ೧೧ | ಲಕ್ಷ್ಮಣತೀರ್ಥ | ೨೩ | ಮಾನಸತೀರ್ಥ |
| ೧೨ | ಜಯತೀರ್ಥ | ೨೪ | ಧನುಷ್ಕೋಟಿತೀರ್ಥ |

ಪ್ರಭು ಶ್ರೀರಾಮನ ಆಜ್ಞೆಯಿಂದ ದಕ್ಷಿಣೋದಧಿಯ ವಿಶಾಲವಾದ ಪ್ರದೇಶದಲ್ಲಿ ನಿರ್ಮಿತವಾದ ಈ ವಿರಾಟ್ ಸೇತುವೆಯನ್ನು ದರ್ಶನ ಮಾಡಿದವರು, ಅದರ ಮಧ್ಯದಲ್ಲಿರುವ ಈ ಹಿಂದೆ ಹೇಳಿದ ತೀರ್ಥಗಳಲ್ಲಿ ಸ್ನಾನ ಮಾಡಿ ಶ್ರೀರಾಮನಾಮವನ್ನು ಜಪಿಸಿದವರು ದಿವ್ಯಗತಿಯನ್ನು ಹೊಂದುತ್ತಾರೆ. ಈ ಸೇತುವೆಯ ಮೂಲಕ ಕಪಿಗಳೊಂದಿಗೆ ಶ್ರೀರಾಮಚಂದ್ರದೇವರು ಸಮುದ್ರವನ್ನು ದಾಟಿಹೋದ ಕಥೆಯನ್ನು ( ಶ್ರೀ ರಾಮಾಯಣದ ಕಥೆಯನ್ನು) ಕೇಳಿದವರೂ ಸಹ ಸಂಸಾರವನ್ನು ಸುಲಭವಾಗಿ ದಾಟಿ ಮುಕ್ತಿಯನ್ನು ಹೊಂದುತ್ತಾರೆ.

...ಸಶೇಷ...


**ನೂತನ (ಶಾರ್ವರೀ) ಸಂವತ್ಸರದ**

**ಉತ್ತರಾದಿಮಠದ ಪಂಚಾಂಗ ಹಾಗೂ ಕ್ಯಾಲೆಂಡರ್ ಲಭ್ಯ**

**ಸಂಸ್ಕೃತ, ಕನ್ನಡ, ಪಂಚಾಂಗ ಹಾಗೂ ಕ್ಯಾಲೆಂಡರ್‌ಗಳಿಗಾಗಿ**

**ಸಂಪರ್ಕಿಸಿ : ಮ್ಯಾನೆಜರ್ ಶ್ರೀ ಉತ್ತರಾದಿಮಠ ಬೆಂಗಳೂರು**

**ದೂ.080 22429132 / 9986171029**

**Order online** from **www.madhwakart.com**

**ನೀವು ಪಡೆಯಿರಿ ನಿಮ್ಮವರಿಗೂ ಪರಿಚಯಿಸಿ**

ದಾಸಸುಧಾ

# ಹರಿದಾಸರ ಜನಪರ ದೃಷ್ಟಿ-೪

✍ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಪುರಂದರದಾಸರು ಕಾಲಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು, ಬಗಲಿಗೆ ಗೋಪಾಳಬುಟ್ಟಿಯನ್ನು ತೂಗುಹಾಕಿಕೊಂಡು, ಚಿಟಿಕೆ ಬಾರಿಸುತ್ತ, "ಮಧುಕರವೃತ್ತಿ ಎನ್ನದು, ಅದು ಬಲು ಚೆನ್ನದು, ಪದುಮನಾಭನ ಪಾದಪದುಮ ಮಧುಪವೆಂಬ" ಎನ್ನುತ್ತ ಬೀದಿಯಲ್ಲಿ ಇಳಿದರು.

ಅವರ ಜೀವದ ಗೆಳೆಯ ಕನಕದಾಸರು "ಕುಲ ಕುಲವೆಂದು ಹೊಡದಾಡದಿರಿ. ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂದು ಕೇಳಿದರು. ಅವರಿಗೆ ಪರಸ್ಪರ ತಾವು ಯಾವ ಜಾತಿಯವರು ಎಂಬುದು ಮುಖ್ಯವಾಗಿರಲಿಲ್ಲ. "ಆವ ಕುಲವಾದರೇನು, ಆವನಾದರೇನು ಆತ್ಮ ಭಾವವರಿತ ಮೇಲೆ" ಎಂದರು. ಇಷ್ಟಾಗಿಯೂ ಅವರನ್ನು ಕಂಡು ಮೂಗು ಮುರಿದವರಿಗೆ,

"ಒಂದು ನೆವದಿಂದ ಎನ್ನ ಕಾಡಿದವರಿಗೆ ಹೊನ್ನು, ಹೆಣ್ಣು, ಗಂಡು ಮಕ್ಕಳಾಗಲಿ, ಕಂದಿ ಕುಂದಿ ಎನ್ನ ಬಾಧೆ ಪಡಿಸಿದವರಿಗೆ ಕನ್ಯಾದಾನದ ಫಲ ಬಂದು ತಟ್ಟಲಿ, ಹಿಂದೆ ನನ್ನ ಬೈದವರೆಲ್ಲ ಚಂದಾಗಿರಲಿ, ಮುಂದೆ ನನ್ನ ಬೈಯುವರೆಲ್ಲ ಅಂದಣವೇರಲಿ, ಕುಂದು ಇಟ್ಟವರೆಲ್ಲ ಕುದುರೆಯ ಕಟ್ಟಿ ಬಾಳಲಿ, ಬಂದು ಒದ್ದವರ ಭತ್ತದ ಗದ್ದೆ ಬೆಳೆಯಲಿ, ಜನರೊಳಗೆ ಮಾನಭಂಗ ಮಾಡಿದವರಿಗೆ ಜೇನುತುಪ್ಪ ಸಕ್ಕರೆ ಊಟ ಆಗಲಿ, ಹಾನಿ ಬಾರದಂಥ ಲೋಕ ಆಗಲಿ ಅವರಿಗೆ ಮಹಾನುಭಾವ ಮುಕ್ತಿಯ ಕೊಡುವ ನೆಲೆಯಾದಿಕೇಶವ" ಎಂದರು.

ಅಂತೆಯೇ ಅವರು ನಡೆಸುತ್ತಿದ್ದ ವಿರಕ್ತಜೀವನವು ಜನರಿಗೆ ಆದರ್ಶವಾಗಿತ್ತು. ಸಂಸಾರಿಗಳಾಗಿ, ಯದೃಚ್ಛಾಲಾಭಸಂತುಷ್ಟರಾಗಿ, ಸಂಗ್ರಹಬುದ್ಧಿಯನ್ನು ತೊರೆದು, ಭಗವಂತನ ನಾಮಸಂಕೀರ್ತನೆಯನ್ನು ಮಾಡುತ್ತ, ಹರ್ಷಚಿತ್ತರಾಗಿ, ತಮ್ಮ ಜೀವನವನ್ನು ಸಾಗಿಸುತ್ತಿದ್ದ ರೀತಿ ಎಲ್ಲ ಜನಸಾಮಾನ್ಯರಿಗೂ ಅನುಕರಣೀಯವಾಗಿತ್ತು.

ವೈರಾಗ್ಯವೆಂದಾಕ್ಷಣ ಈ ಜಗತ್ತು ಕ್ಷಣಭಂಗುರ, ಎಲ್ಲವೂ ಮಿಥ್ಯೆ, ಮಾಯೆ ಎನ್ನುತ್ತ ಜೀವನದಿಂದ ವಿಮುಖರಾಗಲಿಲ್ಲ. ಈ ಜೀವನ ಅನಿತ್ಯ, ಅಶಾಶ್ವತ ಎಂಬುದು ಗೊತ್ತಿದ್ದರೂ, ಪುರಂದರದಾಸರು "ಸಂಸಾರವೆಂಬಂಥ ಭಾಗ್ಯವಿರಲಿ, ಕಂಸಾರಿಯನು ನೆನೆವಂಥ ಸೌಭಾಗ್ಯವಿರಲಿ" ಎಂದು ಹೇಳುತ್ತ, "ಈಸಬೇಕು, ಇದ್ದು ಜಯಿಸಬೇಕು" ಎಂದು ವೃತ್ತಿಜೀವನಕ್ಕೆ ಪ್ರಚೋದನೆ ನೀಡಿದರು. ಅದು ಒಂದು ರೀತಿಯಲ್ಲಿ, "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದಂತೆ ಕಾಣಿರೋ" ಎಂದು ಸ್ಪಷ್ಟಪಡಿಸಿದರು. "ಬಂದದ್ದೆಲ್ಲ ಬರಲಿ, ಗೋವಿಂದನ ದಯವಿರಲಿ" ಎಂಬುದು ಅವರ ನಿಲುವಾಗಿತ್ತು. ಈ ನಿಲುವಿನ ಹಿಂದೆ ನೈತಿಕ ಎಚ್ಚರವನ್ನು ಮನೆಮನೆಗೆ ಮುಟ್ಟಿಸುವ ಒಂದು ಸಾಮಾಜಿಕ ಜವಾಬ್ದಾರಿಯಿಂದ ತಮ್ಮ ಇಡೀ

ಬದುಕನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಒಂದು ವ್ಯವಸ್ಥಿತಪಡೆ ಇದಾಗಿತ್ತು. ಒಂದು ರೀತಿಯ ಜನತಾಶಿಕ್ಷಣ ಇದಾಗಿತ್ತು. ಅದಕ್ಕೆ ಯಾರ ಭಿಡೆ, ಮುತುವರ್ಜಿಗಳಿರಲಿಲ್ಲ. ಸರಕಾರ, ಸಂಘಟನೆಗಳಿಲ್ಲದೇ ಸ್ವಇಚ್ಛೆಯಿಂದ ಕನ್ನಡಭಾಷೆ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡಿದರು.

ಕ್ರಿ.ಶ. 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನದೊಂದಿಗೆ ಹರಿಗಡಿದ ದಾಸಸಾಹಿತ್ಯವನ್ನು ಮುಂದುವರಿಸಿದವರು ಬಿಜಾಪುರ ಪರಿಸರದ ಕಾಖಂಡಕಿ ಮಹಿಪತಿರಾಯರು, ಅವರ ಮಗ ಕೃಷ್ಣದಾಸರು ಮತ್ತು ಬಾಗಲಕೋಟೆಯ ಪ್ರಸನ್ನವೆಂಕಟದಾಸರು.

ಮಹೀಪತಿದಾಸರ ಕ್ರಿ.ಶ. 1640-1710 ಹೊತ್ತಿಗೆ ದಕ್ಷಿಣ ಭಾರತದಲ್ಲಿ ಸಂಪೂರ್ಣ ಮುಸ್ಲೀಮರ ಆಡಳಿತವಿತ್ತು. ಅಂತೆಯೇ, ಮಿಶ್ರ ಭಾಷೆಯ ಒಂದು ಕೃತಿಯಲ್ಲಿ, "ಸಮಜೋ ಭಾಯೀ ಸಕುನಾ ಚಾರೋ ಖುದಾಕಾ, ತೆಲುಗು, ಕನ್ನಡ, ತುರುಕಾರೆ ಒಂದೇ ಸುಖ" ಎಂದರು. ಯಾವ ಧರ್ಮ, ಯಾವ ಭಾಷೆ ಆದರೇನು ? ದೇವರು ಕೊಡುವ ಸುಖ ಒಂದೇ ಆಗಿದೆ. ಎಲ್ಲಾ ಒಂದೇ ಮಾತಿನ ಸೊಗಸು ಸಿವನಾಟಾ ಸಿವನಾಟಾ । ಆಪಸಮೆ ಆಪ ಲಢನಾ ಸಬ ಝೂಟಾ ಸಬ ಝೂಟಾ । ಚೆಪ್ಪವಯ್ಯಾ ಎಂದರೆ ಹೇಳುವ ಗುರು ನೀತಾ ಗುರುನೀತಾ । ಆನಂದ ಆಹೆ ತುಜ ಮಹಿಪತಿ ಸುಖ ಮೋತಾ ಎಂದು ಹೇಳಿದರು.

ಮತ್ತೊಂದು ಕೀರ್ತನೆಯಲ್ಲಿ - "ಜಾತಿಯ ಕುಲಗಳ ಭೇದವ ತಿಳಿದು ಯಾತನೆ ದೇಹದ ಸಂಗವನಳಿದು ಮಾತಿನ ಮೂಲವ ತಿಳಿದಾತನೆ ಶರಣನು" ಎಂದರು. ಸತ್ಸಂಗ ಇರಬೇಕು. ಸತ್ಯದ ನುಡಿ ಹಿಡೀಬೇಕು. ಒಂದು ಪಥ ಹೊಂದಲರಿಯರು ಈ ಮನುಜರು ಎಂದು ಕನಿಕರ ಪಟ್ಟಿದ್ದಾರೆ. ಮುಂದುವರಿದು, ಚೇತಿಸಿ ಬ್ಯಾರಿಹ ವಸ್ತು ಕಾಣಿ ಎಂದರು. ಮೂರುವರಿ ಮೊಳ ದೇಹದ ಶುದ್ಧಿ ನಿನಗಿಲ್ಲ, ತರ್ಕಸ್ಯಾಡುವರೆ ಸೊಲ್ಲ. ಚಿತ್ತ ಶುದ್ಧಾಗಿ ಮಹೀಪತಿಯ ಮುಟ್ಟು ಎಂದರು.

ಗುರು ಸದ್ಗುರು ಯಾರೆಂದು ನೋಡೋ, ಗುರುತಿಟ್ಟು ಮನವೆ ಸೇವೆ ಮಾಡೋ ಎಂದ ಮಹೀಪತಿರಾಯರು, ಗುರುಗಳುಂಟು ಮನೆ ಮನೆ ಬಹಳ, ಬ್ಯಾರೆ ಬ್ಯಾರೆ ಮಾಡುತ ತಮ್ಮ ಮ್ಯಾಳ ಎಂದು ಎಚ್ಚರಿಕೆಯನ್ನೂ ನೀಡಿದ್ದಾರೆ. ಇದು ಇಂದಿನ ಸ್ಥಿತಿಯೂ ಹೌದು.

ಯೋಗವೆಂದರೆ ದಾವುದು ಮಾನಿಷಗೆ ? ಎಂದು ಬಾಗಲಕೋಟೆಯ ಪ್ರಸನ್ನವೆಂಕಟ ದಾಸರು ಕೇಳಿದರು. ಮುಂದುವರಿದು ಹಾಸ್ಯವದನೆಯರ ಲೇಶ ಹಾರೈಸದೆ, ದಾಸಾಗಿ ಹರಿಯ ಸದಾಧ್ಯಾಸವೆ ಮಹಾಯೋಗ, ಭೋಗ ಬಯಸದೆ ತಾನಾಗಿ ಬಂದುದನುಂಡು, ಲೋಗರ ಹಣ ಹೆಣ್ಣಿನ ತ್ಯಾಗವೇ ಮಹಾಯೋಗ ಎಂದು ಹೇಳಿದರು. ಅವರು ತಮ್ಮ ಇನ್ನೊಂದು ಕೀರ್ತನೆಯಲ್ಲಿ, ಬಿಡು ಮೂಢತನವ ಚಿತ್ತಷಂಢ ಎನ್ನುತ್ತ, ಬೇಡಿದೀಪ್ಸಿತವವೀವ

ಗೂಢ ಸುರಮಣಿಯು, ಗೂಡಿನೊಳಿರೆ ಅರೆಗೋಡೆಯಾಡದೆ ಬಿಡು, ಅರಸನೊಲಿದು ತಳವಾರನ ಓಲೈಸುವ ಪರಿಯಲಿ ಚಿರಧನಿಪರ ಆರಾಧನೆ ಬಿಡು ಎಂದು ಕಠಿಣ ಶಬ್ದಗಳಲ್ಲಿ ಹೇಳಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸುವುದಾದರೆ .... ವಿಷಯ, ರೂಪ, ಭಾಷೆಗಳಲ್ಲಿ ದಾಸಸಾಹಿತ್ಯ ವಿಶಿಷ್ಟಕಾಂತಿಯುಳ್ಳದ್ದಾಗಿ ಕನ್ನಡಿಗರ ಚಿರಸ್ಥಾಯಿಯಾದ ಸೊತ್ತಾಗಿದೆ. ಜನಕ್ಕೆ ಅದು ಹತ್ತಿರ ಬಂದಂತೆ ಜನವೂ ಅದರ ಹತ್ತಿರ ಹೋಗಿ ಸಂಸ್ಕೃತಿಸಂವರ್ಧನ ಕಾರ್ಯದಲ್ಲಿ ಅದರಿಂದ ಸ್ಫೂರ್ತಿ ಪಡೆಯಬೇಕು.

ದಾಸರ ಕೀರ್ತನೆಗಳಲ್ಲಿ ಬರದೇ ಇದ್ದ ವಿಚಾರಗಳೇ ಇಲ್ಲ. ಧರ್ಮ, ನೀತಿ, ಸಂಸಾರ, ವೇದಾಂತ, ರಾಜಕಾರಣ, ಅರ್ಥನೀತಿ, ಸಾಮಾನ್ಯನೀತಿ, ವಿನೋದ ಎಲ್ಲವೂ ಇದೆ. ಮುಖ್ಯವಾಗಿ ಜೀವನಗಂಗೆಯ ಬೃಹದ್ದರ್ಶನವನ್ನು ಅವರು ತಮ್ಮ ಸಾಹಿತ್ಯದಲ್ಲಿ ಮಾಡಿಸಿದ್ದಾರೆ.

ವಿದ್ಯುನ್ಮಾನದ ಆವಿಷ್ಕಾರದ ನಂತರ ಕಳೆದ 5-6 ದಶಕಗಳಲ್ಲಿ ದಾಸರ ಕೀರ್ತನೆಗಳು ಧ್ವನಿ ಸುರುಳಿ, ಸೀಡಿಗಳ ಮೂಲಕ ಜನಪ್ರಿಯವಾಗಿ ವಿಶ್ವದಾದ್ಯಂತ ಜನಮನ್ನಣೆ ಗಳಿಸಿವೆ. ಈ ದಿಶೆಯಲ್ಲಿ ನಾಡಿನ ಎಲ್ಲ ಗಾಯಕರು ಕನ್ನಡ ಜನರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಜಗತ್ತು ಸತ್ಯ, ಭಗವಂತನೊಬ್ಬನಿದ್ದಾನೆ. ಪ್ರಪಂಚದ ವ್ಯಾಪಾರವೆಲ್ಲವೂ ಅವನ ಅಧೀನದಲ್ಲಿ ನಡೆಯುತ್ತದೆ ಎಂಬ ಶ್ರೀಮಧ್ವಾಚಾರ್ಯರ ತತ್ವದ ಹಿನ್ನೆಲೆಯಲ್ಲಿ ಇಲ್ಲಿದ್ದುಕೊಂಡೇ ಬದುಕನ್ನು ಹಸನಾಗಿ ಇಟ್ಟುಕೊಂಡು, ಪರವನ್ನು ಚಿಂತಿಸಬಹುದು ಎಂದು ದಾಸರು ಮನುಕುಲಕ್ಕೆ ತೋರಿಸಿಕೊಟ್ಟರು. ಅವರವರ ಧರ್ಮದ ಅಸ್ತಿತ್ವವನ್ನು, ಅವರವರ ನಂಬುಗೆಗಳನ್ನು, ಶ್ರದ್ಧೆಯನ್ನು ಉಳಿಸಿ ಜನರ ಮನಸ್ಸನ್ನು ಧರ್ಮದಲ್ಲಿ ನಡೆವಂತೆ ಮಾಡಿದ ಬಹುಪಾಲು ಶ್ರೇಯಸ್ಸು ದಾಸಸಾಹಿತ್ಯಕ್ಕೆ ಸಲ್ಲುತ್ತದೆ. ಈ ದಿಶೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ದಾಸಸಾಹಿತ್ಯವು ಬಹು ಅಮೂಲ್ಯ ಕೊಡುಗೆಯನ್ನು ಕೊಟ್ಟಿದೆ. ★★


**... ಶ್ರೀಸುಧಾ ಚಂದಾದಾರರಿಗೊಂದು ಸೂಚನೆ ...**

**ಮಾನ್ಯರೇ !!! ಈ ನಿಮ್ಮ ಸ್ನೇಹಪೂರ್ವವಾದ ಬಾಂಧವ್ಯವನ್ನು ಮುಂದುವರೆಸಲು ಮನಿಯಾರ್ಡರ್, ಡಿಡಿ, ಪೋಸ್ಟ ಚಾರ್ಜ್ ಯಾವುದನ್ನು ವ್ಯಯಿಸದೇ. ತಮ್ಮ ಚಂದಾ ಅವಧಿ ಮುಗಿಯುವದರೊಳಗೆ ತಮ್ಮ ಚಂದಾವನ್ನು ಆನ್‌ಲೈನ್ ಮೂಲಕ ನವೀಕರಿಸಬಹುದು. ಅಥವಾ Phone Pay, Google Pay, ಮೂಲಕ ಹಣ ಸಂದಾಯ ಮಾಡಿ ತಮ್ಮ ಚಂದಾವನ್ನು ನವೀಕರಿಸಬಹುದು.**

**ನವೀಕರಿಸಿದ ಮೇಲೆ ತಮ್ಮ ಹಣದ ವಿವರವನ್ನು Screen shot ಮಾಡಿ ನಮ್ಮ** 8762629132 **WhatsApp ಗೆ ಕಳುಹಿಸಿದಲ್ಲಿ ನಿಮ್ಮ ಚಂದಾ ನವೀಕರಿಸಲಾಗುವುದು.**

## ಎಲೆಯಲ್ಲಿ ಪದಾರ್ಥಗಳನ್ನು ಹೇಗೆ ಬಡಿಸಬೇಕು ?

ಬಡಿಸುವಾಗಲೂ ಎಲ್ಲಂದರಲ್ಲಿ ಬಡಿಸಬಾರದು. ಅದಕ್ಕೂ ಸ್ಥಾನವನ್ನು ಸ್ಮೃತಿಗಳು ನಿರ್ದೇಶನ ಮಾಡಿವೆ. ಲೌಗಾಕ್ಷಿ, ದಕ್ಷ ಮತ್ತು ವ್ಯಾಸ ಮುಂತಾದ ಅನೇಕ ಸ್ಮೃತಿಗಳಲ್ಲಿ ಬರುವ ಕೆಲವು ವಚನಗಳು ಹೀಗಿವೆ -

**ಭಾರ್ಗವೀ ಸರ್ವಧಾನ್ಯೇಷು ಧನರಾಶಿಷು ತಿಷ್ಠತಿ ।**
**ಸಂತತಂ ಲವಣೇ ಜ್ಯೇಷ್ಠಾ ಸದಾ ವಾಸಂ ಕರೋತಿ ಹಿ ॥**
**ತಸ್ಯ ನಿಕ್ಷೇಪಣಂ ಪಾತ್ರೇ ವಾಮಪಾರ್ಶ್ವೇ ಪ್ರಚೋದಿತಮ್ ॥ ಲೌ.ಸ್ಮೃ**

ಲಕ್ಷ್ಮೀದೇವಿಯು ಎಲ್ಲ ಧಾನ್ಯಗಳಲ್ಲಿ, ಧನದಲ್ಲಿ ನಿವಾಸ ಮಾಡುತ್ತಾಳೆ. ಉಪ್ಪಿನಲ್ಲಿ ಜ್ಯೇಷ್ಠೆಯ ಆವಾಸವಿರುತ್ತದೆ. ಹೀಗಾಗಿ ಅದನ್ನು ಭೋಜನಪಾತ್ರೆಯ ಎಡಭಾಗದಲ್ಲಿಯೇ ಬಡಿಸಬೇಕು. ಹೀಗೆಂದು ಲೌಗಾಕ್ಷಿಸ್ಮೃತಿ ತಿಳಿಸುತ್ತದೆ.

**ದಕ್ಷಿಣೇ ಪರಮಾನ್ನಸ್ಯ ... ... ... ... ... .. . ।**
**ಅನ್ನಸ್ಯ ದಕ್ಷಿಣೇ ಭಾಗೇ ಸೂಪಸ್ಥಾನಂ ಪ್ರಚಕ್ಷತೇ ॥ ಲೌ.ಸ್ಮೃ**
**ಶಾಕಾದಿ ಪುರತಃ ಸ್ಥಾಪ್ಯಂ ಮಧ್ಯೇಽನ್ನಂ ಪರಿವೇಷಯೇತ್ ॥ ದ.ಸ್ಮೃ**

ಪಾಯಸವನ್ನು ಬಲಭಾಗದಲ್ಲಿ ಬಡಿಸಬೇಕು. ಹಾಗೆಯೇ ತೊವ್ವೆಯನ್ನು ಕೂಡಾ ಬಲಭಾಗದಲ್ಲಿಯೇ ಬಡಿಸಬೇಕು. ಪಲ್ಯ, ಚಟ್ನಿ, ಗೊಜ್ಜು ಮುಂತಾದವುಗಳನ್ನು ಎಲೆಯ ಮುಂದಿನಭಾಗದಲ್ಲಿ ಬಡಿಸಬೇಕು. ಅನಂತರ ಮಧ್ಯದಲ್ಲಿ ಅನ್ನವನ್ನು ಬಡಿಸಬೇಕು. ಇದೇ ವಿಷಯವನ್ನು ವ್ಯಾಸಸ್ಮೃತಿಯೂ ತಿಳಿಸುತ್ತದೆ -

**ಅನ್ನಂ ಮಧ್ಯೇ ಪ್ರತಿಷ್ಠಾಪ್ಯ ದಕ್ಷಿಣೇ ಘೃತಪಾಯಸಮ್ ।**
**ಶಾಕಾದಿ ಪುರತಃ ಸ್ಥಾಪ್ಯಂ ಭಕ್ಷ್ಯಂ ಭೋಜ್ಯಂ ಚ ವಾಮತಃ ॥ ವ್ಯಾ.ಸ್ಮೃ**

ಅನ್ನವನ್ನು ಮಧ್ಯಭಾಗದಲ್ಲಿ, ಬಲಭಾಗದಲ್ಲಿ ತುಪ್ಪ ಹಾಗೂ ಪಾಯಸವನ್ನು, ಪಲ್ಯಕಾಯಿ ಮೊದಲಾದವುಗಳನ್ನು ಮುಂದಿನಭಾಗದಲ್ಲಿ, ಭಕ್ಷ್ಯ-ಭೋಜ್ಯಗಳನ್ನು ಎಡಭಾಗದಲ್ಲಿ ಬಡಿಸಬೇಕು. ಇದುವೇ ಬಡಿಸುವ ವಿಧಾನವೆಂದು ಸ್ಮೃತಿಗಳು ತಿಳಿಸುತ್ತವೆ.

### ಪರಸ್ಪರ ಪದಾರ್ಥಗಳು ಹತ್ತುವಂತೆ ಬಡಿಸಬಾರದು

ಕಟುಸತ್ಯವಾದ, ಆಚರಿಸಲು ಸಾಧ್ಯವೂ ಆದ ಕೆಲವು ವಿಷಯಗಳನ್ನು ಲೌಗಾಕ್ಷಿಸ್ಮೃತಿ ತಿಳಿಸುತ್ತದೆ -

**ಶಾಕಾನಾಮಪಿ ಸರ್ವೇಷಾಂ ಪಕ್ವಾನಾಂ ಪರಿವೇಷಣೇ ।**
**ಮಿಥೋ ಯೋಗೋ ಯಥಾ ನ ಸ್ಯಾತ್ತಥಾ ಪಾತ್ರೇ ಪ್ರಸಾಧಯೇತ್ ॥ ಲೌ.ಸ್ಮೃ**

ಬೇಯಿಸಿದ ಶಾಕಗಳನ್ನು ಬಡಿಸುವಾಗ ಒಂದಕ್ಕೊಂದು ಸಂಪರ್ಕವಾಗದಂತೆ ಎಚ್ಚರಿಕೆಯಿಂದ ಬಡಿಸಬೇಕು.

**ಸೂಪಮನ್ನೇನ ಸಂಪೃಕ್ತಂ ಯಃ ಕುರ್ಯಾತ್ಪರಿವೇಷಣಮ್ ।**
**ಸ ಸೂನಃ ಸ್ಯಾದಷ್ಟಜನ್ಮ ತಸ್ಮಾತ್ ತತ್ಪರಿವರ್ಜಯೇತ್ ॥**

ತೊವ್ವೆಯನ್ನು ಬಡಿಸುವಾಗ ಅನ್ನಕ್ಕೆ ಸಂಪರ್ಕವಾಗದಂತೆ ಎಚ್ಚರವಹಿಸಬೇಕು. ಸಂಪರ್ಕವಾಗುವಂತೆ ಬಡಿಸಿದರೆ ಅದು ಅಪರಾಧವೆಂದು ತಿಳಿಯಬೇಕು. ★★

# ಸಂಧ್ಯಾವಂದನೆ - ೮

## ಸಂಕಲ್ಪವೆಂಬ ಕಲ್ಪವೃಕ್ಷ



✍ಡಾ. ರಾಘವೇಂದ್ರಾಚಾರ್ಯ ರಾಚೂರಿ

ಸಂಕಲ್ಪದಲ್ಲಿ ದೇಶ-ಕಾಲಗಳ ಪ್ರಕಲ್ಪಗಳನ್ನು ತಿಳಿದಿದ್ದೇವೆ. ಬನ್ನಿ, ಈ ಅಂಕಣದಲ್ಲಿ "ಶ್ರೀಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ ...." ಈ ಅಂಶದ ಮಹತ್ವವನ್ನರಿಯೋಣ !!

**ವಿಷ್ಣುಪ್ರೀತ್ಯರ್ಥಂ**

ದೇಶ-ಕಾಲಗಳ ಉಚ್ಚಾರಣೆಯ ಹಿಂದೆ ಅವುಗಳ ಬಲ ನಮ್ಮ ಕರ್ಮಗಳಿಗೆ ಸಿಗಲಿ ಎಂಬ ಭಾವನೆ ಅಡಗಿದೆ. ದೇಶ ಕಾಲಗಳ ಬಲವಿದ್ದರೂ ಇಲ್ಲಿ ನಾವು ಬಯಸಿದ್ದೆಲ್ಲ ಸಾಕಾರಗೊಳ್ಳುತ್ತದೆ ಎಂಬ ನಂಬಿಕೆ ಸಲ್ಲ. ಹರಿಚಿತ್ತ ಸತ್ಯ. ನರಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು. ಕುದುರೆ ಆನೆ ಏರಬೇಕು, ಧರಣಿಯನ್ನೇ ಆಳಬೇಕು, ಯಾವ ಉಪದ್ರವವಿಲ್ಲದೇ ಸುಖದಿಂದ ಇರಬೇಕು. ಇದು ನರಚಿತ್ತ. ಪಾದಚಾರಿಯಾಗುವುದು, ಕಡು ದರಿದ್ರನಾಗುವುದು, ರೋಗವೊದಗಿಬರುವುದು ಹರಿಚಿತ್ತ. ನಾವು ಬಯಸಿದ್ದೆಲ್ಲ ಸಾಕಾರವಾಗುವುದು ಕೇವಲ ಮುಕ್ತಿಯಲ್ಲಿ ಮಾತ್ರ. ಅಲ್ಲಿ ಸಂಕಲ್ಪಮಾತ್ರದಿಂದಲೇ ಎಲ್ಲವೂ ಸಿದ್ಧ. ಏತಕ್ಕೆ ? ಜೀವರಾಶಿಗಳ ಇಚ್ಛೆ ಪರಮಾತ್ಮನ ಇಚ್ಛೆಗೆ ಅನುಗುಣವಾಗಿ ಇರುತ್ತದೆ. ಅದಕ್ಕೆ. ಇಲ್ಲಿ ಹಾಗಲ್ಲ. ಪರಮಾತ್ಮನ ಚಿತ್ತವೇ ಬೇರೆ. ನಮ್ಮ ಚಿತ್ತವೇ ಬೇರೆ !!!

ಮೂಲಭೂತವಾಗಿ ಈ ಕರ್ಮಗಳೆಲ್ಲ ಹೇಗೆ ನಡೆಯುತ್ತಿವೆ ? ಶರೀರದಿಂದಲೋ? ಜೀವರಿಂದಲೋ ? ದೇವತೆಗಳಿಂದಲೋ ? ಪ್ರಾಣನಿಂದಲೋ ? ಅಥವಾ ಪರಮಾತ್ಮನಿಂದಲೋ ?

ಶರೀರ ಜಡ. ಏನೂ ಮಾಡಲಾರದು. ಬ್ರಹ್ಮಾದಿ ಚೇತನರಾದರೋ ಅಸ್ವತಂತ್ರರು. ಆದ್ದರಿಂದ ಕರ್ಮಗಳೆಲ್ಲ ನಡೆಯುವುದು ಮೂಲಭೂತವಾಗಿ ಸ್ವತಂತ್ರನಾದ ಭಗವಂತನ ಪ್ರೇರಣೆಯಿಂದ.

ನಮ್ಮ ಇಚ್ಛೆಯು ಸಾಕಾರವಾಗಲು ಮುಖ್ಯ ಉಪಾಯವು ಭಗವಂತನ ಅನುಗ್ರಹ ಸಂಪಾದನೆಯೇ. ಶ್ರೀಹರಿಯ ಪ್ರಸಾದವನ್ನು ಸಂಪಾದಿಸಿದರೆ ನಮ್ಮ ಸಕಲೇಚ್ಛೆಗಳು ಸಿದ್ಧಿಸುವವು. "ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ" ಆದ್ದರಿಂದ, ಕರ್ಮಗಳಿಗೆ ವಿಷ್ಣುಪ್ರೀತಿಯೇ ಮುಖ್ಯ ಉದ್ದೇಶವಾಗಿರಬೇಕು. ಕೇವಲ ಐಹಿಕವಾದ ಫಲಗಳು ಅಲ್ಪ ಅಶಾಶ್ವತ. ಅವುಗಳ ಬೆನ್ನು ಹತ್ತಿ ಹೊರಟರೆ ಕರ್ಮ ಬಂಧಕವಾಗುವುದು. "ವಿಷ್ಣುಪ್ರೀತ್ಯರ್ಥಂ"- ಕೇವಲ ಭಗವಂತನ ಪ್ರೀತಿಗೋಸ್ಕರ ಮಾಡಿದ ಕರ್ಮಗಳು ಶಾಶ್ವತವಾದ ಫಲವನ್ನು ಒದಗಿಸುತ್ತವೆ. ಸಾಧಕನು ವಿಷ್ಣುಪ್ರೀತಿಯನ್ನು ಬಿಟ್ಟು ಇನ್ನಾವ ಇತರ

ಫಲವನ್ನೂ ಅಪೇಕ್ಷೆ ಮಾಡಬಾರದು. ಆದ್ದರಿಂದ, ನನ್ನ ಈ ಕರ್ಮದಿಂದ ಶ್ರೀಹರಿಯು ಪ್ರೀತನಾಗಲಿ ಎಂಬ ಪ್ರಾರ್ಥನೆ ನಮ್ಮ ಸಂಕಲ್ಪದಲ್ಲಿ ಅವಶ್ಯವಾಗಿ ಸೇರಬೇಕು. ಇದೇ ನಮ್ಮ ಕರ್ಮಾನುಷ್ಠಾನದ ಮುಖ್ಯ ಗುರಿ. ಅದಕ್ಕೆ 'ವಿಷ್ಣುಪ್ರೀತ್ಯರ್ಥಮ್'.

**ವಿಷ್ಣುಪ್ರೇರಣಯಾ**

ಈ ಚೇತನಾಚೇತನಾತ್ಮಕವಾದ ಸಮಸ್ತ ಜಗತ್ತಿನ ವ್ಯಾಪಾರ ನಡೆಯುವುದು ಶ್ರೀಮಹಾವಿಷ್ಣುವಿನಿಂದ. ಎಲ್ಲರಲ್ಲಿ ನಿಂತು ಆ ಭಗವಂತನೇ ಕರ್ಮ ನಡೆಸುವನು. ಅವನೇ ಕರ್ಮಕರ್ತೃ. 'ತೇನ ವಿನಾ ತೃಣಮಪಿ ನ ಚಲತಿ' ಅವನ ಪ್ರೇರಣೆ ಇಲ್ಲದ ಹುಲ್ಲುಕಡ್ಡಿಯೂ ಚಲಿಸುವುದಿಲ್ಲ. ಜೀವರಿಗಾಗಲೀ, ಜಡವಸ್ತುಗಳಿಗಾಗಲೀ ಸ್ವತಂತ್ರವಾದ ಕರ್ತೃತ್ವವು ಇಲ್ಲ. ಎಲ್ಲರೂ ತಮ್ಮ ತಮ್ಮ ವ್ಯಾಪಾರಗಳಲ್ಲಿ ಭಗವಂತನ ಅಧೀನರಾಗಿರುತ್ತಾರೆ. "ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ । ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥" ಎನ್ನುತ್ತದೆ ಭಾಗವತ . "ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೇ ತಿಷ್ಠತಃ" ಎಂಬ ಬೃಹದಾರಣ್ಯಕವಚನವೂ, "ಕರ್ಮ ಬ್ರಹ್ಮೋದ್ಭವಂ ವಿದ್ಧಿ" (3.15) ಎಂಬ ಗೀತೆಯ ವಚನವೂ ಈ ವಿಷಯದಲ್ಲಿ ಪ್ರಮಾಣ. ಜೀವನು ಪರಮಾತ್ಮನಿಂದ ಪ್ರೇರಿತನಾಗಿ ಕರ್ಮಗಳನ್ನು ಮಾಡುತ್ತಾನೆ ಹಾಗೂ ಮಾಡಿಸುತ್ತಾನೆ. ಆದರೆ ಸ್ವತಂತ್ರವಾಗಿ ಯಾವುದನ್ನೂ ಮಾಡುವುದಿಲ್ಲ. ಮಾಡಿಸುವುದೂ ಇಲ್ಲ. "ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ" (5.14) ಎಂಬ ಗೀತಾವಚನವು ಇದನ್ನೇ ಹೇಳುತ್ತದೆ. ಜೀವನಿಗೆ ಭಗವಂತನ ಅಧೀನವಾದ ಕರ್ತೃತ್ವವಿದೆ.

ತಾನು ಮಾಡುತ್ತಿರುವಾಗ ನಾನೇನೂ ಮಾಡುತ್ತಿಲ್ಲ ಎಂದು ತಿಳಿಯುವುದಾದರೂ ಹೇಗೆ? ಇದ್ದದ್ದನ್ನು ಇಲ್ಲ ಎಂಬುದಾಗಿ ತಿಳಿದರೆ ಅದು ಭ್ರಾಂತಿಯಾಗುವುದಷ್ಟೆ ? ಎಂಬ ಪ್ರಶ್ನೆ ಬರುವುದು ಸಹಜ. ಆದರೆ ಜ್ಞಾನಿಗಳು ಅತಿ ಸ್ವಲ್ಪವಿರುವುದು ಇಲ್ಲದಿರುವುದಕ್ಕೆ ಸಮ ಎಂಬ ಭಾವನೆಯಿಂದ ಜೀವನಿಗೆ ಕರ್ತೃತ್ವವಿಲ್ಲವೇ ಇಲ್ಲ ಎಂದು ತಿಳಿಯುತ್ತಾರೆ. "ಪೀವೇತಿ ಚಾಸೌ ನ ವಿದಾಂ ಪ್ರವಾದಃ" "ನ ಸೂರಯೋ ಹಿ ವ್ಯವಹಾರಮೇನಂ ತತ್ವಾವಮರ್ಶೇನ ಸಹಾಮನಂತಿ" ಎಂದು ಜಡಭರತರು ರಹೂಗಣಮಹಾರಾಜನಿಗೆ ಉಪದೇಶ ಮಾಡುವಾಗ ಹೇಳಿದ್ದು ಇದನ್ನೇ. ಆದರೆ ಕರ್ಮಾಚರಣೆಯಲ್ಲಿ ತೊಡಗಿದ ಸಾಧಕನಿಗೆ ಅಜ್ಞಾನದ ಆವರಣವಿರುವುದರಿಂದ ನಾನೇ ಮಾಡುತ್ತಿರುವುದು ಎಂಬ ಭ್ರಮೆ ಉಂಟಾಗುತ್ತದೆ. "ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ" ಎಂಬುದು ಕೃಷ್ಣನ ಮಾತು ಗೀತೆಯಲ್ಲಿ. ಇದರಿಂದಲೇ ಜೀವನಿಗೆ ನಾನು, ನನ್ನದು ಎಂಬ ಕರ್ತೃತ್ವಾಭಿಮಾನ. ಅದರಿಂದಲೇ ಸಂಸಾರ. ಕಾರಣ ನಾನು, ನನ್ನದು ಎಂಬ ಈ ಅಭಿಮಾನವನ್ನು ತೊರೆದು ಭಗವಂತನೇ ಕರ್ತಾ ಎಂಬ ಅನುಸಂಧಾನವಿದ್ದಲ್ಲಿ ಕರ್ಮಗಳು ಬಂಧಕವಾಗುವುದಿಲ್ಲ ಎಂಬುದು ಶಾಸ್ತ್ರದ ಖಚಿತವಾದ ನಿಲುವು. ಅದಕ್ಕೆ ಶ್ರೀಮದಾಚಾರ್ಯರು -

**ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಮ್ ।**
**ತಥಾಪಿ ಮತ್ಕೃತಾ ಪೂಜಾ ತತ್ಪ್ರಸಾದೇನ ನಾನ್ಯಥಾ ॥**

**ತದ್ಭಕ್ತಿಃ ತತ್ಫಲಂ ಮಹ್ಯಂ ತತ್ಪ್ರಸಾದಃ ಪುನಃ ಪುನಃ ।**
**ಕರ್ಮನ್ಯಾಸೋ ಹರಾವೇವಂ ವಿಷ್ಣೋಸ್ತೃಪ್ತಿಕರಸ್ಸದಾ ॥**

ಎಂದು ಕರ್ಮಸಮರ್ಪಣೆಯ ರೀತಿಯನ್ನು ಹೇಳಿಕೊಟ್ಟರು. ಈ ವಿಧವಾದ ಕರ್ಮಸಮರ್ಪಣೆಯ ಭಾವವನ್ನು ಕರ್ಮಸನ್ಯಾಸ ಎಂದು ಕರೆಯುವರು. ಭಗವಂತನೇ ನನ್ನಲ್ಲಿ ನಿಂತು ಈ ಕರ್ಮವನ್ನು ನಡೆಸುತ್ತಿದ್ದಾನೆ ಎಂದು ಸ್ಮರಿಸುವುದು ಯೋಗವೆನಿಸುತ್ತದೆ. ಇದರಿಂದ ವಿಶೇಷವಾದ ಲಾಭವಿದೆ. ಮೋಕ್ಷ ಸಿಗಲು ಜ್ಞಾನ ಕಾರಣ. ಜ್ಞಾನವನ್ನು ಪಡೆಯಲು ಶ್ರವಣಾದಿಗಳು ಕಾರಣ. ಶ್ರವಣಾದಿಗಳಿಗೆ ಸಿದ್ಧಿ ಸಿಗಲು ಕರ್ಮಯೋಗದ ಮೂಲಮಂತ್ರ "ನಾಹಂ ಕರ್ತಾ ಹರಿಃ ಕರ್ತಾ" ಎಂಬುದು. ಫಲಕಾಮನೆಯನ್ನು ತೊರೆದು ಭಗವಂತನೇ ಸಕಲಕರ್ಮಕರ್ತಾ, ಕಾರಯಿತಾ ಎಂಬ ಭಾವನೆಯಿಂದ ಕರ್ಮಾಚರಣೆಯನ್ನು ಮಾಡಬೇಕು. ಸಾಧಕರಾದ ಜೀವರು ಸಕಲಕರ್ಮಗಳಲ್ಲಿಯೂ ಕಡ್ಡಾಯವಾಗಿ ಈ ಸಮರ್ಪಣೆಯ ಭಾವವನ್ನು ಹೊಂದಿರಬೇಕು. ಇಂತಹ ಸಮರ್ಪಣೆಯಿಂದ ಭಗವಂತನಿಗೆ ಅತ್ಯಂತ ಪ್ರೀತಿಯಾಗುವುದು. ಅದಕ್ಕೆ "ವಿಷ್ಣುಪ್ರೇರಣಯಾ ..."

**ಭಾರತೀರಮಣಮುಖ್ಯಪ್ರಾಣಾಂತರ್ಗತ**

ಭಗವಂತನ ಉಪಾಸನೆಯನ್ನು ಮಾಡಬೇಕು ಎಂದು ಶಾಸ್ತ್ರಗಳು ಹೇಳುತ್ತಿವೆ. ಆದರೆ ಸರ್ವತ್ರ ವ್ಯಾಪ್ತನಾಗಿದ್ದ ಭಗವಂತನ ಉಪಾಸನೆಯನ್ನು ಯಾವ ಅಧಿಷ್ಠಾನದಲ್ಲಿ ಮಾಡಬೇಕು ಎಂದರೆ, ಅವನನ್ನು ಉಪಾಸನೆ ಮಾಡುವ ಅಧಿಕಾರಿಗಳು ಮೂರು ವಿಧರಾಗಿದ್ದಾರೆ -

1. ವ್ಯಾಪ್ತೋಪಾಸಕರು (ದೇವತೆಗಳು) - ಸರ್ವತ್ರ ವ್ಯಾಪ್ತವಾದ ಭಗವಂತನ ರೂಪವನ್ನು ಚಿಂತಿಸುತ್ತಾ ಉಪಾಸನೆಯನ್ನು ಮಾಡುವರು. ಇವರು ಉತ್ತಮರು. ಮಹಾಜ್ಞಾನಿಗಳಾದ ದೇವತೆಗಳಿಗೆ ಮಾತ್ರ ಇಂಥಹ ಉಪಾಸನೆಯನ್ನು ಮಾಡುವ ಯೋಗ್ಯತೆ ಇರುತ್ತದೆ.
2. ಹೃದಯದಲ್ಲಿ ಉಪಾಸನೆ ಮಾಡುವವರು (ಋಷಿಗಳು) - ಕೆಲವು ಸಾಧಕರು ತಮ್ಮ ಹೃದಯಗುಹೆಯಲ್ಲಿರುವ ಭಗವಂತನ ಉಪಾಸನೆಗೈಯುವರು. ಇವರು ಮಧ್ಯಮರು. ಜ್ಞಾನಿಗಳಾದ ಮಹರ್ಷಿಗಳು ಈ ವಿಭಾಗಕ್ಕೆ ಸೇರುವರು.
3. ಪ್ರತಿಮಾದಿಗಳಲ್ಲಿ ಉಪಾಸನೆ ಮಾಡುವವರು (ಮನುಷ್ಯೋತ್ತಮರು) - ಅಗ್ನಿ, ವಿಗ್ರಹ ಮೊದಲಾದ ಪ್ರತಿಮೆಗಳಲ್ಲಿ ಭಗವಂತನ ಉಪಾಸನೆ ಮಾಡುವವರು. ಇವರು ಅಧಮಾಧಿಕಾರಿಗಳು.

ಹೀಗೆ ಅಧಿಕಾರಭೇದದಿಂದ ಭಗವಂತನ ಉಪಾಸನೆಯು ಮೂರುವಿಧವಾಗಿದೆ.

**ಅಗ್ನೌ ಕ್ರಿಯಾವತಾಂ ವಿಷ್ಣುಃ ಯೋಗಿನಾಂ ಹೃದಯೇ ಹರಿಃ ।**
**ಪ್ರತಿಮಾಸ್ವಪ್ರಬುದ್ಧಾನಾಂ ಸರ್ವತ್ರ ವಿದಿತಾತ್ಮನಾಮ್ ॥**

ಯಾಗಾದಿಕರ್ಮಗಳಲ್ಲಿ ತೊಡಗುವವರು ಅಗ್ನಿಯಲ್ಲಿ, ಯೋಗಿಗಳು ಹೃದಯದಲ್ಲಿ, ಅಪ್ರಬುದ್ಧರು ಪ್ರತಿಮೆಗಳಲ್ಲಿ, ಜ್ಞಾನಿಗಳು ಎಲ್ಲೆಡೆ ಭಗವಂತನ ಉಪಾಸನೆ ಮಾಡುವರು ಎಂಬುದಾಗಿ ಸೂತ್ರಭಾಷ್ಯದಲ್ಲಿ ಹೇಳಿದೆ.

**ಸರ್ವದೇವೋತ್ತಮೋ ವಾಯುಃ ಇತಿ ಜ್ಞಾನಾನ್ನ ಚಾಪರಮ್ ।**
**ಪ್ರಿಯಮಸ್ತಿ ಹರೇಃ ಕಿಂಚಿತ್ ತಥಾ ವಾಯೋಃ ಹರೇರ್ವಿದಃ ॥ - ಛಾಂದೋಗ್ಯ ಭಾಷ್ಯ**

ಈ ಎಲ್ಲ ಪ್ರತಿಮೆಗಳಲ್ಲಿ ವಾಯುದೇವರು ಭಗವಂತನ ಮುಖ್ಯಪ್ರತಿಮೆ. ಆದ್ದರಿಂದ "ವಾಯೌ ಮುಖ್ಯಧಿಯಾ" ವಾಯುದೇವರೇ ಸರ್ವದೇವೋತ್ತಮರು ಎಂಬ ಜ್ಞಾನದಿಂದ ಅವರಲ್ಲಿ ಅಂತರ್ಯಾಮಿಯಾದ ಭಗವಂತನನ್ನು ವಾಯುದೇವರಗಿಂತಲೂ ಉತ್ತಮನು ಎಂದು ಉಪಾಸನೆ ಮಾಡಿದರೆ ಅದರಿಂದ ಭಗವಂತನಿಗೆ ಅತ್ಯಂತ ಪ್ರೀತಿ ಉಂಟಾಗುವುದು. ಇದಕ್ಕಿಂತ ಭಗವಂತನಿಗೆ ಪ್ರಿಯವಾದದ್ದು ಇನ್ನೊಂದು ಇರಲಾರದು. ಹರಿಸರ್ವೋತ್ತಮತ್ತ್ವ-ವನ್ನು ತಿಳಿದವರಿಗಿಂತ ಪ್ರಿಯರು ವಾಯುದೇವರಿಗೆ ಇನ್ಯಾರೂ ಇರಲಾರರು. ಹೀಗೆ ಉಪಾಸನೆಗೊಂಡ ಭಗವಂತನು ಅತಿಪ್ರಸನ್ನನಾಗಿ ಉತ್ತಮವಾದ ಫಲವನ್ನು ನೀಡುವನು - "ವಿಷ್ಣೋರ್ವಿಶಿಷ್ಟಪ್ರತಿಮಾ ವಾಯುರೇವ । ಅತಃ ತಸ್ಮಿನ್ ತತೋಪ್ಯುತ್ತಮತ್ವೇನೋಪಾಸಿತ ಏವ ಭಗವಾನ್ ಸಮ್ಯಕ್ ಫಲಂ ದದಾತಿ ॥" (ಛಾಂದೋಗ್ಯಭಾಷ್ಯ)

**ವಾಯುದೇವರು ಆಖಣಾಶ್ಮಸಮರು**

ಒಮ್ಮೆ ದೇವಾಸುರಯುದ್ಧವು ನಡೆಯಿತು. ಅಸುರರ ಸಂಖ್ಯೆ ಬಹಳವಾದ ಕಾರಣ ದೇವತೆಗಳು ಸೋಲನ್ನಪ್ಪಿದರು. ಆಗ ದೇವತೆಗಳು ಭಗವಂತನನ್ನು ಉಪಾಸನೆ ಮಾಡಿ, ಅವನ ಪ್ರಸಾದದಿಂದ ಬಲವನ್ನು ಹೊಂದಿ, ಅಸುರರನ್ನು ಗೆಲ್ಲಲು ಬಯಸಿದರು. ವಾಯುದೇವರೇ ಸರ್ವದೇವೋತ್ತಮರು. ಭಗವಂತನ ಉಪಾಸನೆಗೆ ಅವರೇ ಮುಖ್ಯ ಪ್ರತಿಮೆ ಎಂದು ದೇವತೆಗಳಿಗೆ ತಿಳಿದೇ ಇತ್ತು. ಆದರೂ ಜಗತ್ತಿಗೆ ತಿಳಿಸಲು ಮೊದಲಿಗೆ ಇತರದೇವತೆಗಳಲ್ಲಿ ಉಪಾಸನೆಗೈದರು. ನಾಸಿಕ್ಯವಾಯುವಿನಲ್ಲಿ ಉಪಾಸನೆ ಮಾಡುತ್ತಿರಲು ಆ ನಾಸಿಕ್ಯವಾಯುವನ್ನು ಅಸುರರು ಪಾಪದಿಂದ ಭೇಧಿಸಿದರು. ನಾಸಿಕ್ಯವಾಯುವು ಪಾಪವಿದ್ಧವಾಯಿತು. ಕಾರಣ ನಾಸಿಕೆಯು ಸುಗಂಧ, ದುರ್ಗಂಧ ಎರಡನ್ನು ಆಘ್ರಾಣಿಸಿತು. ಹೀಗೆ ಕ್ರಮವಾಗಿ ವಾಕ್, ಚಕ್ಷು, ಶ್ರೋತ್ರ, ಮನಸ್ಸು ಇವೇ ಮೊದಲಾದ ಅಧಿಷ್ಠಾನಗಳಲ್ಲಿಯೂ ಅಸುರಾವೇಶವಾಯಿತು. ಕೊನೆಗೆ ಮುಖ್ಯಪ್ರಾಣನನ್ನು ಪ್ರತಿಮೆಯನ್ನಾಗಿ ಮಾಡಿ ಅವರ ಅಂತರ್ಯಾಮಿಯಾದ ಭಗವಂತನ ಉಪಾಸನೆ ಮಾಡಲು ದೈತ್ಯರು ದಾಳಿ ಮಾಡಿದರು. ಆದರೆ ಅವರು ಕಲ್ಲಿಗೆ ಘಟ್ಟಿಸಿದ ಮಣ್ಣಿನ ಹೆಂಟೆಯಂತೆ ಪುಡಿ ಪುಡಿಯಾದರು. ಹೀಗೆ ಯಾರು ವಾಯುದೇವರನ್ನು ಅಸುರಕೃತಪಾಪಾವಿದ್ಧರು ಎಂದು, ಆಖಣಾಶ್ಮಸಮರು

ಎಂದು ತಿಳಿದು, ಭಗವಂತನ ಮುಖ್ಯಪ್ರತಿಮೆಯೆಂದು ಉಪಾಸನೆಗೈಯುವರೋ ಅಂತಹ ಉಪಾಸಕರಿಗೆ ಹಾನಿ ಮಾಡಲು ಹೊರಟವರು ತಾವೇ ಧ್ವಂಸಗೊಳ್ಳುವರು. ಹೀಗೆ ಮುಖ್ಯಪ್ರಾಣದೇವರ ಉಪಾಸನೆಯಿಂದ ಪಾಪಸಂಬಂಧ, ಅಸುರಾವೇಶಗಳು ದೂರವಾಗುವುದರಿಂದ ವಾಯುವಿನಲ್ಲೇ ಉಪಾಸನೆಯನ್ನು ಮಾಡುವುದು ಕಡ್ಡಾಯ. ಅದಕ್ಕೆ ಸಂಕಲ್ಪವನ್ನು ಮಾಡುವಾಗ "ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ..."

ಹೀಗೆ "ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ (ಪ್ರಾತಃ/ಮಾಧ್ಯಾಹ್ನಿಕ/ಸಾಯಂ) ಸಂಧ್ಯಾವಂದನಾಖ್ಯಂ ಕರ್ಮ ಕರಿಷ್ಯೇ" ಎಂದು ಸಂಕಲ್ಪಿಸಿ ಸಂಧ್ಯಾವಂದನವನ್ನು ನೆರವೇರಿಸಬೇಕು.

ಇದೇರೀತಿ ಎಲ್ಲ ನಿತ್ಯ-ನೈಮಿತ್ತಿಕ ಕರ್ಮಗಳಲ್ಲಿಯೂ ಶ್ರದ್ಧಾತಿಶಯದಿಂದ ಸಂಕಲ್ಪ ಮಾಡಿ ಅನುಷ್ಠಾನವನ್ನು ನಡೆಸಬೇಕು. ಹಾಗೆ ನಡೆಸಿದರೆ ನಾವು ಮಾಡಿದ ಉಪಾಸನೆ ವಾಯುದೇವರ ದ್ವಾರಾ ಭಗವಂತನಿಗೇ ಸೇರುವುದು. ಹೀಗೆ ಮಾಡುವುದು ಭಗವಂತನಿಗೆ ಅತ್ಯಂತ ಪ್ರಿಯಕರವು. ಪ್ರಸನ್ನನಾದ ಆ ಭಗವಂತನು ನಮಗೆ ಸಕಲೇಷ್ಟಗಳನ್ನು ದಯಪಾಲಿಸುವನು. ಆದ್ದರಿಂದ ಸತ್ಸಂಪ್ರದಾಯಪ್ರಾಪ್ತವಾದ, ನಮ್ಮ ಇಷ್ಟಾರ್ಥಸಿದ್ಧಿಗೆ ಕಲ್ಪವೃಕ್ಷದಂತೆ ಇರುವ ಈ ಸಂಕಲ್ಪವನ್ನು ನಾವೆಲ್ಲರೂ ಹೀಗೆ ಪ್ರತಿನಿತ್ಯ ಆಚರಿಸಿ ಧನ್ಯರಾಗೋಣ !!!

...ಸಶೇಷ...

## ಧರ್ಮ ಎಂದರೆ ಏನು?

ಧರ್ಮ ಯಾವುದು ಎಂಬುದನ್ನು ತಿಳಿಸುವ ಅನೇಕ ವಚನಗಳು ಪುರಾಣಗಳಲ್ಲಿ ಇವೆ. ಪ್ರಕೃತ ಮತ್ಸ್ಯಪುರಾಣದ ಈ ವಚನವನ್ನು ಗಮನಿಸಬೇಕು-

**ತತ್ರೇಷ್ಟಪ್ರಾಪಕೋ ಧರ್ಮ ಆಚಾರ್ಯೈರುಪದಿಶ್ಯತೇ ।**
**ಅಧರ್ಮಶ್ಚಾನಿಷ್ಟಫಲ ಆಚಾರ್ಯೈಃ ನೋಪದಿಶ್ಯತೇ ॥ ಮ.ಪು**

''ಈ ಕರ್ಮ ನಿನ್ನ ಅಭೀಷ್ಟವನ್ನು ಪೂರೈಸುತ್ತದೆ.'' ''ಶಂಕೆ ಇಲ್ಲದೇ ಇದನ್ನಾಚರಿಸಬೇಕು'' ಎಂದು ಗುಣವಂತರಾದ ಆಚಾರ್ಯರು ಯಾವುದನ್ನು ಉಪದೇಶಿಸುವರೋ ಅದುವೇ ಧರ್ಮ. ಅಧರ್ಮ ಎಲ್ಲ ಅನಿಷ್ಟಗಳ ಜನ್ಮಭೂಮಿ. ಅದನ್ನು ಮಾಡು ಎಂದು ಆಚಾರ್ಯರು ಎಂದಿಗೂ ಉಪದೇಶ ಮಾಡುವುದಿಲ್ಲ.

ಒಟ್ಟಾರೆ ಇಷ್ಟಪ್ರಾಪಕವಾದದ್ದು ಧರ್ಮ. ಅನಿಷ್ಟಪ್ರಾಪಕವಾದದ್ದು ಅಧರ್ಮ.

# ಶ್ರೀಮನ್ ಮಧ್ವಾಚಾರ್ಯರ ಕಾಲನಿರ್ಣಯ - ೫

✍ ಶ್ರೀ ಆನಂದತೀರ್ಥ ವಡವಿ

ಆಚಾರ್ಯರ ಅದೃಶ್ಯಕಾಲ ತಿಳಿಯಲು ಶ್ರೀನರಹರಿತೀರ್ಥರ ನಿರವಕಾಶ ಶಾಸನ ಪ್ರಮಾಣಗಳು :-

ಆಚಾರ್ಯರ ಕಾಲನಿರ್ಣಯವನ್ನು ಕ್ರಿ.ಶ.1199 ರಿಂದ ಕ್ರಿ.ಶ. 1278 ಎಂದಿಟ್ಟುಕೊಂಡು, ಆಚಾರ್ಯರು ಬದರಿಕಾಶ್ರಮಕ್ಕೆ ಕೊನೆಯಬಾರಿ ಪ್ರಯಾಣಿಸಿದ ನಂತರದಲ್ಲಿ ಶ್ರೀನರಹರಿತೀರ್ಥರು ಕಲಿಂಗದಲ್ಲಿ ಹನ್ನೆರಡು ವರ್ಷಗಳ ರಾಜಪ್ರತಿನಿಧಿತ್ವದ ಕರ್ತವ್ಯ ಮಾಡಿದರು (ಕ್ರಿ.ಶ.1281 ರಿಂದ ಕ್ರಿ.ಶ.1293) ಮತ್ತು ತತ್ಸಂಬಂಧಿ ಶಾಸನಗಳನ್ನು ಹೊರಡಿಸಿದರೆಂದೇಕೆ ತಿಳಿಯಬಾರದೆನ್ನುವ ಸಹಜ ಪ್ರಶ್ನೆಯು ವಿಮರ್ಶಕರಿಗೆ ಮತ್ತು ಓದುಗರಿಗೆ ಎದುರಾಗುವುದು ಸ್ವಾಭಾವಿಕ.

ಆಚಾರ್ಯರ ಕಾಲನಿರ್ಣಯವನ್ನು ಕ್ರಿ.ಶ.1199 ರಿಂದ ಕ್ರಿ.ಶ.1278 ಎಂದು ಪ್ರತಿಪಾದಿಸುವ ಅಥವಾ ಅದಕ್ಕೆ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಸೇರಿಸಿ ಮುಂದುವರೆಸುವ ವಿಚಾರಸರಣಿಗಳಿರುವುದರಿಂದ ಈ ವಿಷಯವನ್ನು ಇಲ್ಲಿ ಚರ್ಚಿಸಲಾಗಿದೆ.

ಮೇಲ್ಕಾಣಿಸಿದ ಪ್ರಶ್ನೆಗೆ ಉತ್ತರವೆಂದರೆ - ಆಚಾರ್ಯರ ದೃಶ್ಯಮಾನ ಅವಧಿಯಲ್ಲಿಯೇ, ಅವರ ಆದೇಶಾನುಸಾರವಾಗಿ ಅವರ ಸಾಕ್ಷಾತ್ ಶಿಷ್ಯರಾದ ಶ್ರೀನರಹರಿತೀರ್ಥರು ಕಲಿಂಗದಲ್ಲಿ ರಾಜಪ್ರತಿನಿಧಿತ್ವವನ್ನು ಮಾಡುತ್ತಿದ್ದ ಕಾಲದಲ್ಲಿ - ತತ್ಸಂಬಂಧಿ ಘಟನಾ ಸಂದರ್ಭಗಳಲ್ಲಿಯೇ, ಸಕಾಲಿಕವಾಗಿ ಶಾಸನಗಳನ್ನು ಹೊರಡಿಸಿದರೆಂದು ಖಚಿತವಾಗಿ ಪ್ರತಿಪಾದಿಸುವ ಸುಪ್ರಸಿದ್ಧ ವಿದ್ವಾಂಸರುಗಳಾದ ಶ್ರೀಹೆಚ್.ಕೃಷ್ಣಶಾಸ್ತ್ರಿಗಳಿಗಾಗಲೀ ಅಥವಾ ಶ್ರೀಪದ್ಮನಾಭಾಚಾರ್ಯರಿಗಾಗಲೀ ಅಥವಾ ಉಡುಪಿಯಲ್ಲಿನ ಕ್ರಿ.ಶ.1908ರ ಚರ್ಚೆಯಲ್ಲಿ ಭಾಗವಹಿಸಿದ್ದ ಪಂಡಿತರುಗಳಿಗಾಗಲೀ ಅಥವಾ ನಂತರದ ದಿನಗಳಲ್ಲಿ ಆಚಾರ್ಯರ ಕಾಲನಿರ್ಣಯ ಕುರಿತು ಅಥವಾ ಶ್ರೀನರಹರಿತೀರ್ಥರ ಕಲಿಂಗದಲ್ಲಿನ ರಾಜಪ್ರತಿನಿಧಿತ್ವದ ಅವಧಿಯ ಕುರಿತು ಲೇಖನಗಳನ್ನು ಪ್ರಕಟಿಸಿದ ಸುಪ್ರಸಿದ್ಧ ಇತಿಹಾಸ ಪಂಡಿತರುಗಳಾದ ಡಾ|| ಭಂಡಾರಕರ್‌ರವರುಗಳಿಗಾಗಲೀ, ಶ್ರೀ ಆರ್.ಸುಬ್ಬರಾವ್‌ರವರಿಗಾಗಲೀ, ಶ್ರೀಮಧ್ವರಾಜ ಶಿಂಪ್ರೆರವರಿಗೆ ಆಗಲೀ, ಡಾ.ಬಿ.ಎನ್.ಕೆ. ಶರ್ಮರವರಿಗಾಗಲೀ, ಪ್ರೊ. ಶರತ್ ಚಂದ್ರ ಬೆಹ್ರಾರವರಿಗಾಗಲೀ, ಕ್ರಿ.ಶ.1977ರ ಅಖಿಲಭಾರತ ಇತಿಹಾಸ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪಂಡಿತರುಗಳಿಗಾಗಲೀ ಅಥವಾ ಸಮ್ಮೇಳನದ ಅಧ್ಯಕ್ಷರಾಗಿದ್ದ ಪ್ರೊ. ಸತೀಷ್‌ಚಂದ್ರರವರಿಗಾಗಲೀ, ಪ್ರೊ.ಕೃಷ್ಣಚಂದ್ರ ಪಾಣಿಗ್ರಹಯವರಿಗಾಗಲೀ ಅಥವಾ ಇತ್ತೀಚೆಗೆ ಎಂದರೆ ಕ್ರಿ.ಶ.2011ರ ಜುಲೈನಲ್ಲಿ ಒರಿಸ್ಸಾ ರಾಜ್ಯಸರ್ಕಾರದ

ಮಾಸಪತ್ರಿಕೆ ಹೊರಡಿಸಿದವರಿಗಾಗಲೀ ಮೇಲ್ಕಾಣಿಸಿದ ಪ್ರಶ್ನೆ ಎದುರಾಗಿರಬೇಕಲ್ಲವೆ ? ಇವರಲ್ಲಿ ಅನೇಕರು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯಮಟ್ಟದ ಪ್ರಾಚ್ಯವಸ್ತು ಹಾಗೂ ಇತಿಹಾಸತಜ್ಞರಿರುವುದು ಮತ್ತು ಸಂಸ್ಕೃತದಲ್ಲಿ ಪ್ರೌಢ ಪಂಡಿತರಿರುವುದು ವಿಶೇಷ.

ಶ್ರೀಮದಾನಂದತೀರ್ಥರ ಸಾಕ್ಷಾತ್ ಶಿಷ್ಯರಾಗಿದ್ದ ಶ್ರೀನರಹರಿತೀರ್ಥರು ಗುರುಗಳ ಆದೇಶದ ಮೇರೆಗೆ ಕಲಿಂಗದಲ್ಲಿ ೧೨ವರ್ಷಗಳ ಕಾಲ ರಾಜಪ್ರತಿನಿಧಿತ್ವ ನಡೆಸಿ ನಂತರದಲ್ಲಿ ತಾವೇ ಪಟ್ಟಕಟ್ಟಿದ ರಾಜ ೨ನೇ ನರಸಿಂಹನಿಂದ ಶ್ರೀಮೂಲಸೀತಾರಾಮದೇವರ ಪೆಟ್ಟಿಗೆಯನ್ನು ಕಾಣಿಕೆಯಾಗಿ ಪಡೆದು ತಂದು ಶ್ರೀಮದಾಚಾರ್ಯರಿಗೆ ಒಪ್ಪಿಸಿದರೆಂದು ಕ್ರಿ.ಶ. 1977 ರಲ್ಲಿ ಭುವನೇಶ್ವರದಲ್ಲಿ ನಡೆದ ಅಖಿಲಭಾರತ ಇತಿಹಾಸ ಸಮ್ಮೇಳನದಲ್ಲಿ ಪ್ರೊ.ಶರತ್‌ಚಂದ್ರ ಬೆಹ್ರಾ ಅವರು ಶಾಸನೀಯ ಹಾಗೂ ಮಾಧ್ವಸಾಹಿತ್ಯಗಳ ಆಧಾರದಮೇಲೆ ಪ್ರತಿಪಾದಿಸಿದ್ದನ್ನು ಸ್ವತಃ ಸಮ್ಮೇಳಾನಾಧ್ಯಕ್ಷರಾಗಿದ್ದ ಪ್ರೊ.ಸತೀಶಚಂದ್ರ ಅವರು ಅನುಮೋದಿಸಿರುವುದು ಇಲ್ಲಿ ಉಲ್ಲೇಖನೀಯವಾಗಿದ್ದು, ಆಚಾರ್ಯರ ಕಾಲನಿರ್ಣಯವು ಕ್ರಿ.ಶ. 1199 ರಿಂದ 1278 ಎಂದಾಗಲೀ ಅಥವಾ ಅದಕ್ಕೆ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಸೇರಿಸಿ ಮುಂದುವರೆಸುವ ವಿಚಾರಸರಣಿಗಳಿಗೆ ಪ್ರತಿಬಂಧಕವೇ ಆಗಿದೆ. (ವಿವರಗಳಿಗೆ - ಶ್ರೀನರಹರಿತೀರ್ಥರ ಕಲಿಂಗದಲ್ಲಿನ ರಾಜಪ್ರತಿನಿಧಿತ್ವದ ಅವಧಿ ಕ್ರಿ.ಶ.1281- ಕ್ರಿ.ಶ.1293 ಎನ್ನುವ ಲೇಖನ ನೋಡುವುದು.)

ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ವಿಮರ್ಶಿಸಿದಾಗ ಕೆಳಗಿನ ಅಂಶಗಳು ತಿಳಿಯುತ್ತವೆ.

ಅ) ಇತಿಹಾಸದ ಘಟಾನಾವಳಿಗಳಿಗೆ ಅತ್ಯಂತ ಸಮಕಾಲೀನವಲ್ಲದಿದ್ದರೂ ಪರಂಪರಾಗತವಾಗಿ ತಲೆಮಾರುಗಳಿಂದ ಬಂದ ಗ್ರಂಥಗಳು ಮತ್ತು ಐತಿಹ್ಯಗಳಲ್ಲಿನ ಘಟನಾವಳಿಗಳು ಒಂದುವೇಳೆ ಇತ್ತೀಚೆಗೆ ಕಂಡುಹಿಡಿಯಲ್ಪಟ್ಟ ನೈಜಶಾಸನಗಳಿಗೆ ತಾಳೆಯಾಗುವುದಿದ್ದಲ್ಲಿ ಅಂತಹ ಗ್ರಂಥಗಳು ಮತ್ತು ಐತಿಹ್ಯಗಳಲ್ಲಿನ ಘಟನಾವಳಿಗಳು ಸರಿಯಾದ ಇತಹಾಸವನ್ನು ತಿಳಿಸಿಕೊಡುತ್ತವೆ ಎನ್ನುವುದು ಇಲ್ಲಿನ ತರ್ಕ. ಮುಂದಿನ ಸಂಚಿಕೆಗಳಲ್ಲಿ ಈ ತರ್ಕದ ಪ್ರಾಮಾಣ್ಯವನ್ನು ಒರೆಗಲ್ಲಿಗೆ ಹಚ್ಚಲಾಗಿದೆ.

ಆ) ಇನ್ನು ಕ್ರಿ.ಶ.1896ರಲ್ಲಿ ಪತ್ತೆ ಹಚ್ಚಲ್ಪಟ್ಟ ಶ್ರೀನರಹರಿತೀರ್ಥರ ಶಾಸನಗಳು ಪ್ರಾಮಾಣಿಕವಾದವುಗಳು ಮತ್ತು ನೈಜವಾದವುಗಳೆಂದು ಹಾಗೂ ಇವುಗಳಿಂದ ಅವರು ಆಚಾರ್ಯರ ಸಾಕ್ಷಾತ್ ಶಿಷ್ಯರೆಂದು ತಿಳಿಯುತ್ತದೆ ಎಂದು ಎಲ್ಲ ಇತಿಹಾಸಕಾರರು ತದೇಕಕಂಠದಿಂದ ಒಪ್ಪಿದ್ದಾರೆ.

ಇ) ಹೀಗಾಗಿ ಇತಿಹಾಸಶಾಸ್ತ್ರಜ್ಞರ ಈ ತರ್ಕವನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸಲಾಗಿ - ಆಚಾರ್ಯರ ಆದೇಶದಮೇರೆಗೆ ಅವರ ದೃಶ್ಯಮಾನ ಅವಧಿಯಲ್ಲಿಯೇ ಕಲಿಂಗದಲ್ಲಿ

ರಾಜಪ್ರತಿನಿಧಿತ್ವದ ಕರ್ತವ್ಯ ಮುಗಿಸಿ, ಶ್ರೀಮೂಲಸೀತಾರಾಮದೇವರುಗಳನ್ನು ಶ್ರೀನರಹರಿತೀರ್ಥರು ತಾವೇ ಪಟ್ಟಕಟ್ಟಿದ ರಾಜನಿಂದ ಕಾಣಿಕೆಯಾಗಿ ಪಡೆದು ತಮ್ಮ ಗುರುಗಳಾದ ಶ್ರೀ ಆನಂದತೀರ್ಥರಿಗೆ ಒಪ್ಪಿಸಿದರೆನ್ನುವ ಸಾಹಿತ್ಯವನ್ನು ಶತ-ಶತಮಾನಗಳಿಂದ ಸಂರಕ್ಷಿಸಲ್ಪಟ್ಟಿರುವ ಐತಿಹ್ಯಗಳು, ಶ್ರೀನರಹರಿಯತಿಸ್ತೋತ್ರ, ಶ್ರೀರಾಘವೇಂದ್ರವಿಜಯ, ಶ್ರೀಸತ್ಯನಿಧಿವಿಲಾಸ, ಶ್ರೀಸತ್ಯಬೋಧವಿಜಯ ಮುಂತಾದ ಮಾಧ್ವಯತಿಗಳ ವಿಜಯಕಾವ್ಯಗಳಲ್ಲಿ ಸಂಗ್ರಹಿಸಿಟ್ಟುಕೊಂಡಿರುವ ಘಟನಾವಳಿಗಳು ಮತ್ತು ಅನುಕ್ರಮಣಿಕೆಗಳು, ಇತ್ತೀಚಿಗೆ ಎಂದರೆ ಕ್ರಿ.ಶ.1896ರಲ್ಲಿ ಪತ್ತೆಹಚ್ಚಲ್ಪಟ್ಟ ಶ್ರೀನರಹರಿತೀರ್ಥರ ಶಾಸನಗಳ ಒಕ್ಕಣೆಗಳನ್ನು ಪ್ರತಿಫಲಿಸುತ್ತವೆಯಾದ್ದರಿಂದ ಈ ಗ್ರಂಥಗಳಲ್ಲಿನ ಹಾಗೂ ಐತಿಹ್ಯಗಳಲ್ಲಿನ ತತ್ಸಂಬಧಿ ಘಟನಾವಳಿಗಳು ನೈಜವಾಗಿರುವವುಗಳೆಂದು ಪ್ರಾಚ್ಯವಸ್ತು ಮತ್ತು ಇತಿಹಾಸದ ಘಟಾನುಘಟಿ ವಿದ್ವಾಂಸರುಗಳು ಒಪ್ಪಿರುವರು.

ಆದರೆ ಆಚಾರ್ಯರ ದೃಶ್ಯಮಾನ ಅವಧಿಯಲ್ಲಿಯೇ ಶ್ರೀನರಹರಿತೀರ್ಥರು ಕಲಿಂಗದಲ್ಲಿ ರಾಜಪ್ರತಿನಿಧಿತ್ವ ನಡೆಸಿದರು ಎಂದು ಪ್ರತಿಪಾದಿಸುವ ಬಹುತೇಕ ವಿದ್ವಾಂಸರುಗಳು ಆಚಾರ್ಯರ ಮ.ಭಾ.ತಾ.ನಿರ್ಣಯದ ನಿರವಕಾಶವಾಗಿ ಕಲಿಗತವರ್ಷ ನಿರ್ದೇಶಿತ 131/32 ಶ್ಲೋಕಕ್ಕೆ (ಅವತಾರವರ್ಷ ಕ್ರಿ.ಶ.1199) ಸಾವಕಾಶತ್ವವನ್ನು ಕಲ್ಪಿಸಿ, ಅವರ ಅವತಾರವನ್ನು ವಿಳಂಬಿಸುತ್ತಾರೆ. ಹೀಗಾಗಿ, ಆಚಾರ್ಯರಿಗೆ ವಿಳಂಬಿತವಾಗಿ ಕೊಡಮಾಡುವ ಈ ಕಾಲನಿರ್ಣಯಗಳು (ಪ್ರಮುಖ ವಿಚಾರ ಸರಣಿ - ಆಚಾರ್ಯರ ಕಾಲನಿರ್ಣಯ ಕ್ರಿ.ಶ. 1238-1317) ಪ್ರಶಸ್ತವಾಗುವುದಿಲ್ಲ ಎನ್ನುವುದು ಆಚಾರ್ಯರ ಕಾಲನಿರ್ಣಯ ಕ್ರಿ.ಶ.1199 ರಿಂದ 1278 ಎಂದು ಪ್ರತಿಪಾದಿಸುವವರ ಪ್ರತಿತರ್ಕ.

ಇದಕ್ಕೆ ಉತ್ತರವೆಂದರೆ - ಆಚಾರ್ಯರ ಪೀಠಾಧಿಪತ್ಯವೇ 79.5 ವರ್ಷಗಳಷ್ಟಿತ್ತು ಹಾಗೂ ಅವರ ಒಟ್ಟು ದೃಶ್ಯಮಾನಾವಧಿಯು 94.5 ವರ್ಷಗಳಷ್ಟಿತ್ತು ಎನ್ನುವ ಖಚಿತ ದಾಖಲೆಗಳು ಪ್ರಾಚೀನದಿಂದಲೇ ಇವೆ. ವಸ್ತುಸ್ಥಿತಿ ಹೀಗಿರುವಾಗ, ಆಚಾರ್ಯರ ಮ.ಭಾ.ತಾ. ನಿರ್ಣಯದ 131/32 ನಿರವಕಾಶ ಶ್ಲೋಕವನ್ನಾಗಲೀ ಅಥವಾ ಆಚಾರ್ಯರ ದೃಶ್ಯಮಾನಾವಧಿಯಲ್ಲಿಯೇ ಶ್ರೀನರಹರಿತೀರ್ಥರು ಕಲಿಂಗದಲ್ಲಿ ರಾಜಪ್ರತಿನಿಧಿತ್ವ ನಡೆಸಿ ಹೊರಡಿಸಿದ ತತ್ಸಂಬಂಧಿ ನಿರವಕಾಶ ಪ್ರತ್ಯಕ್ಷ ಶಾಸನ ಪ್ರಮಾಣಗಳನ್ನಾಗಲೀ ಕೈಬಿಡುವ ಪ್ರಶ್ನೆಯೇ ಇಲ್ಲ. ಬದಲಾಗಿ ಆಚಾರ್ಯರ ಕಾಲನಿರ್ಣಯವು ಕ್ರಿ.ಶ.1199 ರಿಂದ ಕ್ರಿ.ಶ.1294ರವರೆಗೆ ಎಂದು ನಿರ್ಧರಿತವಾಗುತ್ತದೆ. ಈ ಕಾರಣಗಳಿಂದಾಗಿ ಹಾಗೂ ಮುಂದಿನ ಸಂಚಿಕೆಗಳಲ್ಲಿ ತೋರಿರುವ ಅನೇಕ ಕಾರಣಗಳಿಂದಾಗಿ, ಆಚಾರ್ಯರ ಒಟ್ಟು ದೃಶ್ಯಮಾನಾವಧಿಯು ಕೇವಲ 79 ವರ್ಷಗಳೆನ್ನುವ ದಾಖಲೆಗಳು ಅಪ್ರಸ್ತುತವಾಗುತ್ತವೆ. ...ಸಶೇಷ...

# ಹಣಕ್ಕಾಗಿ ಹೆಣವಾಗಬಾರದು

✍ಪಂ.ಪ್ರವೀಣಾಚಾರ್ಯ ಹುನಗುಂದ

ಒಮ್ಮೊಮ್ಮೆ ನಮ್ಮ ತಿಳುವಳಿಕೆ ಪಾತಾಳ ಮುಟ್ಟಿಬಿಡುತ್ತದೆ. ನಾವಂದುಕೊಂಡದ್ದು ಅಂದವಾಗಿರುವದಿಲ್ಲ. ಅಂದು ಅದು ಚೆಂದವೆನಿಸಿದರೂ ಮುಂದೆ ಮಂದಿಯ ನಡುವೆ ಮಂದರನ್ನಾಗಿಸುತ್ತದೆ. ತಾತ್ಕಾಲಿಕ ಭೋಗಗಳನ್ನು ಕೊಡುವಂತಹ ಬೇಡಿಕೆಗಳು ನಮ್ಮ ಜೀವನದ ಬೇಡಿಯಾಗಿ ಬಾಡಿ ಮುದುಡುವಂತೆ ಮಾಡಿ ಕುಲಗೇಡಿಗಳನ್ನಾಗಿಸಿಬಿಡುತ್ತವೆ. ನಾವ್ಯಾರನ್ನೋ ಆಶ್ರಯಿಸಿ ಶ್ರಮಿಸಿ ವಿರಮಿಸದೇ ಮಾಡಿದ ಸೇವೆಗೆ ತಿಳಿದವರು ನಮ್ಮ ಕೊಳೆಯನ್ನು ಮನಗಂಡು ಇಳೆಯಲ್ಲಿ ನಾವು ಬೆಳೆಯಲು ಬೇಕಾದದ್ದನ್ನು ನಮಗೆ ಕೊಟ್ಟಾಗ ಸಿಟ್ಟು ಗಟ್ಟಿಯಾಗಿ ಅವರನ್ನು ಕುಟ್ಟಿಬಿಡೋಣವೆನಿಸುತ್ತದೆ. ಆದರೆ ಅವರು ನಮ್ಮಲ್ಲಿಟ್ಟ ಪುಟ್ಟ ನಂಬಿಕೆಯು ಒಂದುದಿನ ನಮ್ಮನ್ನು ಮುಗಿಲೆತ್ತರಕ್ಕೆ ತಂದು ನಿಲ್ಲಿಸಿಬಿಡುತ್ತದೆ. ಇಂತಹ ಮೇಲೆತ್ತುವ ಮೇಲ್ವಿಚಾರಕರು ಎಲ್ಲರ ಪಾಲಿಗೂ ಒಲಿಯುವದಿಲ್ಲ. ಯುಧಿಷ್ಠಿರನು ಭೀಷ್ಮಪಿತಾಮಹರಿಂದ ತಿಳಿದ ಅನೇಕ ಉಪಾಖ್ಯಾನಗಳಲ್ಲಿ ಇದೊಂದು.

ಬಹಳ ಹಿಂದೆ ಬಡವನಾದ ಬ್ರಾಹ್ಮಣನೋರ್ವ ಅರ್ಥಕಾಮಗಳಲ್ಲಿಯೇ ವ್ಯರ್ಥ ಆಸೆಯನಿಟ್ಟು ಬದುಕನ್ನು ಪುಟ್ಟದಾಗಿಸಿಕೊಂಡಿದ್ದ. ಸದಾ ಕಾಂಚಾಣದಲ್ಲಿಯೇ ಮನವನಿತ್ತು ಸಂಪಾದನೆಯ ಗುಂಗಿನಲ್ಲಿ ಮಂಗನಂತೆ ಅಲಿಯುತ್ತಿದ್ದ. ಎಷ್ಟೇ ಕಷ್ಟಪಟ್ಟರೂ ಅವನು ಮಾಡಿದ ಸಂಪಾದನೆ ಅವನಂದುಕೊಂಡಮಟ್ಟಿಗೆ ಏರುತ್ತಿರಲಿಲ್ಲ. ತುಂಬ ಬೇಸತ್ತ. ಶ್ರಮದಲ್ಲಿ ಫಲ ಬಲವಾಗದಿದ್ದಾಗ ದೈವದ ಮೊರೆ ಹೋಗುವದು ಅನೇಕರ ಚಾಳಿ. ಅಂತೆಯೇ ಇವನ ಮನಃಪಟಲದಲ್ಲಿಯೂ ಯಾವ ದೇವತೆಯನ್ನು ಪೂಜಿಸಿದರೆ ಬಾಚಿಕೊಳ್ಳುವಷ್ಟು ಸಂಪತ್ತನ್ನು ತನ್ನ ಸ್ವತ್ತಾಗಿಸಿಕೊಳ್ಳಬಹುದೆಂಬ ಯೋಚನೆ ಗೀಚಹತ್ತಿತು. ಹೀಗೆ ಯೋಚನೆಯಲ್ಲಿದ್ದಾಗಲೇ ಆಚೆ ದೇವತೆಗಳ ಅನುಚರನಾದ ಮೇಘಪುರುಷನು ಕಂಡನು. ಕುಂಡಧಾರ ಎಂಬ ಹೆಸರಿನ ಅವನು ಇವನ ಬಯಕೆಗಳಿಗೆ ಆಧಾರನಾಗಬಹುದೆಂದು ಅವನ ಆರಾಧನೆಗೆ ಮುಂದಾದ. ಅಪರಿಮಿತವಾದ ವಿಪರೀತ ಭಕುತಿಯನ್ನು ಸತತವಾಗಿ ಕುಂಡಧಾರನಲ್ಲಿ ಮಾಡಿದನು ವಿಪ್ರನು. ತೃಪ್ತನಾದ ಕುಂಡಧಾರನು ಇವನಿಗೇನಾದರೂ ಮಂಗಲವನ್ನುಂಟುಮಾಡುವ ಇಂಗಿತದಿಂದ ತನ್ನ ತೇಜಸ್ಸನ್ನೊಮ್ಮೆ ವಿಪ್ರನೊಳಗಿಟ್ಟನು. ಅವನಲ್ಲಿದ್ದ ಅರ್ಥದ ಸ್ವಾರ್ಥದ ಆಸೆಯ ಕಂಡು ಮರುಗಿದನು. ಇವನಿಗೆ ಉತ್ತಮವಾದದ್ದನ್ನೇ ಮಾಡಬೇಕೆಂದು ದೇವತೆಗಳ ಮುಂದೆ ಬಂದನು. ದೇವತೆಗಳ ಅಡಿಯಲ್ಲಿ ಮುಡಿಯಿಟ್ಟು ಬೇಡಿದನು. ಮಹಾಪುರುಷಾರ್ಥಗಳಲ್ಲಿ ಮಧ್ಯಮ ಪುರುಷಾರ್ಥಗಳಲ್ಲಿಯೇ ವ್ಯರ್ಥ ಬಯಕೆಯನ್ನಿಟ್ಟುಕೊಂಡಿರುವ ಈ ಬಡಬ್ರಾಹ್ಮಣನಿಗೆ ಧರ್ಮ-ಕರ್ಮದಲ್ಲಿ ಮನವು ನೆಲೆ ನಿಲ್ಲುವಂತೆ ಬಲ್ಲವರಾದ ನೀವು

ಅನುಗ್ರಹಿಸಬೇಕೆಂದು ಕೇಳಿಕೊಂಡನು. ಕುಂಡಧಾರನ ಪ್ರಾರ್ಥನೆಯನೊಪ್ಪಿ ದೇವತೆಗಳು ಅದನ್ನೇ ಅನಗ್ರಹಿಸಿ ಹರಿಸಿದರು. ಎಚ್ಚರಗೊಂಡ ವಿಪ್ರನಿಗೆ ಅಚ್ಚರಿಯಾಯಿತು. ಕುಂಡಧಾರನು ತನಗಾಗಿ ಧನವನ್ನು ಬೇಡಲಿಲ್ಲವೆಂಬ ಭಾವನೆಯು ಮನದ ಮೂಲೆಯಲ್ಲಿ ಕಾಡಿತು. ವಿರಕ್ತನಾಗಿ, ಧರ್ಮದಲ್ಲಿ ಆಸಕ್ತನಾಗಿ ಕಾಡಿಗೆ ನಡೆದನು. ಜಪತಪಗಳಲ್ಲಿ ಮುಳುಗಿದನು. ಹಣ್ಣು, ಗಡ್ಡೆ-ಗೆಣಸುಗಳಿಂದಲೇ ತನುವ ಸಂರಕ್ಷಿಸಿದನು. ದೇವತೆಗಳಿಗೆ ಅತಿಥಿಗಳಿಗೆ ಕೊಟ್ಟು ಮಿಕ್ಕಿದರೆ ತಾನು ಸ್ವೀಕರಿಸುತ್ತಿದ್ದನು. ಕ್ರಮೇಣ ಅವನಿಗೆ ಬಲವಂತದ ಆಚರಣೆಯಲ್ಲಿ ಬಲವಾದ ಆಚಾರ ಕಾಣಿಸಿತು. ಧರ್ಮದಲ್ಲಿ ಮಾಗಿದನು. ಬಾಗಿದನು. ಬುದ್ಧಿಯು ಸಿದ್ಧಿಯ ಕಡೆ ಸಾಗಿತು. ತನ್ನ ವ್ರತ-ನಿಯಮಗಳನ್ನು ಬಿಗಿಗೊಳಿಸಿದನು. ಹೀಗೆ ಇವನಾಚರಿಸಿದ ಧರ್ಮದಿಂದ ಇವನಿಗೆ ದಿವ್ಯದೃಷ್ಟಿ ಒದಗಿತು. ಅವನಾಡುವ ನುಡಿಗಳೆಲ್ಲ ನಡೆದೇ ತೀರುತ್ತಿದ್ದವು. ಅಪೂರ್ವಶಕ್ತಿಗಳ ಗಣಿಯಾದ. ಯಾರದ್ದೋ ಬಳಿ ಧನಕ್ಕಾಗಿ ವರ ಬೇಡುವ ತುಡಿತದಿಂದ ಇದ್ದವನು ತಾನೇ ವರ ಕೊಡುವ ಮಟ್ಟಕ್ಕೆ ಬಂದು ನಿಂತ. ಹೀಗೆ ಅಪೂರ್ವಶಕ್ತಿಗಳ ಸಾಕಾರಮೂರ್ತಿಯಾದ ವಿಪ್ರನ ಮುಂದೆ ಕುಂಡಧಾರ ಬಂದು ನಿಂತನು. ಕುಂಡಧಾರ ಆ ವಿಪ್ರನಿಗೆ ಹೀಗೆಂದನು. ಧನ ಬಯಸಿದ ರಾಜರನ್ನು ನಿನ್ನ ದಿವ್ಯದೃಷ್ಟಿಯಿಂದೊಮ್ಮೆ ನೋಡು. ನರಕದಲ್ಲಿ ಬಿದ್ದು ಪಾಪದ ಸರಕನ್ನು ಹೊತ್ತು ಅಳುವಿನ ಮಡುವಿನಲ್ಲಿ ವಿಲವಿಲನೇ ಹೊಯ್ದಾಡುತ್ತಿದ್ದಾರೆ. ಅರ್ಥ ಮನುಷ್ಯನಿಗೆ ಅನರ್ಥವನ್ನೇ ತರುತ್ತದೆಂದು ಭಾವಿಸಿ ನಿನಗಾಗಿ ನಾನು ದೇವತೆಗಳಲ್ಲಿ ಅರ್ಥವನ್ನು ಬೇಡದೇ ಧರ್ಮವನ್ನು ಬೇಡಿದೆ. ಬೇಸರವಾಯಿತೇ....?

ವಿಪ್ರನೆಂದ. ಕುಂಡಧಾರ ! ಅಂದು ಹಣದ ದಾಹದಲ್ಲಿ ಬೆಂದು ನಿನ್ನಲ್ಲಿ ಬೇಸರ ಮಾಡಿಕೊಂಡು ನೊಂದು ಕಾಡಿಗೆ ನಡೆದೆ. ನಿನ್ನ ಸ್ನೇಹವನ್ನು, ದೂರದೃಷ್ಟಿಯನ್ನು ತಿಳಿಯದೇ ಕನಿಷ್ಟನಾಗಿಬಿಟ್ಟೆ. ಉತ್ಕೃಷ್ಟವಾದ ಧರ್ಮವನ್ನು ನನಗಾಗಿ ಕೇಳಿ ಅನುಗ್ರಹಿಸಿದೆ ನೀನು. ಕೇವಲ ಅರ್ಥ ಕೇಳಿದ್ದರೆ ಅದು ಕಳೆದುಹೋಗುತ್ತಿತ್ತು. ನೀನು ಕೇಳಿದ ಧರ್ಮದಿಂದ ನನಗೆ ಅರ್ಥ-ಕಾಮ-ಮೋಕ್ಷಗಳೆಲ್ಲ ಸರಳವಾಗಿವೆ. ನೀ ಮಾಡಿದುಪಕಾರಕ್ಕೆ ನಾ ಋಣಿಯೆಂದು ಸಂಭ್ರಮಿಸಿದನು. ಧರ್ಮ ಶ್ರೇಷ್ಠವಾದದ್ದು. ಧರ್ಮವೊಂದಿದ್ದರೆ ಸಾಕು ಮನುಷ್ಯ ಬಲಗೊಳ್ಳುತ್ತಾನೆ. ಅರ್ಥ, ಕಾಮಗಳೆಲ್ಲವೂ ಮನುಷ್ಯನನ್ನು ಹಣ್ಣಾಗಿಸುತ್ತವೆ ಎಂದು ಈ ಉಪಾಖ್ಯಾನದ ಮೂಲಕ ಭೀಷ್ಮಾಚಾರ್ಯರು ಅರುಹಿದರು.

**ಹೀಗಾಗಿ ಮನುಷ್ಯ ಹಣಕ್ಕಾಗಿ ಹೆಣವಾಗದೇ ಧರ್ಮಕ್ಕಾಗಿ ಮುನ್ನುಗ್ಗಬೇಕು.**

**ಶ್ರೀಸುಧಾದಲ್ಲಿ ಪ್ರಕಟವಾಗುವ ಲೇಖನಗಳಿಗೆ ಲೇಖಕರೇ ಜವಾಬ್ದಾರರು.**
**ಪತ್ರಿಕೆಯ ಸಂಪಾದಕಮಂಡಳಿ ಹೊಣೆಯಲ್ಲ.**

# ಚಾತುರ್ಮಾಸ್ಯದ ನೂರೊಂದು ವಿಶೇಷತೆಗಳು

✍ ಪಂ. ಪ್ರಮೋದಾಚಾರ್ಯ
ಹನುಮಸಾಗರ

ಸಾಧನೆಯ ಶರೀರ, ಸಾಧನೆಯ ಸಮಯ ಸಿಕ್ಕಾಗ ಎಂದಿಗೂ ವ್ಯರ್ಥ ಮಾಡಬಾರದು. ಪರಮಪವಿತ್ರವಾದ ಈ ಚಾತುರ್ಮಾಸ್ಯ ಪರ್ವಕಾಲದಲ್ಲಿ, ವಿವಿಧ ದಾನ-ವ್ರತಗಳು ಸಂಪ್ರದಾಯಪ್ರಾಪ್ತವಾಗಿವೆ. ಎಲ್ಲವನ್ನು ತಿಳಿಯೋಣ. ಸಾಧ್ಯವಿದ್ದಷ್ಟು ಆಚರಿಸೋಣ.

ಮಾಸಕ್ಕೊಂದರಂತೆ ಶಾಖ, ದಧಿ, ಕ್ಷೀರ, ದ್ವಿದಳ ವ್ರತಗಳನ್ನು ಸಕಲರೂ ಆಚರಿಸಬೇಕು. ಪ್ರದಕ್ಷಿಣೆ, ನಮಸ್ಕಾರ, ಹೂ, ತುಳಸಿ, ಗಂಧ, ಕುಂಕುಮ, ಗೆಜ್ಜೆವಸ್ತ್ರಗಳ ಲಕ್ಷ ಸಮರ್ಪಣೆ, ಹತ್ತಿಯ ಕಾಳನ್ನು ಲಕ್ಷ ಬಿಡಿಸುವುದು, ರಂಗೋಲಿಯನ್ನು ವಿವಿಧ ರೀತಿಯಲ್ಲಿ (ಚಾತುರ್ಮಾಸ್ಯ ರಂಗೋಲಿ ಚಕ್ರಾಬ್ಜಮಂಡಲ, ಶಂಖ-ಚಕ್ರ, ಸ್ವಸ್ತಿಕ, ಗೋಪದ್ಮ, ಹರಿನಾಮ ಲೇಖನ.... ಇತ್ಯಾದಿ) ಹಾಕಬಹುದು.

ಲಕ್ಷಕರಿಮಣಿ-ಮಾಂಗಲ್ಯ, ಬಳೆ, ಅರಿಷಿಣ ಕುಂಕುಮ, ವಸ್ತ್ರ, ಪುಸ್ತಕ, ಸೌಭಾಗ್ಯದ್ರವ್ಯಗಳು, ಹಾಲು-ಮೊಸರು, ಪ್ರತಿಮೆ, ಸಾಲಿಗ್ರಾಮ, ದೀಪ, ಪೂಜಾಸಾಧನ ಪದಾರ್ಥಗಳು, ಘೃತ-ತೈಲ, ಭಿಕ್ಷ್ಯ, ಉದಕುಂಭ, ಸವತ್ಸಗೋ, ಧಾನ್ಯಗೋ, ರಜತಗೋ, ವೃಂದಾವನ, ಯಜ್ಞೋಪವೀತ, ಗೋಪೀಚಂದನ, ಶೂರ್ಪ, ಆಭರಣ, ಮಾಲಾ, ಬ್ರಹ್ಮಾಂಡ (ಕೊಬ್ಬರಿ ಗಿಟಕಿನಲ್ಲಿ ಕೃಷ್ಣನನ್ನು ಇಟ್ಟು ಮುಚ್ಚಿದ್ದು)

ಮುಂತಾದವುಗಳನ್ನು ನಮ್ಮ ಶಕ್ತ್ಯನುಸಾರ ಆತ್ಮವಂಚನೆ ಮಾಡಿಕೊಳ್ಳದಂತೆ ಯೋಗ್ಯ ಪಾತ್ರರಿಗೆ ಸಂಕಲ್ಪಪೂರ್ವಕ ದಾನ ಮಾಡಬಹುದು.

ನಿತ್ಯದಲ್ಲೂ ಯೋಗ್ಯ ಮುತ್ತೈದೆಗೆ ವೇಣೀಬಂಧನ ಅಥವಾ ವಿಶೇಷ ಸಂಧರ್ಭದಲ್ಲಿ ಅಭ್ಯಂಗಾದಿಗಳನ್ನು ಅಥವಾ ಅಲಂಕಾರಾದಿಗಳನ್ನು ಮಾಡಬಹುದು. ಮಾಡುವಾಗ ಆ ಮುತ್ತೈದೆಯಲ್ಲಿರುವ ಲಕ್ಷ್ಮೀ,ಸರಸ್ವತಿ, ಭಾರತಿ, ಪಾರ್ವತಿ ಮುಂತಾದವರಿಗೆ ಮಾಡಿದ ಸೇವೆ ಎಂದು ಚಿಂತಿಸಬೇಕು.

ನಿತ್ಯ ಶೀತಲಜಲಸ್ನಾನ, ಭೂಶಯನ ಅಥವಾ ಚಾಪೆಯಲ್ಲೇ ಮಲಗುವದು, ಭೂಭೋಜನ = ಒಂದೇ ಶಿಲೆಯನ್ನು ಆರಿಸಿ ನಿತ್ಯ ತೊಳೆದು ಭೋಜನ ಮಾಡುವದು, ಮೌನಭೋಜನ, ದಿಕ್ ಭೋಜನ, ಹಗಲು ಅಥವಾ ರಾತ್ರಿ ಮಾತ್ರ ಭೋಜನ, ಉಪ್ಪಿಲ್ಲದ ಪದಾರ್ಥ, ಬೇಯಿಸದೇ ಇದ್ದ ಪದಾರ್ಥ ಮಾತ್ರ ಸ್ವೀಕಾರ, ಯೋಗ್ಯರಲ್ಲಿ ಬೇಡಿ ಬಂದದ್ದನ್ನು ಮಾತ್ರ ಸ್ವೀಕರಿಸುವದು, ನಿತ್ಯ ಯೋಗ್ಯ ಬ್ರಾಹ್ಮಣರಿಗೆ ನೀಡಿ ಉಳಿದದ್ದನ್ನು ಮಾತ್ರ ಭುಂಜಿಸುವದು, ಪತ್ರಭೋಜನ ಮುಂತಾದವುಗಳನ್ನು ನಮ್ಮ ದೇಹದ ಶಕ್ತ್ಯನುಸಾರ ಮಾಡುತ್ತಾ ಇದೊಂದು ತಪಸ್ಸೆಂದು ತಿಳಿದು ಸಮರ್ಪಿಸಬೇಕು.

ಅನ್ನಕ್ಕೆ ತುಪ್ಪ ಮತ್ತು ಉಪ್ಪು ಮಾತ್ರ ಸೇರಿಸಿ ಸ್ವೀಕರಿಸುವದಕ್ಕೆ ಏಕಾಂತ ಭೋಜನ

ಎನ್ನುವದು. ಐದು ದಿನ ಕ್ಷೀರಾನ್ನ, ಐದು ದಿನ ದಧ್ಯನ್ನ, ಹೀಗೆ ಮಾಡಿದರೆ ಪಂಚಕರ್ಮ ಭೋಜನ ಎನ್ನುವರು.

ಅಥವಾ ಚತುರಾನ್ನ ಭೋಜನ ಅಂದರೆ ಸೂಪಾನ್ನ ಕ್ಷೀರಾನ್ನ ಧಧ್ಯನ್ನ ಘೃತಾನ್ನ ಮಾತ್ರ ಮಾಡುವದು. ಒಂದುದಿನ ದಾರಣೆ (ಉಪವಾಸ) ಒಂದುದಿನ ಪಾರಣೆ (ಭೋಜನ) ಇದನ್ನಾದರೂ ಮಾಡಬಹುದು.

ನಿತ್ಯ ಪಂಚಗವ್ಯ ಸ್ವೀಕಾರ ಅಥವಾ ಗೋಮಯ-ಮೃತ್ತಿಕಾಗಳನ್ನು ಸೀಮಿತ ಪ್ರಮಾಣದಲ್ಲಿ ಸ್ವೀಕರಿಸುವುದು, ಕೇಶ-ನಖಖಂಡನ ತ್ಯಾಗ, ಪಾದುಕಾ ತ್ಯಾಗ, ದಿನಕ್ಕೊಂದು ಪದಾರ್ಥತ್ಯಾಗ, ಪರಾನ್ನ ತ್ಯಾಗ, ಒಂದೊಂದು ತಿಂಗಳು ಒಂದೊಂದು ಬೇಳೆ ಅಥವಾ ತರಕಾರಿ ತ್ಯಾಗ, ಸಂಚಾರ ತ್ಯಾಗ, ಕೊನೆಯಲ್ಲಿ ಯಾವದೂ ಸಾಧ್ಯವಾಗದಿದ್ದರೆ ಮಧು ತ್ಯಾಗ, ತಾಂಬೂಲ ತ್ಯಾಗವಾದರೂ ಮಾಡಬಹುದು. ಇದೊಂದು ತಪಸ್ಸು ಎನಿಸುವದು. ಪದಾರ್ಥದ ಬೆಲೆ ತಿಳಿಯುವುದು. ಸೃಷ್ಟಿಸಿದ ದೇವನಿಗೆ ''ನನಗೆ ದೇವರೇ ಬೇಕು. ದೇವರು ಸೃಷ್ಟಿಸಿದ ಪದಾರ್ಥವಲ್ಲ'' ಎಂದು ಮನಸ್ಸಿಗೆ ಪಾಠ ಕಲಿಸಿದಂತಾಗುವದು.

ಮಹಾಭಾರತ ಅನುಶಾಸನಪರ್ವ ತಿಳಿಸಿದಂತೆ, ಒಂದೊಂದು ನಕ್ಷತ್ರಕ್ಕೆ ಒಂದೊಂದು ದಾನ ಮಾಡಬಹುದು. ಒಂದು ಕುಟುಂಬದ ಪೋಷಣೆಗಾಗಿ ದಿನಸಿ ಪದಾರ್ಥಗಳನ್ನು ನೀಡಬಹುದು.

ಈ ದೇಹ, ಬುದ್ಧಿ, ಸಂಪತ್ತು, ಸಂಸಾರ ಸಕಲವೂ ಸರ್ವೇಶನ ದಯೆಯಿಂದ ಬಂದದ್ದು, ಸರ್ವೋತ್ತಮನ ಸೇವೆಗಾಗಿ ಇದ್ದದ್ದು. ನಿತ್ಯವೂ ಒಂದಾದರೂ ನಿಯಮಿತ ಪಾರಾಯಣ, ಧಾರ್ಮಿಕ ಕೃತಿಗಳ ಪಾರಾಯಣ, ಲೇಖನ, ಪ್ರವಚನ ಶ್ರವಣ ಇತ್ಯಾದಿಗಳನ್ನು ಮಾಡಬೇಕು. ಈ ರೀತಿಯಾಗಿ ಪುರಾಣ-ಸ್ಮೃತಿಗಳನ್ನು ಅಧ್ಯಯನ ಮಾಡುತ್ತ, ಸಂಪ್ರದಾಯಗಳನ್ನು ತಿಳಿಯುತ್ತಾ ಹೋದರೆ ಸಾವಿರಾರು ಸಾಧನೆಯ ದಾರಿಗಳು ಸಿಗುವವು. ಎಲ್ಲವನ್ನೂ ಮಾಡಲಾಗದಿದ್ದರೂ ಎಲ್ಲವನ್ನೂ ಬಿಡುವದು ಬೇಡ. ಮನಸ್ಸಿದ್ದರೆ ಮಾರ್ಗವೆಂಬುದನ್ನು ಮರೆಯಬಾರದು. ಸಂಕಲ್ಪ-ಸಮರ್ಪಣೆಗಳನ್ನು ಮರೆಯದಿರಿ.

ದೇಹದಂಡನೆ ವಿಹಿತವಾದಾಗ ಅಂತಃಕರಣಶುದ್ಧಿ, ದಾನದಿಂದ ತ್ಯಾಗದಿಂದ ಪಾಪಪರಿಹಾರ, ಪುರಾಣಶ್ರವಣ-ಜಪ-ಪಾರಾಯಣಗಳಿಂದ ಪುಣ್ಯಪ್ರಾಪ್ತಿ ಮೂರು ಸೇರಿದಾಗ ಜ್ಞಾನ-ಭಕ್ತಿ-ವೈರಾಗ್ಯಪ್ರಾಪ್ತಿ. ಇವುಗಳನ್ನು ಪೂರ್ಣ ಬೆಳೆಸಿದಾಗ ಅಪರೋಕ್ಷಜ್ಞಾನ. ಅಂತಿಮದಲ್ಲಿ ಆನಂದಸಾಗರವಾದ ಮೋಕ್ಷ. ತಿಳಿಯೋಣ, ತಿಳಿಸೋಣ, ಮಾಡೋಣ,

ಹೇಳೋಣ, ಸುಖಸದನವನ್ನು ಸೇರೋಣ. ★★

**ರೇಡಿಯೋ ಸತ್ಯಾತ್ಮವಾಣಿ radio.uttaradimath.org**

**ದೇವರನಾಮ, ಪಂಡಿತರ ಪ್ರವಚನ, ಶ್ರೀಪಾದಂಗಳವರ ಪ್ರವಚನ ನಿರಂತರ ಕೇಳಿ ಆನಂದಿಸಬೇಕೇ? ಆ್ಯಪ್ ನಲ್ಲೂ ಲಭ್ಯ, Google play Radio Garden**

## ಪುರಾಣ-ಸ್ಮೃತ್ಯುಕ್ತ ಮತ್ತು ಸಂಪ್ರದಾಯಪ್ರಾಪ್ತ ಚಾತುರ್ಮಾಸ್ಯದ ವ್ರತ-ದಾನ ವಿಶೇಷಗಳು

| | |
|---|---|
| 1 | ಶಾಕ ವ್ರತ |
| 2 | ದಧಿ ವ್ರತ |
| 3 | ಕ್ಷೀರ ವ್ರತ |
| 4 | ದ್ವಿದಳ ವ್ರತ |
| 5 | ಲಕ್ಷ ನಮಸ್ಕಾರ ಪ್ರದಕ್ಷಿಣೆ |
| 6 | ಲಕ್ಷ ತುಳಸೀ ಸಮರ್ಪಣ |
| 7 | ಲಕ್ಷ ಹೂ ಸಮರ್ಪಣ |
| 8 | ಲಕ್ಷ ಬತ್ತಿ ಸಮರ್ಪಣ |
| 9 | ಲಕ್ಷ ದೀಪ ಸಮರ್ಪಣ |
| 10 | ಲಕ್ಷ ಗಂಧ ಸಮರ್ಪಣ |
| 11 | ಲಕ್ಷ ಕುಂಕುಮಾರ್ಚನೆ |
| 12 | ಲಕ್ಷ ಗೆಜ್ಜೆವಸ್ತ್ರ ಸಮರ್ಪಣ |
| 13 | ಲಕ್ಷ ಹತ್ತಿ(ಕಾಳು) ಬಿಡಿಸುವುದು |
| 14 | ಲಕ್ಷ ಬಳೆ ದಾನ |
| 15 | ಲಕ್ಷ ರಂಗೋಲಿ ಬಿಡಿಸುವುದು |
| 16 | ಲಕ್ಷ ಕರಿಮಣಿ ಮಾಂಗಲ್ಯ ದಾನ |
| 17 | ವೇಣೀ ಬಂಧನ |
| 18 | ಅಭ್ಯಂಗ ಮಾಡಿಸುವುದು |
| 19 | ಮುಷ್ಟಿಧಾನ್ಯದಾನ |
| 20 | ದರ್ಭೆ (ಚಾಪೆ) ಶಯನ |
| 21 | ಭೂ ಶಯನ |
| 22 | ತೀರ್ಥಸ್ನಾನ |
| 23 | ಶೀತ ಜಲ ಸ್ನಾನ |
| 24 | ಮಾರ್ಜನ, ಉಪಲೇಪನ |
| 25 | ಪಾರಾಯಣ ಜಪ ವಿಶೇಷ |
| 26 | ಬ್ರಹ್ಮ ಭೋಜನ |
| 27 | ಪತ್ರ ಭೋಜನ |
| 28 | ಶಿಲಾ ಭೋಜನ |
| 29 | ಭೂ ಭೋಜನ |
| 30 | ಮೌನ ಭೋಜನ |
| 31 | ದಿಕ್ ಭೋಜನ |
| 32 | ಏಕ ಭೋಜನ |
| 33 | ಅತ್ತೈಲ ಭೋಜನ |
| 34 | ಅಘೃತ ಭೋಜನ |
| 35 | ದಕ್ಷಿಣ ಭೋಜನ |
| 36 | ದಿವಾ ಭೋಜನ |
| 37 | ನಕ್ತ ಭೋಜನ |
| 38 | ದಿನ್ನೈಕ ಭೋಜನ |
| 39 | ಯಾಚಿತ ಭೋಜನ |
| 40 | ಅಲವಣ ಭೋಜನ |
| 41 | ಹವಿಷ್ಯಾನ್ನ ಭೋಜನ |
| 42 | ಏಕಾಂತ ಭೋಜನ (ಘೃತ,ಲವಣ, ಅನ್ನ ಮಾತ್ರ) |
| 43 | ಪಂಚಕರ್ಮ ಭೋಜನ (೫ದಿನ ಕ್ಷೀರಾನ್ನ ಅಥವಾ ದಧ್ಯನ್ನ) |
| 44 | ಚತುರಾನ್ನ ಭೋಜನ (ಸೂಪಾನ್ನ ಕ್ಷೀರಾನ್ನ, ದಧ್ಯನ್ನ, ಘೃತಾನ್ನ) |
| 45 | ಧಾರಣ-ಪಾರಣ |
| 46 | ಗೋಮಯ-ಮೃತ್ತಿಕಾ ಸ್ವೀಕಾರ |
| 47 | ಪಂಚಗವ್ಯ ಸ್ವೀಕಾರ |
| 48 | ಇಚ್ಛಾ ಭೋಜನ |
| 49 | ದಂಪತ್ ಭೋಜನ |
| 50 | ರಜತ ಅಥವಾ ಸುವರ್ಣ ದಾನ |
| 51 | ಉಯ್ಯಾಲೆ ದಾನ |
| 52 | ದೀಪ ದಾನ |
| 53 | ಘೃತ-ತೈಲ ದಾನ |
| 54 | ಪ್ರತಿಮಾ ದಾನ |
| 55 | ಸವತ್ಸ ಗೋದಾನ |
| 56 | ಧಾನ್ಯ ಗೋದಾನ |
| 57 | ರಜತ ಗೋದಾನ |
| 58 | ವೃಂದಾವನ ದಾನ |
| 59 | ಮಾಲಾ ದಾನ |
| 60 | ಆಭರಣ ದಾನ |
| 61 | ಫಲ ದಾನ |

| | |
|---|---|
| 62 | ಉಪಹಾರ ದಾನ |
| 63 | ದಧಿ ದಾನ |
| 64 | ಕ್ಷೀರ ದಾನ |
| 65 | ವಸ್ತ್ರದಾನ |
| 66 | ಪುಸ್ತಕ ದಾನ |
| 67 | ಉದಕುಂಬದಾನ |
| 68 | ಜಲ ದಾನ |
| 69 | ಪಾಯಸ ದಾನ |
| 70 | ಯಜ್ಞೋಪವೀತ ಮತ್ತು ಗೋಪಿಚಂದನ ದಾನ |
| 71 | ತಾಂಬೂಲ ದಾನ |
| 72 | ಶೂರ್ಪದಾನ |
| 73 | ಗುಪ್ತ (ಮಹಾ) ದಾನ |
| 74 | ಬ್ರಹ್ಮಾಂಡ ದಾನ |
| 75 | ನಿತ್ಯ ದಾನ |
| 76 | ಸ್ಯೂತಕ ದಾನ (ಮಕ್ಕಳಿಗೆ ಬಟ್ಟೆ) |
| 77 | ಚಾತುರ್ಮಾಸ್ಯ ರಂಗೋಲಿ |
| 78 | ಚಕ್ರಾಬ್ಜ ಮಂಡಲ ರಂಗೋಲಿ |
| 79 | ರುದ್ರಾದಿತ್ಯ ವಸು(ಪದ್ಮ) ರಂಗೋಲಿ |
| 80 | ಅರಿಷಿನ ಕುಂಕುಮ ಪದ್ಮ ರಂಗೋಲಿ |
| 81 | ಹರಿನಾಮರಂಗೋಲಿ |
| 82 | ಶಂಖಚಕ್ರ ರಂಗೋಲಿ |

| | |
|---|---|
| 83 | ಸ್ವಸ್ತಿಕ ರಂಗೋಲಿ |
| 84 | ಗೋಪದ್ಮ ರಂಗೋಲಿ |
| 85 | ಪಾದಪೂಜೆ |
| 86 | ಶಯ್ಯಾ ತ್ಯಾಗ |
| 87 | ಪಾದುಕಾ ತ್ಯಾಗ |
| 88 | ದಿನಕ್ಕೊಂದು ಪದಾರ್ಥ ತ್ಯಾಗ |
| 89 | ಮಾಸಕ್ಕೊಂದು ದ್ವಿದಲ ತ್ಯಾಗ |
| 90 | ಕೇಶ ಖಂಡನ ತ್ಯಾಗ |
| 91 | ನಖಚ್ಛೇದನ ತ್ಯಾಗ |
| 92 | ಪರಾನ್ನ ತ್ಯಾಗ |
| 93 | ತರಕಾರಿ ತ್ಯಾಗ |
| 94 | ಮಧು ತ್ಯಾಗ |
| 95 | ಸಂಚಾರ ತ್ಯಾಗ |
| 96 | ಅಂಖಡ ಮೌನ |
| 97 | ಕುಟುಂಬ ಪೋಷಣೆ |
| 98 | ಮಾಸ (ತಿಂಗಳ ದಿನಸಿ) ದಾನ |
| 99 | ನಕ್ಷತ್ರ ದಾನ (ಭಾರತಾನುಸಾರಿ ಪದಾರ್ಥ) |
| 100 | ದಾನ, ಜಪ, ತ್ಯಾಗ (ಕೊಡು, ಹಿಡಿ, ಬಿಡು) |
| 101 | ನಿತ್ಯ ಭಾಗವತಾದಿ ಶಾಸ್ತ್ರಶ್ರವಣ ಅಥವಾ ಪಾರಾಯಣ, ಲೇಖನ. |

★ ಸೂಚನೆ - ಪ್ರತಿಯೊಂದಕ್ಕೂ ಸೂಕ್ತ ಸಂಕಲ್ಪ, ಸಮರ್ಪಣೆ ಇರಲಿ.

★ ಕೆಲವು ನಿತ್ಯ, ಮಾಸಿಕ, ನೈಮಿತ್ತಿಕ ವ್ರತಗಳುಂಟು. ಜ್ಞಾನಿಗಳಿಂದ ಸ್ಪಷ್ಟಪಡಿಸಿಕೊಳ್ಳಿ.

★ ದಾನದಲ್ಲಿ ವಸ್ತು, ಪಾತ್ರಾದಿಗಳ ಉತ್ತಮತೆಗೆ ಲಕ್ಷವಹಿಸಿ.

**ದೀಪ ಶಬ್ದದ ಅರ್ಥ**

ದೀರ್ಘಾಧ್ವಾನಮಹಾಧ್ವಾಂತಾಹಂಕಾರಪರಿವರ್ಜನಾತ್ ।
ಪರತತ್ತ್ವಪ್ರಕಾಶಾಚ್ಚ ದೀಪ ಇತ್ಯಭಿಧೀಯತೇ ॥ ಪುರ..

''**ದೀ**''ರ್ಘವಾದ, ಪ್ರವೃತ್ತಮಾರ್ಗದಲ್ಲಿರುವ ಕಗ್ಗತ್ತಲು ಅಹಂಕಾರ. ಈ ಅಹಂಕಾರವೆಂಬ ತಮಸ್ಸನ್ನು ಪರಿಹರಿಸುತ್ತದೆ.

''**ಪ**''ರತತ್ತ್ವವಾದ ಪರಮಾತ್ಮನ ಜ್ಞಾನವನ್ನು ನೀಡುತ್ತದೆ. ಆದ್ದರಿಂದ ಇದನ್ನು ''**ದೀಪ**'' ಎಂದು ಜ್ಞಾನಿಗಳು ವ್ಯವಹರಿಸಿದ್ದಾರೆ.

## ಭೋಜನಕ್ಕೆ ಮುನ್ನ....

**ಅನ್ನಂ ದೃಷ್ಟ್ವಾ ಪ್ರಣಮ್ಯಾದೌ ಪ್ರಾಂಜಲಿಃ ಕಥಯೇತ್ತತಃ ।**
**ಅಸ್ಮಾಕಂ ನಿತ್ಯಮಸ್ತ್ವೇತದಿತಿ ಭಕ್ತ್ಯಾಽಥ ವಂದಯೇತ್ ॥** ಬ್ರ.ಪು

ಭೋಜನ ಮಾಡುವಾಗ ಮೊದಲು ಅನ್ನಕ್ಕೆ ನಮಸ್ಕರಿಸಬೇಕು. ಅನ್ನವನ್ನು ನೀಡಿದ ಭಗವಂತನನ್ನು ಪ್ರಾರ್ಥಿಸಬೇಕು. ನಿತ್ಯವೂ ವೈಶ್ವದೇವ ಮಾಡಿದ, ಬ್ರಾಹ್ಮಣರಿಗೆ ಬಡಿಸಿ ಉಚ್ಛಿಷ್ಟವಾದ ಈ ತರಹದ ಅನ್ನವೇ ನನಗೆ ದೊರಕಲಿ. ಇಂತಹ ಅನ್ನವೇ ಸಂಸಾರತರಣಕ್ಕೆ ಸೊಪಾನವಾಗುತ್ತದೆ ಎಂದು ಚಿಂತಿಸಬೇಕು. ಭಕ್ತಿಯಿಂದ ನಮಸ್ಕರಿಸಿ ಅನ್ನವನ್ನು ಸ್ವೀಕರಿಸಬೇಕು.

### ... ವರ ಬೇಕಾಗಿದೆ ...

**ಗೋತ್ರ : ಭಾರದ್ವಾಜ ನಕ್ಷತ್ರ : ಕೃತ್ತಿಕಾ** 3 **ವಯಸ್ಸು :** 28 **ಎತ್ತರ :** 5.6 **ಪದವಿ : ಬಿ.ಇ ನೌಕರಿ : ಡಿಸೈನ್ ಇಂಜನೀಯರ್ ಡಿಗ್ರಿ.ಎಸ್. ಕಂ. ಅಪೇಕ್ಷೆ : ಸೂಕ್ತವಾದ ವರ ಬೇಕಾಗಿದೆ. ಉ.ಕದವರಿಗೆ ಆದ್ಯತೆ ಸಂಪರ್ಕ: ರೇಖಾ ರಾಘವೇಂದ್ರ ದೂ:** 8123409662/9740924147/7019181670

**ಗೋತ್ರ : ವಿಶ್ವಾಮಿತ್ರ ನಕ್ಷತ್ರ : ಪುಷ್ಯ** 1 **ವಯಸ್ಸು :** 29 **ಎತ್ತರ :** 5.5 **ಪದವಿ : ಬಿ.ಇ, ಕಂ. ಸೈ ನೌಕರಿ : ಸಾ.ಇಂಜನೀಯರ ಅಪೇಕ್ಷೆ : ಬೆಂಗಳೂರಿನಲ್ಲಿರುವ ಬಿ.ಇ, ಎಂ.ಎಸ್ ಆಗಿರುವ** 2-3**ವರ್ಷ ಅಂತರವಿರುವ** 5.8 **ಎತ್ತರವಿರುವ ಸೂಕ್ತ ವರ ಬೇಕಾಗಿದೆ. ಸಂಪರ್ಕ: ವಿಜಯೀಂದ್ರ ದೂ:** 7019529299/9945865894

### ... ವಧು ಬೇಕಾಗಿದೆ ...

**ಗೋತ್ರ : ವಶಿಷ್ಠ ನಕ್ಷತ್ರ : ಪೂರ್ವಾಷಾಢ -** 3 **ವಯಸ್ಸು :** 35 **ಎತ್ತರ :** 5.8 **ಪದವಿ : ಸುಧಾಪಂಡಿತ ನೌಕರಿ : ಶ್ರೀಪಲಿಮಾರು ಮಠ ಚೆನ್ನೈ ಅಪೇಕ್ಷೆ : ಸೂಕ್ತವಾದ ವಧು ಬೇಕಾಗಿದೆ. ಸಂಪರ್ಕ: ಗೋಪಾಲಕೃಷ್ಣ ಕಡ್ಡಿ ದೂ:** 9841699182

**ಗೋತ್ರ : ಭಾರದ್ವಾಜ ನಕ್ಷತ್ರ : ಕೃತ್ತಿಕಾ ವಯಸ್ಸು :** 29 **ಎತ್ತರ :** 5.1 **ಪದವಿ : ಬಿ.ಕಾಂ. ನೌಕರಿ : ಸ್ವಂತ ಉದ್ಯೋಗ ಅಪೇಕ್ಷೆ : ಉದ್ಯೋಗದಲ್ಲಿರುವ ಸುಶಿಕ್ಷಿತ ವಧು ಬೇಕಾಗಿದೆ. ಸಂಪರ್ಕ: ಬಿ.ಎ.ಮೋಹನ ದೂ:** 9008407793/9880642969/9741638757

**ಗೋತ್ರ : ಅತ್ರಿ ನಕ್ಷತ್ರ : ಪೂ.ಭಾ ವಯಸ್ಸು :** 29 **ಎತ್ತರ :** 5.6 **ಪದವಿ : ಬಿ.ಇ ಮೈಕಾನಿಕ ನೌಕರಿ : ಎಲ್ ಅಂಡ್ ಟಿ ಕಂಪನಿಯಲ್ಲಿ ಅಪೇಕ್ಷೆ : ಸುಸಂಸ್ಕೃತ ಪದವಿಧರೆಯಾದ ಸೂಕ್ತ ವಧು ಬೇಕಾಗಿದೆ. ಸಂಪರ್ಕ: ವಿ.ಆರ್ ಕುಲಕರ್ಣಿ ದೂ:** 9426863299

**ಗೋತ್ರ : ಹರಿತಸ ನಕ್ಷತ್ರ : ಧನಿಷ್ಠಾ ವಯಸ್ಸು :** 28 **ಎತ್ತರ :** 5.11 **ಪದವಿ : ಎಂ.ಟೆಕ್. ನೌಕರಿ : ಅಸಿಸ್ಟೆಂಟ್ ಪ್ರೋ. ಅಪೇಕ್ಷೆ : ಸುಸಂಸ್ಕೃತ ಪದವಿಧರೆಯಾದ ಸೂಕ್ತ ವಧು ಬೇಕಾಗಿದೆ. ಸಂಪರ್ಕ: ಸಮೀರ ಪಿ. ದೂ:** 80073291330/8494998755

# ಗೋ ಮಾತೆಯ ಸೇವೆಗೊಂದು ಸದವಕಾಶ!!!


ಉತ್ತರಾದಿಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ 1008ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಕೃಷ್ಣಾನದಿ ತೀರದಲ್ಲಿರುವ ಸ್ವಯಂವ್ಯಕ್ತ ಪ್ರಾಣದೇವರ ದಿವ್ಯ ಕ್ಷೇತ್ರವಾದ ಯಲಗೂರ ಗ್ರಾಮದಲ್ಲಿ ಪ್ರಮೋದಾತ್ಮ ಗೋ ಸಂರಕ್ಷಣಾ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಇಂದು ಈ ಕೇಂದ್ರದಲ್ಲಿ ನೂರಾರು ಗೋವುಗಳಿವೆ. ಈ ಕೇಂದ್ರದ ಕಾರ್ಯಕರ್ತರು ಕಸಾಯಿಖಾನೆಗೆ ಮಾರುವ ಆಕಳುಗಳನ್ನು ಸಹ ತಂದು ಸಂರಕ್ಷಿಸಿದ್ದಾರೆ.

ಈ ಗೋಶಾಲೆಯ ಗೋವುಗಳು ನೀಡುವ ಹಾಲಿನಿಂದ ನಿತ್ಯ ಪ್ರಾಣದೇವರಿಗೆ ಕ್ಷೀರಾಭಿಷೇಕವಾಗುತ್ತದೆ. ಅಲ್ಲದೇ ಸ್ವಲ್ಪ ಪ್ರಮಾಣ ಹಾಲನ್ನು ಅಪೌಷ್ಟಿಕತೆಯಿಂದ ಇರುವ ಹಾಗೂ ಮಾತೃಕ್ಷೀರದಿಂದ ವಂಚಿತರಾಗಿರುವ ಒಂದು ವರ್ಷದ ಒಳಗಿನ ಎಲ್ಲ ವರ್ಗದ ಮಕ್ಕಳಿಗೆ ಉಚಿತವಾಗಿ ನೀಡಲಾಗುತ್ತದೆ. ಉಳಿದ ಹಾಲಿನಿಂದ ದೊರೆಯುವ ತುಪ್ಪವನ್ನು ಶ್ರೀ ಮಠದ ಮೂಲರಾಮದೇವರ ಪೂಜೆಯ ದೀಪಕ್ಕೆ ಬಳಸಲಾಗುತ್ತದೆ. ಹೀಗಾಗಿ ಎಲ್ಲರಿಗೂ ಯಲಗೂರದ ಗೋಶಾಲೆ ಎಂದರೆ ಅಚ್ಚುಮೆಚ್ಚು. ಈ ಗೋಶಾಲೆಯ ಇನ್ನೊಂದು ಮಹತ್ವವೆಂದರೆ ಹನ್ನೆರಡು ತಿಂಗಳು ಆಕಳುಗಳಿಗೆ ಹಸಿ ಹುಲ್ಲನ್ನು ನೀಡಲಾಗುತ್ತದೆ.

ಈ ಗೋಸಂರಕ್ಷಣಾ ಕೇಂದ್ರವು ನಿತ್ಯ ಗೋಗ್ರಾಸ ಸೇವಾ ಎಂಬ ಯೋಜನೆಯೊಂದನ್ನು ಹಮ್ಮಿಕೊಂಡಿದೆ. ಪ್ರತಿಯೊಬ್ಬ ಮನುಷ್ಯನು ತಾನು ಭೋಜನ ಮಾಡುವ ಪೂರ್ವದಲ್ಲಿ ಗೋಗ್ರಾಸವನ್ನು ನೀಡಿ ಭೋಜನ ಮಾಡಬೇಕು ಎಂದು ನಮ್ಮ ಸಂಸ್ಕೃತಿ ಹೇಳುತ್ತದೆ. ಅದು ಇಂದು ಈ ಒತ್ತಡದ ಬದುಕಿನಲ್ಲಿ ನಮಗೆ ಅಸಾಧ್ಯವಾಗಿರುತ್ತದೆ. ಆದ್ದರಿಂದ ಎಲ್ಲರೂ ಈ ನಿತ್ಯ ಗೋಗ್ರಾಸ ವ್ರತದಲ್ಲಿ ಪಾಲ್ಗೊಂಡು ಪುಣ್ಯವಂತರಾಗಬೇಕೆಂಬುದು ನಮ್ಮ ಅಭೀಪ್ಸೆ.ಅದಕ್ಕೆ ತಾವು ಪ್ರತಿನಿತ್ಯ ಊಟಕ್ಕಿಂತ ಮುಂಚೆ ಗ್ರೋಗ್ರಾಸಕ್ಕಾಗಿ ಪ್ರತಿಯೊಬ್ಬರೂ 10 ರೂ ಗಳನ್ನು ದೇವರ ಮುಂದೆ ಇಟ್ಟು ಊಟ ಮಾಡಿದರೆ ಅವತ್ತಿನ ಊಟ ಸಾರ್ಥಕವಾಗುವದರಲ್ಲಿ ಸಂದೇಹವಿಲ್ಲ. ಇಂದೇ ಆ ನಿಯಮವನ್ನು ಅನುಷ್ಠಾನಕ್ಕೆ ತನ್ನಿ. ಹೀಗೆ ಸಂಗ್ರಹಿಸಿದ ಹಣವನ್ನು 3 ತಿಂಗಳು ಅಥವಾ 6 -9-12 ತಿಂಗಳಿಗೊಮ್ಮೆ ಗೋಶಾಲೆಗೆ ಕಳುಹಿಸಬಹುದು.

ಅಥವಾ ನಿತ್ಯ ಗೋಗ್ರಾಸ ಸೇವಾ ವ್ರತಕ್ಕೆ ರೂ. 2200/- ರೂ. ಗಳನ್ನು ನೀಡಬಹುದು. 2000/- ರೂ.ಗಳನ್ನು ಮೂಲನಿಧಿಯನ್ನಾಗಿಟ್ಟುಕೊಂಡು ಅದರಿಂದ ಬರುವ ಬಡ್ಡಿಯಲ್ಲಿ ತಾವು ಸೂಚಿಸಿದ ತಿಥಿ/ದಿನಾಂಕದಂದು ಪ್ರತಿವರ್ಷ ಶ್ರೀಯಲಗೂರೇಶನಿಗೆ ಕ್ಷೀರಾಭಿಷೇಕ ಹಾಗೂ ಗೋಗ್ರಾಸ ಸೇವೆಯನ್ನು ತಮ್ಮ ಹೆಸರಿನಿಂದ ಪೂರೈಸಿ ತಾವು ಸೂಚಿಸಿದ ವಿಳಾಸಕ್ಕೆ ಪ್ರಸಾದ ಕಳಿಸಲಾಗುವುದು. ಈ ನಿತ್ಯ ಗೋಗ್ರಾಸ ಯಜ್ಞದಲ್ಲಿ ನಿಮ್ಮ ಕುಟುಂಬದವರೆಲ್ಲ ಪಾಲ್ಗೊಳ್ಳಿ, ನಿಮ್ಮ ಬಂಧು ಬಳಗದವರಿಗೆಲ್ಲ ತಿಳಿಸಿ ಅವರನ್ನೂ ಪಾಲ್ಗೊಳ್ಳುವಂತೆ ಮಾಡಿರಿ.

**ಸೇವೆಗಳು :- 1. ಪ್ರತ್ಯಕ್ಷ ಗೋದಾನ ಸೇವೆ. 2. ಸಂಕಲ್ಪ ಗೋದಾನ ಸೇವೆ. 3. ಕೇಂದ್ರದ ಎಲ್ಲಾ ಗೋವುಗಳಿಗೆ ಒಂದು ದಿನದ ಗೋಗ್ರಾಸ ಸೇವೆ. 4. ಯಥಾಶಕ್ತಿ ಸೇವೆ.**



**ಹಣ ಕಳುಹಿಸುವವರು : Shri Pramodatma Go-Samrakshana Kendra Yalgur.**

**S B account Syndicate bank as Yalgur**

**IFSC SYNB0000847 a/c no. 08472200027419**

**ಸೇವೆಗಾಗಿ ಸಂಪರ್ಕಿಸಿ :- ಅಜಿತ ಕುಲಕರ್ಣಿ . 9448190933**

## ಮಾಧ್ವ ದಕ್ಷಿಣ ಯಾತ್ರೆ | ಅಧಿಕಮಾಸ ವಿಶೇಷ ಕಾರ್ಯಕ್ರಮ

ಮಾಧ್ವ ದಕ್ಷಿಣ ಯಾತ್ರೆ, ಬೆಂಗಳೂರು/ಚೆನ್ನೈ ಅವರು ಅಧಿಕ ಮಾಸದ ವಿಶೇಷ ಕಾರ್ಯಕ್ರಮ ದ ನಿಮಿತ್ತ ಪವಿತ್ರ ಸ್ಥಳ ಕಂಚಿ (ತಮಿಳುನಾಡು)ಕ್ಷೇತ್ರ ದಲ್ಲಿ ದಿನಾಂಕ 4-10-2020 ರಿಂದ 10-10-2020 ರ ವರೆಗೆ ಮೈಸೂರ್ ಶ್ರೀ ಬಿ. ಎನ್. ವಿಜೇಂದ್ರ ಚಾರ್ ಅವರಿಂದ ಶ್ರೀ ಮದ್‌ಭಾಗವತ ಸಪ್ತಾಹ ಆಯೋಜಿಸಲಾಗಿದೆ.

**ಸಾಮೂಹಿಕ ವಸತಿ, ತೀರ್ಥಪ್ರಸಾದ, ಕಾಫಿ, ತಿಂಡಿ ಎಲ್ಲ ಏಳು ದಿನಗಳೂ ಉಚಿತ**

ಪ್ರತ್ಯೇಕ ರೂಮ್ ವಸತಿ ಬೇಕಾದವರು ಪ್ರತ್ಯೇಕ ಚಾರ್ಜ್ ಕೊಡಬೇಕು. ಇದಲ್ಲದೆ ಅಪೂಪ ದಾನ, ಹೋಮ, ಕ್ಷೇತ್ರವಿಧಿ ನಡೆಸಲು ವ್ಯವಸ್ಥೆ ಮಾಡಿಕೊಡಲಾಗುವುದು (ಇದರ ಖರ್ಚು ವೆಚ್ಚವನ್ನು ಮುಂದೆ ತಿಳಿಸಲಾಗುವುದು )

ಇತರೆ ಖರ್ಚುಗಳಿಗಾಗಿ ಈ ಕಾರ್ಯಕ್ರಮ ದಲ್ಲಿ ಭಾಗವಹಿಸಲು ಒಬ್ಬರಿಗೆ ರೂ 3800/- ನಿಗದಿಮಾಡಲಾಗಿದೆ. ಇದನ್ನು ದಿ. 20-07-2020 ರ ಒಳಗೆ ಪಾವತಿಸಿ ರೆಜಿಸ್ಟರ್ ಮಾಡಿಕೊಳ್ಳಬೇಕು.

ಕೋವಿದ್19 ನಿಯಮಗಳಿಗೆ ಅನುಗುಣವಾಗಿ ಮುಂದೆ ಏನಾದರು ನಿರ್ಬಂಧ ಉಂಟಾದರೆ ರೈಲು ಕ್ಯಾನ್ಸಲ್ಲೇಷನ್ ಚಾರ್ಜ್ ಮತ್ತು ಸಿದ್ಧತೆ ಖರ್ಚು ರೂ 200 ಹಿಡಿದು ಕೊಂಡು ಮಿಕ್ಕ ಹಣ ವಾಪಸ್ಸು ಕೊಡಲಾಗುವುದು.

**ಸಂಪರ್ಕಿಸಿ** ಃ ೧)ಆರ್. ಗೋಪಾಲ ಕೃಷ್ಣ, ಬೆಂಗಳೂರು 7708157378 ೨) ಹೆಚ್. ಆರ್ ಸತ್ಯನಾರಾಯಣ, ಬೆಂಗಳೂರು 9886931086 ೩) ಜಿ. ರವಿಚಂದ್ರನ್, ಚೆನ್ನೈ 9941879985

**ಸೂಚನೆ : ಕೋವಿಡ್ 19 ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಲಾಗುವುದು.**


**Anuraga Matrimony**

Exclusive Website for Brahmin Community

📞 8105626363

www.anuragamatrimony.com

**ತ್ರಿಮತಸ್ಥ ಬ್ರಾಹ್ಮಣ ವಧು-ವರಾನ್ವೇಷಣೆಗಾಗಿ ವಿಶೇಷ ವೆಬ್‌ಸೈಟ್**

**ಉಚಿತ ರಿಜಿಸ್ಟ್ರೇಷನ್**

- ಈ ವೆಬ್‌ಸೈಟ್ ಕೇವಲ ಬ್ರಾಹ್ಮಣ ಮತಸ್ಥ ವಧು-ವರಾನ್ವೇಷಣೆಗಾಗಿ ಮೀಸಲು.
- ಮನೆಯಲ್ಲೇ ಕುಳಿತು ವಧು-ವರಾನ್ವೇಷಣೆ ಮಾಡಲು ಒಂದು ಸುವರ್ಣಾವಕಾಶ.
- ಸ್ಮಾರ್ತ, ವೈಷ್ಣವ, ಶ್ರೀವೈಷ್ಣವರ ಎಲ್ಲಾ ಉಪಪಂಗಡಗಳ ವಧು-ವರರ ಪ್ರತ್ಯೇಕ ಅನ್ವೇಷಣೆ ಸಾಧ್ಯ.
- ಎಲ್ಲಾ ವಯಸ್ಸು, ವಿದ್ಯಾರ್ಹತೆ, ಉದ್ಯೋಗಸ್ಥ ವಧು-ವರರಿಗೂ ಸದಸ್ಯತ್ವಕ್ಕೆ ಅವಕಾಶವಿದೆ.
- ವಧು-ವರರನ್ನು ಗೋತ್ರ, ನಕ್ಷತ್ರ, ಉಪಪಂಗಡ, ವಯ್ಯಸ್ಸು, ವಿದ್ಯಾರ್ಹತೆ, ಉದ್ಯೋಗ ಇನ್ನಿತರ ವಿವರಗಳಿಂದ ಹುಡುಕಿ ವಿಂಗಡಿಸಬಹುದು.

**ಬೆಂಗಳೂರು ವಿಳಾಸ** **#619/A, 4**ನೇ ಕ್ರಾಸ್, **5**ನೇ ಮೈನ್, ಹನುಮಂತನಗರ, ಬೆಂಗಳೂರು-**19**
ಕೆಲಸದ ವೇಳೆ-ಬೆಳಗ್ಗೆ **10** ರಿಂದ ಸಂಜೆ **7** ಘಂಟೆ. ಭಾನುವಾರ ರಜಾ.
**Ph : 8105626363.**

**ಮೈಸೂರು ವಿಳಾಸ** **#35, 1**ನೇ ಕ್ರಾಸ್, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ ಮೈಸೂರು-**9.**
ಕೆಲಸದ ವೇಳೆ-ಸಂಜೆ **4** ರಿಂದ **7** ಘಂಟೆ. **Ph : 0821-2541697.**

ದಾಸೋಹಂ ತವ ದಾಸೋಹಂ

ವಿಶ್ವ ಮಧ್ವ ಮಹಾ ಪರಿಷತ್ತಿನ ಅಂಗಸಂಸ್ಥೆ

# ಸೌರಭ ದಾಸಸಾಹಿತ್ಯ ವಿದ್ಯಾಲಯ

## ನಾಲ್ಕನೇ ವರ್ಷದ ನೊಂದಣಿ ಪ್ರಾರಂಭ 2020

## ಜೂನ್ 23 ರಿಂದ ಜುಲೈ 30 ರ ವರೆಗೆ

## ಹೆಮ್ಮೆಯ ಹೆಜ್ಜೆಗಳು

- 3 ವರ್ಷದಲ್ಲಿ 8 ದೇಶಗಳಲ್ಲಿ, ಭಾರತದ 6 ರಾಜ್ಯಗಳಲ್ಲಿ, 65 ಕೇಂದ್ರಗಳಲ್ಲಿ ಅಧ್ಯಯನ.
- 8 ರಿಂದ 80 ವರ್ಷದ 5 ಸಹಸ್ರ ಸ್ತ್ರೀ ಪುರುಷರಿಗೆ ಜ್ಞಾನ, ನೆಮ್ಮದಿ, ಧರ್ಮಬುದ್ಧಿಯ ಅಭಿವೃದ್ಧಿ.
- ವಾರ್ಷಿಕೋತ್ಸವದ 25 ಸ್ಪರ್ಧೆಗಳಲ್ಲಿ ವಿವಿಧ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ.
- ಮನೆಯಲ್ಲೇ ಅಧ್ಯಯನ. ಅಪೇಕ್ಷಿಸಿದ ಸ್ಥಳದಲ್ಲಿ ಪರೀಕ್ಷಾ. ಸರಳ ಸಾಧನೆ ವಿರಳ ಫಲ.
- ಆಡಿಯೋ, ಪುಸ್ತಕ, ಪಾಠ, ಆನ್‌ಲೈನ್‌ಶಿಬಿರ, ಪ್ರಶ್ನೋತ್ತರ, ಚರ್ಚೆ ಮೂಲಕ ನಿಮಗೆ ಸಹಾಯ.
- ದಾಸರಭಾಷೆ (ಕನ್ನಡ) ಯಲ್ಲಿ ಪಠ್ಯವಿದ್ದರೂ ತೆಲುಗು, ತಮಿಳು, ದೇವನಾಗರಿ, ಆಂಗ್ಲ ಲಿಪಿ ಯಲ್ಲಿ ಪ್ರಶ್ನೆ ಪತ್ರಿಕೆ.

### ಸಿದ್ಧವಾದ ಪರೀಕ್ಷಾ ಕೇಂದ್ರಗಳು.

| | | | | |
|---|---|---|---|---|
| 1. Bengalore | 14. Sholapur | 27. Koiambattur | 40. Athani | 53. Harihara |
| 2. Chennai | 15. Hosur | 28. Siruguppa | 41. Jamkhandi | 54. Ranibennur |
| 3. Hyderabad | 16. Anantapur | 29. Hospet | 42. Sindagi | 55. Haveri |
| 4. Mumbai | 17. Adoni | 30. Gangavathi | 43. Bagalkot | 56. Chitradurga |
| 5. Goa | 18. Kapada | 31. Kushtagi | 44. Kalburgi | 57. Tirupura |
| 6. Koppala | 19. Palamur | 32. Hanumasagara | 45. Yadagiri | 58. Dubai |
| 7. Vijayapura | 20. Mysore | 33. Hubli | 46. Lingasuru | 59. Newziland |
| 8. Pune | 21. Kushalanagar | 34. Dharwad | 47. Surapura | 60. America |
| 9. Kolhapur | 22. Sivamogga | 35. Belagavi | 48. Kembhavi | 61. Africa |
| 10. Meeraj | 23. Tumkur | 36. Gokak | 49. Raichur | 62. Singapur |
| 11. Madhurai | 24. Bellary | 37. Udupi | 50. Lakshmipur | 63. Paris |
| 12. Indi | 25. Ramadurga | 38. Kukunuru | 51. Bagevadi | 64. England |
| 13. Hanagal | 26. Gadag | 39. Selam | 52. Hindupur | 65. Australia |

ಸೂಚನೆ : 25 ಕ್ಕೂ ಹೆಚ್ಚು ಜನ ಪರೀಕ್ಷೆ ಬರೆಯುವ ಕೇಂದ್ರಗಳು ಈ ವರ್ಷ ಇನ್ನು ಹೆಚ್ಚಾಗಲಿವೆ.

### ನಿಮ್ಮ ಕಾರ್ಯ

ಪೂರ್ಣ ಪಠ್ಯಪುಸ್ತಕ, ವರ್ಷದ ಅಧ್ಯಯನ ಪರೀಕ್ಷೆ ಮುಂತಾದ ಸಕಲ ಕಾರ್ಯಕ್ಕಾಗಿ ಕೇವಲ 500 ರೂ ಮತ್ತು 2 ಫೋಟೋ ನೀಡಿ ನೊಂದಣಿ ಮಾಡಿಸಿ, ವಾಟ್ಸಾಪ್ ಇದ್ದ ನಂಬರ್ ನೀಡುವುದು.

### ಹೆಚ್ಚಿನ ಮಾಹಿತಿಗಾಗಿ

ಶ್ರೀ ಪಂ. ಪ್ರಮೋದಾಚಾರ್ಯ- ಅಧ್ಯಕ್ಷರು, ಸೌರಭ ವಿದ್ಯಾಲಯ. 9916029793, 9611461895

ಮೇಲಿನ ಯಾವುದೇ ಕೇಂದ್ರದ ವ್ಯವಸ್ಥಾಪಕರನ್ನು ಅಥವಾ ಸದಸ್ಯರನ್ನು ಸಂಪರ್ಕಿಸ ಬಹುದು.

### ಓದಿದ ''ಶ್ರೀಸುಧಾ'' ಪುಸ್ತಕ ನಿಮಗೆ ಬೇಡವಾಗಿದೆಯೇ !!!

ಮಾನ್ಯರೆ ! ತಾವು ಈ ಹಿಂದೆ ಓದಿದ ಶ್ರೀಸುಧಾ ಮಾಸಪತ್ರಿಕೆಗಳನ್ನು ನಿಮಗೆ ಮನೆಯಲ್ಲಿ ಇಟ್ಟುಕೊಳ್ಳಲು ಬೇಸರ ಇದ್ದರೆ 12 ತಿಂಗಳ ಪ್ರತಿಗಳನ್ನು ಸೇರಿಸಿ ಸುಂದರ ಬೈಂಡ್ ಮಾಡಿಸಿ ನಿಮ್ಮ ಊರಿನ ಶ್ರೀಮಠಕ್ಕೆ ತಲುಪಿಸಿ. ಅಲ್ಲಿ ಯಾರಾದರೂ ಒಂದುವರ್ಷದ ಸಂಪೂರ್ಣ ಪತ್ರಿಕೆಗಳನ್ನು ಓದಿ ಆನಂದಿಸುತ್ತಾರೆ. (ಬಿಡಿ ಬಿಡಿ ಪ್ರತಿಗಳನ್ನು ರದ್ದಿಗೆ ಹಾಕಬೇಡಿ.)

# JSPN Educational Scholarship



More than 4500 have benefitted from Educational scholarship

Meritorious and poor students are offered scholarship based on need and fund availibility

Every year about Rs.20,00,000.00 is distributed

## ಆಷಾಢ ಏಕಾದಶೀ ವಿಶೇಷ ಸೇವಾ ಅವಕಾಶ

ಭಕ್ತರೇ ..

ಮತ್ತೆ ಬಂತು **ಪ್ರಥಮ ಏಕಾದಶೀ**. ಪ್ರತೀವರ್ಷ ಸಾವಿರಾರು ಶ್ರದ್ಧಾಳುಗಳು ಸೇರುವ ಸಂಭ್ರಮದ ಪವಿತ್ರ ದಿನ. ಗುರುಗಳಿಂದ ತಪ್ತಮುದ್ರೆಯನ್ನು ಸ್ವೀಕರಿಸಿ ಪಾವನರಾಗುತ್ತಿದ್ದ ದಿನ. ಈ ಸಂದರ್ಭದಲ್ಲಿ ತಾವೆಲ್ಲಾ **ಪ್ರತಿವರ್ಷ ಗೋ ಸಂರಕ್ಷಣೆ, ವಿದ್ಯಾಪೋಷಣೆಗಾಗಿ** ಉದಾರವಾಗಿ ಸೇವೆಯನ್ನು ಮಾಡಿ ಪುಣ್ಯ ಸಂಪಾದಿಸುತ್ತಿದ್ದ ಪರ್ವ ದಿನ ಇದು. ಆದರೆ ಈ ಬಾರಿ ಮಹಾಮಾರಿಯ ದರಬಾರು. ನಮ್ಮನ್ನೆಲ್ಲಾ ಒಂದೆಡೆ ಸೇರಲು ಬಿಡುತ್ತಿಲ್ಲ. ಗುರುಗಳಿಂದ ತಪ್ತಮುದ್ರಾಧಾರಣೆ ಸ್ವೀಕರಿಸಲು ನಾವು ಇನ್ನೂ ಸ್ವಲ್ಪ ದಿನ ಕಾಯೋಣ. ಆದರೆ **ನಮಗಾಗಿ ಕಾಯುತ್ತಿರುವ ಗೋವುಗಳನ್ನು, ವಿದ್ಯಾರ್ಥಿಗಳನ್ನು ನಿರಾಶೆ ಮಾಡುವುದು ಬೇಡ**. ಪ್ರತಿವರ್ಷದಂತೆ ಈ ವರ್ಷವೂ ***ಗೋಸಂರಕ್ಷಣೆಗಾಗಿ, ವಿದ್ಯಾರ್ಥಿಗಳ ಪೋಷಣೆಗಾಗಿ*** ನಮ್ಮ ಯಥಾಶಕ್ತಿ ಸೇವೆಯನ್ನು ತಪ್ಪದೇ ಮುಂದುವರಿಸೋಣ.

**ಸೇವೆ ಮಾಡಲು ಅಪೇಕ್ಷೆ ಇರುವ ಭಕ್ತರು ಈ ಕೆಳಗಿನ ವಿವರಗಳನ್ನು ಗಮನಿಸಿ –**

## Special Seva Opportunity for Ashada Ekadashi

Devotees,

We are on the verge of **Pratham Ekadashi**. The auspicious day for thousand's of Madhwa's to get together to seek the blessings of swamigalu will have to wait due to the current Pandemic. Most of **us are used to donate for Go Seva and JSPN educational Scholarship** every year. Let us not keep the ***cows and the needy students*** waiting for scholarship to continue their studies.

**Here is the opportunity to donate liberally and be a part of caring Madhwa Society.**

### Online payment By Payment Gateway

http://www.srijspn.org/main/donate.html

### By Electronic Fund Transfer

| | |
|---|---|
| Account Name | : Jaya Satya Pramoda Nidhi |
| Account Number | : 10421685708 |
| Bank Name | : State Bank of India |
| Branch | : Basavanagudi, Bangalore |
| IFSC | : SBIN0003357 |

RNI:KARKAN/2012/46136 "REGISTERED":RNP/KA/BGS/2181/2018-2020
Licenced to post without prepayment Licence No.WPP-281
Office of Posting Bangalore PSO BG - 560 026
No.of Pages : 56+4, Published & Date of Posting 7th of every Month.




Smt / Shri

**3 years : 200/-**
**10 years : 600/-**
**20 years : 1000/-**
**Promoters**
**2000/- & above**

If undelivered, return to sender

: From :
**Publisher, Srisudha Monthly Magazine**
Shri Jayateertha Vidyapeetha, Uttaradi Math,
Basavanagudi, **BANGALORE - 560 004**
Phone: 080 - 22429132, +91 8762629132
sudhamagazineum@gmail.com
http://srijspn.org/main/srisudha.html

ಬಿಡಿಪ್ರತಿ: ರೂ.10.

Scan to pay

SRISUDHA : Printed & Published by Sri S. B. Venkat Rao on behalf of Jayasathyapramoda Nidhi Trust, Jayathirtha Vidyapeetha, Uttaradi Math, Basavanagudi, Bangalore-560 004. The said periodical is printed at **Vagartha** No. 149, 8th Cross,N.R.Colony, Bangalore.
This Monthly is Edited by **Pt. Vidyadheeshacharya Guttal.**